Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

JANASHAKTHI KANNADA VARA PATRIKE

ಸಂಪುಟ–17 ಸಂಚಿಕೆ–36 ಸೆಪ್ಟೆಂಬರ್ 4–10, 2023 ಪುಟ 16 ರೂ. 10/–
Volume-17 Issue-36 September 4-10, 2023 Pages:16 Price: 10/-



ಸಿದ್ದರಾಮಯ್ಯನವರ ಸರ್ಕಾರ ನೂರು ದಿನಗಳು ಕಳೆದಿವೆ...

ಮುಂದಿನ ದಿನಗಳು ಹೇಗೆ?



ಸೌಜನ್ಯ ಪ್ರಕರಣ

ನ್ಯಾಯಕ್ಕಾಗಿ ವಿಸ್ತಾರಗೊಳ್ಳುತ್ತಿರುವ ಪ್ರತಿರೋಧ

ಎಲೆಕ್ಟ್ರಿಕ್ ಬಸ್ಸುಗಳು: ಖಾಸಗೀಕರಣಕ್ಕೆ ಇಟ್ಟ ಹೆಜ್ಜೆ

ಶಿಕ್ಷಣ ವ್ಯವಸ್ಥೆಯಲ್ಲಿ ಮುಸ್ಲಿಂ ವಿರೋಧಿ ಟಾರ್ಗೆಟ್

ಪಕ್ಷದ ಎಲ್ಲಾ ಘಟಕಗಳು ಬೆಲೆ ಏರಿಕೆ ವಿರುದ್ಧ ಮತ್ತು ಉದ್ಯೋಗ ಸೃಷ್ಟಿಗಾಗಿ 1–7 ಸೆಪ್ಟೆಂಬರ್ 2023 ಅಖಿಲ ಭಾರತ ಪ್ರತಿಭಟನಾ ವಾರವನ್ನು ಆಚರಿಸಲು ಸಿಪಿಐ(ಎಂ) ಕೇಂದ್ರ ಸಮಿತಿ ಕರೆ ನೀಡಿದೆ. ಈ ಕರೆಯ ಭಾಗವಾಗಿ ಒಕ್ಕೂಟ ಸರಕಾರದ ಜನ ವಿರೋಧಿ ಹಾಗೂ ಪ್ರಜಾಪ್ರಭುತ್ವ ವಿರೋಧಿ ನಿಲುವುಗಳನ್ನು ವಿರೋಧಿಸಿ, ರಾಜ್ಯಕ್ಕೆ ನೀಡುವ ಅನುದಾನ ಹೆಚ್ಚಿಸಿ, ಜಿಎಸ್‌ಟಿ ಬಾಕಿ ವಿತರಿಸಿ ಎಂಬ ಬೇಡಿಕೆಗಳ ಜೊತೆಗೆ, ಬೆಲೆ ಏರಿಕೆ ನಿಲ್ಲಿಸಿ, ಉದ್ಯೋಗ ಒದಗಿಸಿ, ಐದು ಕೆಜಿ ಹೆಚ್ಚುವರಿ ಅಕ್ಕಿ ಕೊಡಿ, ವಿದ್ಯುತ್ ಖಾಸಗೀಕರಣ ಕೈಬಿಡಿ ಎಂಬ ರಾಜ್ಯದ ಜನತೆಯ ಐದು ಹಕ್ಕೊತ್ತಾಯಗಳನ್ನು ಒತ್ತಾಯಿಸಿ, 2023ರ ಸೆಪ್ಟೆಂಬರ್ 1 ರಿಂದ 7ರ ರವರೆಗೆ ಸಿಪಿಐ(ಎಂ) ರಾಜ್ಯ ಸಮಿತಿ ರಾಜ್ಯಾದ್ಯಂತ ಹೋರಾಟಕ್ಕೆ ಕರೆ ನೀಡಿದೆ.

ಸೆಪ್ಟೆಂಬರ್ ಮೊದಲ ವಾರ ದೇಶಾದ್ಯಂತ ಪ್ರತಿಭಟನಾ ಆಚರಣೆಗೆ ಸಿಪಿಐ(ಎಂ) ಕರೆ

ಗಗನಕ್ಕೇರುತ್ತಿರುವ ಬೆಲೆಗಳು

ಒಕ್ಕೂಟದ ಬಿಜೆಪಿ ಸರಕಾರ ಮುಂದುವರಿಸುತ್ತಿರುವ ನವ ಉದಾರವಾದಿ ನೀತಿಗಳಿಂದ ಜನತೆ ಅದರಲ್ಲೂ ಬಡ ಜನತೆ ಬೆಲೆ ಏರಿಕೆಯ ಬರೆಯಿಂದ ನಲುಗುವಂತಾಗಿದೆ. ಅಗತ್ಯ ವಸ್ತುಗಳಾದ ಅಕ್ಕಿ ಬೇಳೆ, ಅಡುಗೆ ಎಣ್ಣೆ, ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್, ವಿದ್ಯುತ್, ಕೃಷಿ ಹೂಡಿಕೆಗಳಾದ ಬೀಜ, ರಸಾಯನಿಕ ಗೊಬ್ಬರ, ಕೀಟ ನಾಶಕ, ಕೃಷಿ ಉಪಕರಣಗಳು, ನಾಗರೀಕರ ಆರೋಗ್ಯದ ಔಷಧಿ ಬೆಲೆಗಳು, ಶೈಕ್ಷಣಿಕ ಸೌಲಭ್ಯದ ಡೊನೇಷನ್ ಹಾಗು ಫೀಸುಗಳ ಬೆಲೆಗಳು ಗಗನಮುಖಿಯಾಗಿವೆ.

ಈ ಎಲ್ಲ ಬೆಲೆ ಏರಿಕೆಯ ಹಿಂದೆ, ಕೇಂದ್ರ ಸರ್ಕಾರ ಅಗತ್ಯ ವಸ್ತುಗಳ ಬೆಲೆಗಳ ಮೇಲಿನ ನಿಯಂತ್ರಣ ವಾಪಾಸು ಪಡೆದುದು, ಸಹಾಯಧನಗಳ ಕಡಿತ ಮಾಡಿರುವುದು, ಮುಕ್ತ ವ್ಯಾಪಾರಕ್ಕೆ ದೇಶವನ್ನು ತೆರೆದುದು, ಡಾಲರ್ ಎದುರು ರೂಪಾಯಿ ಮೌಲ್ಯ ಪದೆಪದೇ ಕುಸಿಯುವಂತೆ ಮಾಡಿ ಹಣದುಬ್ಬರ ಹೆಚ್ಚಳವಾಗುವಂತೆ ಕ್ರಮವಹಿಸಿರುವುದು, ಅಪ್ರತ್ಯಕ್ಷ ತೆರಿಗೆಗಳ ಭಾರವನ್ನು ವಿಸ್ತರಿಸುತ್ತಿರುವುದು, ಜಿಎಸ್‌ಟಿ ಹೆಚ್ಚಳಕ್ಕೆ ಕ್ರಮ ವಹಿಸಿರುವುದು. ಕಾಳಸಂತೆ ಕೋರತನಕ್ಕೆ ಕುಮ್ಮಕ್ಕು ನೀಡಿರುವುದು, ಈ ಎಲ್ಲವು ಪ್ರಮುಖ ಕಾರಣಗಳಾಗಿವೆ. ಇದಕ್ಕೆ ಕೇಂದ್ರ ಸರಕಾರವೇ ನೇರ ಹೊಣೆಗಾರನಾಗಿದೆ.

ನರೇಂದ್ರ ಮೋದಿ ಸರ್ಕಾರದ ಈ ಒಂಬತ್ತು ವರ್ಷಗಳಲ್ಲಿ ಎಲ್ಲಾ ರೀತಿಯ ಅಗತ್ಯ ವಸ್ತುಗಳ ಬೆಲೆಗಳು ಶೇ. ನೂರರಿಂದ ಏಳುನೂರರಷ್ಟು ಹೆಚ್ಚಾಗಿದೆ. ಬೆಲೆ ಏರಿಕೆಯನ್ನು ತಡೆಯಲಾಗದ ಸರಕಾರ ನಮ್ಮ ದೇಶವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕತೆ ಎಂದು ಬಡಾಯಿ ಕೊಚ್ಚಿಕೊಳ್ಳುತ್ತಿದೆ. ಚಿಲ್ಲರೆ ಬೆಲೆಯಲ್ಲಿನ ಹೆಚ್ಚಳವು ಈ ವರ್ಷದ ಜೂನ್‌ನಲ್ಲಿ ಶೇ. 4.87 ರಿಂದ ಜುಲೈನಲ್ಲಿ ಶೇ. 7.44 ಕ್ಕೆ ಏರಿದೆ. ಸರಕುಗಳ ಬೆಲೆ ಶೇ.11.5, ತರಕಾರಿ ಬೆಲೆ ಶೇ. 37.3, ಧಾನ್ಯಗಳು ಮತ್ತು ಬೇಳೆಕಾಳುಗಳು ಶೇ.13, ಸಾಂಬಾರ ಪದಾರ್ಥಗಳು ಶೇ. 21.6 ಮತ್ತು ಹಾಲು ಶೇ. 8.34ರಷ್ಟು ಏರಿಕೆಯಾಗಿದೆ. ಜೂನ್ ತಿಂಗಳಿಗೆ ಹೋಲಿಸಿದರೆ ಜುಲೈನಲ್ಲಿ ತರಕಾರಿ ಬೆಲೆ ಶೇ 81.1 ರಷ್ಟು ಹೆಚ್ಚಾಗಿದೆ. ಇದು ಕಳೆದ ಹತ್ತು ವರ್ಷಗಳಲ್ಲಿಯೇ ಗರಿಷ್ಠ ಏರಿಕೆಯಾಗಿದೆ. ಈ ಬೆಲೆ ಏರಿಕೆಯ ಪರಿಣಾಮ ಬಡ ಮತ್ತು ಮಧ್ಯಮ ವರ್ಗದ ಜನರ ಜೀವನಶೈಲಿಯ ಮೇಲೆ ತೀವ್ರ ಪರಿಣಾಮ ಬೀರಲಿದೆ. ಒಂದೆಡೆ ಬೆಲೆ ಏರಿಕೆ, ಮತ್ತೊಂದೆಡೆ ಅದಕ್ಕೆ ತಕ್ಕಂತೆ ಜನರ ಆದಾಯದಲ್ಲಿ ಹೆಚ್ಚಳವಾಗುತ್ತಿಲ್ಲ. ಈ ಕಾರಣದಿಂದಾಗಿ, ಜನರು ಪಡೆಯುತ್ತಿದ್ದ ಆಹಾರವನ್ನು ಸಹ ಪಡೆಯಲು ಸಾಧ್ಯವಿಲ್ಲದಂತಾಗಿದೆ. ಆಹಾರ ಸಮಸ್ಯೆಯಿಂದಾಗಿ ಆರೋಗ್ಯ ಸಮಸ್ಯೆಗಳು ಈ ಸಮುದಾಯಗಳ ಮೇಲೆ ದಾಳಿ ಮಾಡುತ್ತವೆ. ಮೋದಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲಿ 450 ರೂಪಾಯಿ ಇದ್ದ ಗ್ಯಾಸ್ ಸಿಲಿಂಡರ್ ಬೆಲೆ ಇಂದು 1150 ರೂಪಾಯಿಗೆ ಏರಿದೆ. (ಮುಂಬರುವ ಚುನಾವಣೆಗಳನ್ನು ದೃಷ್ಟಿಯಲ್ಲಿಟ್ಟು ಆಗಸ್ಟ್ 29ರಿಂದ ಗೃಹಬಳಕೆಯ ಸಿಲಂಡರ್ ದರವನ್ನು 200 ರೂ ಇಳಿಕೆ ಮಾಡಿ ಮೋದಿ ಸರ್ಕಾರ ಘೋಷಣೆ ಮಾಡಿದೆ). ಪೆಟ್ರೋಲ್ ಮತ್ತು ಡೀಸೆಲ್ ದರಗಳ ಏರಿಕೆ ಅಂತ್ಯವೇ ಇಲ್ಲದೆ ಹೆಚ್ಚುತ್ತಲೇ ಇವೆ. ಬೇಳೆಕಾಳುಗಳ ಬೆಲೆ 80 ರಿಂದ 160 ರೂ.ಗೆ ಏರಿಕೆಯಾಗಿದೆ. ಈ ತಿಂಗಳೊಂದರಲ್ಲೇ ಅಡುಗೆ ಎಣ್ಣೆ ಬೆಲೆ ಶೇ. 22ರಷ್ಟು ಏರಿಕೆಯಾಗಿದೆ. ಜನರಿಗೆ ಅಕ್ಕಿ ನೀಡುವ ಬದಲು ಎಥೆನಾಲ್ ತಯಾರಕರ ಲಾಭಕ್ಕಾಗಿ ಬಿಳಿ ಅಕ್ಕಿ ರಫ್ತು ನಿಷೇಧಿಸಿದೆ. ಬೆಲೆ ಏರಿಕೆ ಜತೆಗೆ ತೆರಿಗೆಯೂ ಹೆಚ್ಚುತ್ತಿದೆ. ಮೋದಿ ಸರಕಾರ ಜಾರಿಗೆ ತಂದ ಜಿಎಸ್‌ಟಿ ತೆರಿಗೆ ವ್ಯವಸ್ಥೆಯಿಂದ ಕೇಂದ್ರಕ್ಕೆ ಬರುತ್ತಿರುವ ತೆರಿಗೆ ಆದಾಯ ಮೂರು ತಿಂಗಳಿಗೊಮ್ಮೆ ಹೆಚ್ಚಾಗುತ್ತಿದೆ. ಈ ಬೆಳವಣಿಗೆಯನ್ನು ತೋರಿಸುವ ಮೂಲಕ ಮೋದಿ ಪರ ಮಾಧ್ಯಮಗಳು ದೇಶದಲ್ಲಿ ಮಧ್ಯಮ ವರ್ಗ ಬೆಳೆದಿದೆ ಎಂಬ ವಿಕೃತ ವಾದಗಳನ್ನು ಮಾಡುತ್ತಿವೆ. ಪ್ರಧಾನಿಯವರು ವಾಸ್ತವವನ್ನು ತಲೆಕೆಳಗಾಗಿಸಿ ನಮ್ಮ ದೇಶದ ದೊಡ್ಡ ಮಾರುಕಟ್ಟೆ ಬೆಳೆಯುತ್ತಿರುವ ಮಧ್ಯಮ ವರ್ಗ ಎಂದು ಹೇಳುತ್ತಿದ್ದಾರೆ.

ಸರಕುಗಳ ಅಕ್ರಮ ಸಂಗ್ರಹದ ವಿರುದ್ಧ ಕ್ರಮವಿಲ್ಲ

ಬೆಲೆ ಏರಿಕೆಗೆ ಕಡಿವಾಣ ಹಾಕುವಲ್ಲಿ ಕೇಂದ್ರ ಸರ್ಕಾರ ಉದ್ದೇಶಪೂರ್ವಕ ನಿರ್ಲಕ್ಷ್ಯ ಅನುಸರಿಸುತ್ತಿದೆ. ಅಕ್ರಮವಾಗಿ ಸರಕುಗಳನ್ನು ಬಚ್ಚಿಟ್ಟು ಬೆಲೆ ಏರಿಕೆಗೆ ಕಾರಣವಾಗುತ್ತಿರುವವರ ತಪಾಸಣೆ ನಿಲ್ಲಿಸಿದೆ. ಇದರಿಂದ ಸರಕಿನ ಕೃತಕ ಅಭಾವ ಸೃಷ್ಟಿಯಾಗಿ ದೊಡ್ಡ ವ್ಯಾಪಾರಿಗಳು ಲಾಭ ಗಳಿಸುತ್ತಿದ್ದರೆ, ಬೆಳೆ ಬೆಳೆದ ರೈತರು ದಿವಾಳಿಯಾಗುತ್ತಿದ್ದಾರೆ. ಬೆಲೆ ಏರಿಕೆಯಿಂದ ಜನರನ್ನು ರಕ್ಷಿಸಲು ಸಾರ್ವಜನಿಕ ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಕನಿಷ್ಠ ಸರಕುಗಳನ್ನು ಪೂರೈಸಬೇಕಾದ ಕೇಂದ್ರವು, ತನ್ನ ಎಫ್‌ಸಿಐ ಗೋಡೌನ್‌ಗಳಲ್ಲಿ ಸಂಗ್ರಹವಾಗಿರುವ ಧಾನ್ಯವನ್ನು ರಾಜ್ಯಗಳಿಗೆ ವಿತರಿಸದೆ ಅತ್ಯಂತ ಕ್ರೂರವಾಗಿ ವರ್ತಿಸುತ್ತಿದೆ. ಬೆಲೆ ಏರಿಕೆ ಬಗ್ಗೆ ಕೇಂದ್ರವನ್ನು ಪ್ರಶ್ನಿಸಬೇಕಾದ ರಾಜ್ಯ ಸರ್ಕಾರ ಮೋದಿಯವರ ನೀತಿಗಳನ್ನು ಜಾರಿಗೆ ತರಲು ಮುಂದಾಗಿದೆ. ಬೆಲೆಗಳ ಹೆಚ್ಚಳವು ಬಡತನ ಮತ್ತು ಹಸಿವನ್ನು ಹೆಚ್ಚಿಸುತ್ತದೆ. 2019ರ ವೇಳೆಗೆ ದೇಶದಲ್ಲಿ 3 ಕೋಟಿ 46 ಲಕ್ಷ ಜನರು ಬಡತನ ರೇಖೆಗಿಂತ ಕೆಳಗಿದ್ದಾರೆ ಎಂದು ಸಂತೋಷ್ ಮೆಹ್ರೋತ್ರಾ ವಿಶ್ಲೇಷಿಸಿದ್ದಾರೆ. ಕೇಂದ್ರ ಸರ್ಕಾರವು 2019 ರಿಂದ ಬಡತನದ ಅಂಕಿಅಂಶಗಳನ್ನು ಪ್ರಕಟಿಸುವುದನ್ನು ನಿಲ್ಲಿಸಿದೆ. ಸಾಂಖ್ಯಿಕ ಇಲಾಖೆ ದುರ್ಬಲಗೊಂಡಿದೆ.

ವರ್ಷಕ್ಕೆ ಎರಡು ಕೋಟಿ ಉದ್ಯೋಗ ಎಲ್ಲಿ?

ದೇಶದ ಒಟ್ಟು ಜನಸಂಖ್ಯೆಯ ಶೇಕಡಾ 65 ರಷ್ಟು ಜನರು 28 ವರ್ಷಕ್ಕಿಂತ ಕಡಿಮೆ ವಯಸ್ಸಿನವರು ಮತ್ತು 45 ರಷ್ಟು ಜನಸಂಖ್ಯೆಯು 25 ವರ್ಷಕ್ಕಿಂತ ಕಡಿಮೆ ವಯಸ್ಸಿನವರು. 2014ರ ಚುನಾವಣೆಯ ವೇಳೆ ಯುವಕರಿಗೆ ವರ್ಷಕ್ಕೆ ಎರಡು ಕೋಟಿ ಉದ್ಯೋಗ ನೀಡುವುದಾಗಿ ಭರವಸೆ ನೀಡಿ ಅವರ ಮತಗಳನ್ನು ಪಡೆದು ಮೋದಿ ಅಧಿಕಾರಕ್ಕೆ ಬಂದಿದ್ದರು. ಹೊಸ ಉದ್ಯೋಗ ಸೃಷ್ಟಿಸುವುದಿರಲಿ, ಇದ್ದ ಕೆಲಸಗಳನ್ನು ರದ್ದುಗೊಳಿಸಲಾಗಿದೆ. ನಿರುದ್ಯೋಗ ದರವು 2017–18 ರಲ್ಲಿ ಶೇ. 4.7 ಮತ್ತು 2018–19 ರಲ್ಲಿ ಶೇ. 6.3 ಕ್ಕೆ ಏರಿತು. ಕರೋನಾದಿಂದಾಗಿ 2020 ರಲ್ಲಿ ಇದು ಶೇ. 9.1 ಕ್ಕೆ ತಲುಪಿತ್ತು. ಕರೋನಾ ನಂತರ ಆರ್ಥಿಕತೆಯು ಚೇತರಿಸಿಕೊಂಡಿದೆ ಮತ್ತು ಅದು ಮತ್ತೆ ವೇಗವಾಗಿ ಬೆಳೆಯುತ್ತದೆ ಎಂದು ಕೇಂದ್ರ ಆಡಳಿತಗಾರರು ಹೇಳಿದ್ದಾರೆ. ಆದರೆ, ಸತ್ಯವನ್ನು ಮರೆಮಾಚಲು ಸಾಧ್ಯವಿಲ್ಲ! ನಿರುದ್ಯೋಗವು 2022 ರ ವೇಳೆಗೆ ಶೇ. 8.3 ಮತ್ತು ಮಾರ್ಚ್ 2023 ರ ವೇಳೆಗೆ ಶೇ. 7.8 ಕ್ಕೆ ತೀವ್ರವಾಗಿ ಏರಿದೆ. ಈ ಜುಲೈ ವೇಳೆಗೆ, ನಿರುದ್ಯೋಗ ದರವು 40 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿದೆ. ಭಾರತ ಮಾನವ ಸಂಪನ್ಮೂಲದ ವಿಷಯದಲ್ಲಿ ಮೊದಲ ಎರಡು ದೇಶಗಳಲ್ಲಿ ಒಂದಾಗಿದೆ. ಈ ಯುವಕರ ಸಂಖ್ಯೆ ತೋರಿಸುತ್ತಾ ನಮ್ಮನ್ನು ಆಳುವವರು ನಮ್ಮದು ಯುವ ರಾಷ್ಟ್ರ ಎಂದು ಬೀಗುತ್ತಿದ್ದಾರೆ.

ಪದವಿ, ಪಿಜಿ ಓದಿ ಮಾಲ್ ಗಳಲ್ಲಿ ಸೇಲ್ಸ್ ವರ್ಕರ್ ಗಳಾಗಿ

ಯುವಕರಿಗೆ ಉದ್ಯೋಗ ನೀಡದಿದ್ದರೆ, ಅವರು ಬದುಕುವುದು ಹೇಗೆ? ಪದವಿ, ಪಿಜಿ ಓದಿ ಉದ್ಯೋಗ ಖಾತ್ರಿ ಕೆಲಸಕ್ಕೆ ಹೋಗುತ್ತಿರುವ, ಅನೇಕರು ಸ್ವಯಂ ಸೇವಕರಾಗಿ, ಮಾಲ್ ಗಳಲ್ಲಿ ಸೇಲ್ಸ್ ವರ್ಕರ್ ಗಳಾಗಿ, ಗುತ್ತಿಗೆ ಕಾರ್ಮಿಕರಾಗಿ ದುಡಿಯುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಲ್ಲಿ ಒಂದು ಕೋಟಿ ಐವತ್ತು ಲಕ್ಷ ಕಾರ್ಮಿಕರು ಕೆಲಸ ಕಳೆದುಕೊಂಡಿದ್ದಾರೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳಲ್ಲಿ ಲಕ್ಷಗಟ್ಟಲೆ ಉದ್ಯೋಗಗಳು ಖಾಲಿ ಇವೆ. ಇವುಗಳನ್ನು ಭರ್ತಿ



ಮಾಡುತ್ತಿಲ್ಲ. ದಲಿತ ಮತ್ತು ಬುಡಕಟ್ಟು ಬ್ಯಾಕ್‌ಲಾಗ್ ಹುದ್ದೆಗಳು ಲಕ್ಷಗಟ್ಟಲೆ ಖಾಲಿ ಇವೆ. ಯುವಕರಿಗೆ ಹೊಸ ಉದ್ಯೋಗಗಳನ್ನು ಪಡೆಯಲು ಅಗತ್ಯವಿರುವ ಕೌಶಲ್ಯವನ್ನು ಒದಗಿಸಲು ಸರ್ಕಾರಗಳು ದಯನೀಯವಾಗಿ ವಿಫಲಗೊಳ್ಳುತ್ತಿವೆ. 2030 ರ ವೇಳೆಗೆ ನಮ್ಮ ದೇಶದಲ್ಲಿ ಸುಮಾರು 2 ಕೋಟಿ 90 ಲಕ್ಷ ಯುವಕರು ಅಗತ್ಯವಾದ ಕೌಶಲ್ಯ ಅಥವಾ ಉದ್ಯೋಗದಿಂದ ವಂಚಿತರಾಗುತ್ತಾರೆ ಎಂದು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಇತ್ತೀಚೆಗೆ ಘೋಷಿಸಿತು. ಕೇಂದ್ರ ಕೌಶಲ್ಯಾಭಿವೃದ್ಧಿ ಸಚಿವಾಲಯದ 2021 ರ ವರದಿಯ ಪ್ರಕಾರ, ವಿದ್ಯಾವಂತರಲ್ಲಿ ಉದ್ಯೋಗಾವಕಾಶವು ಕೇವಲ ಶೇ. 50 ಕ್ಕಿಂತ ಕಡಿಮೆಯಾಗಿದೆ. ಇಂಡಿಯಾ ಸ್ಕಿಲ್ ರಿಪೋರ್ಟ್ ಪ್ರಕಾರ, ಬಿ.ಟೆಕ್ ಪದವೀಧರರಲ್ಲಿ ಶೇ. 45 ಮತ್ತು ಐಟಿಐ ಪದವೀಧರರಲ್ಲಿ ಶೇ. 75 ರಷ್ಟು ಉದ್ಯೋಗ ಕೌಶಲ್ಯಗಳ ಕೊರತೆಯಿದೆ. ಅವರಲ್ಲಿ ಕೌಶಲ್ಯ ಬೆಳೆಸುವ ಬದಲು ರಾಜಕೀಯ ಲಾಭಕ್ಕಾಗಿ ಅವರ ತಲೆಯಲ್ಲಿ ಮತಾಂಧತೆಯನ್ನು ತುಂಬಲು ಬಿಜೆಪಿ ಸರ್ಕಾರ ಶ್ರಮಿಸುತ್ತಿದೆ. ಗ್ರಾಮೀಣ ಭಾಗದ ಕೃಷಿ ಕೂಲಿ ಕಾರ್ಮಿಕರು ಹಾಗೂ ಬಡವರಿಗೆ ಸಣ್ಣ ಪುಟ್ಟ ಕೆಲಸ ನೀಡುವ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಬಿಜೆಪಿ ಸರ್ಕಾರ ಹಣ ಕಡಿತ ಮಾಡುತ್ತಿದೆ. ಈ ವರ್ಷದ ಬಜೆಟ್ ನಲ್ಲಿ 30 ಸಾವಿರ ಕೋಟಿ ರೂ. ಕಡಿತಮಾಡಿದೆ.

ರಾಜ್ಯದ ಕಾಂಗ್ರೆಸ್ ಸರ್ಕಾರ ಮೋದಿ ಸರ್ಕಾರದ ನೀತಿಗಳನ್ನು ಅನುಸರಿಸುತ್ತಿದೆ

ಕೇಂದ್ರ ಸರ್ಕಾರದ ವಿಧ್ವಂಸಕ ನೀತಿಯನ್ನು ಸಿದ್ದರಾಮಯ್ಯನವರ ಸರ್ಕಾರ ರಾಜ್ಯದಲ್ಲಿ ಜಾರಿ ಮಾಡುತ್ತಿದೆ. ವಿದ್ಯುತ್ ಸುಧಾರಣೆಗಳನ್ನು ಜಾರಿಗೊಳಿಸುವುದು, ಕೃಷಿ ಪಂಪ್ ಸೆಟ್‌ಗಳಿಗೆ ಸ್ಮಾರ್ಟ್ ಮೀಟರ್ ಮತ್ತು ಮೀಟರ್‌ಗಳನ್ನು ಅಳವಡಿಸುವ ಕಾರ್ಯದಲ್ಲಿ ಮುಂದಾಗಿದೆ. ಜೊತೆಗೆ ಇತ್ತೀಚೆಗೆ ಕೆಇಆರ್‌ಸಿ (ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗ) ಪ್ರಿಪೇಯ್ಡ್ ಮೀಟರ್ ಅಳವಡಿಕೆಗೆ ಕರಡು ಅಧಿಸೂಚನೆ ಹೊರಡಿಸಿದೆ. ವಿದಾನಸಭಾ ಚುನಾವಣೆ ಮುಗಿಯುತ್ತಿದ್ದಂತೆ ವಿದ್ಯುತ್ ಶುಲ್ಕ ಹೆಚ್ಚಿಸಿದ ಕಾರಣದಿಂದ ವಿದ್ಯತ್ ದರ ದುಬಾರಿಯಾಗಿದೆ. ಈ ದರ ಏರಿಕೆಯನ್ನು ಕಾಂಗ್ರೆಸ್ ಸರ್ಕಾರ ತಡೆಹಿಡಿಯುವ ಪ್ರಯತ್ನವನ್ನೇ ಮಾಡದೆ, ಹಿಂದಿನ ಬಿಜೆಪಿ ಸರ್ಕಾರದ್ದು ಎಂದು ಹೇಳುವ ಮೂಲಕ ವಿದ್ಯುತ್ ದರ ಏರಿಕೆಗೆ ಹಸಿರು ನಿಶಾನೆ ತೋರಿಸಿದೆ. ಇದೂ ಸಾಲದೆಂಬಂತೆ, ಟ್ರೂ ಅಪ್ ಚಾರ್ಜ್, ಸರ್ ಚಾರ್ಜ್, ಫಿಕ್ಸೆಡ್ ಚಾರ್ಜ್, ವಿದ್ಯುತ್ ಸುಂಕ ಇತ್ಯಾದಿ ಹೆಸರಿನಲ್ಲಿ ಜನರ ಮೇಲೆ ದುಪ್ಪಟ್ಟು ಹೊರೆ ಹೇರಲಾಗಿದೆ. ಸರ್ಕಾರದ ಈ ನಡೆಯಿಂದಾಗಿ ಉಚಿತ ಕೃಷಿ ವಿದ್ಯುತ್, ಗೃಹ ಬಳಕೆದಾರರಿಗೆ 200 ಯೂನಿಟ್‌ಗಳವರೆಗೆ ಉಚಿತ ವಿದ್ಯುತ್ ಎಷ್ಟು ಕಾಲ ಉಳಿಯುತ್ತದೆ ಎಂಬ ಪ್ರಶ್ನೆ ಮೂಡುತ್ತದೆ. ನಗರದ ಜನತೆಗೆ ಆಸ್ತಿ ತೆರಿಗೆ ಮತ್ತು ಕಸದ ತೆರಿಗೆ ಹೊರೆಯಾಗುತ್ತಿದೆ. ಇದು ಸಾರ್ವಜನಿಕರಿಗೆ ಸರ್ಕಾರವು ಒದಗಿಸುವ ಎಲ್ಲಾ ಸೇವೆಗಳಿಗೆ ಶುಲ್ಕವನ್ನು ನಿಗದಿಪಡಿಸುತ್ತದೆ ಮತ್ತು ಕಾರ್ಯಗತಗೊಳಿಸುತ್ತದೆ. ಪಡಿತರ ವಿತರಣೆ ಮೂಲಕ ಅಕ್ಕಿ ಮಾತ್ರ ನೀಡಲಾಗುತ್ತದೆ. ಕಾಗ್ರೆಸ್ ನ ಭರವಸೆಯಂತೆ 10 ಕೆಜಿ ಅಕ್ಕಿ ನೀಡುವ ಬದಲಾಗಿ ಐದು ಕೆಜಿ ಅಕ್ಕಿ ಮಾತ್ರ ನೀಡಿ, ಐದು ಕೆಜಿ ಅಕ್ಕಿಗೆ ನಗದು ನೀಡುತ್ತಿದೆ. ಈ ಹಿಂದೆ ಬಡವರಿಗೆ ನೀಡುತ್ತಿದ್ದ ಬೇಳೆಕಾಳು, ಎಣ್ಣೆ ಮತ್ತಿತರ ಪೂರೈಕೆಯನ್ನು ಮರುಸ್ಥಾಪಿಸಬೇಕು. ಖಾಲಿ ಇರುವ ಗ್ರೂಪ್ 1 ಮತ್ತು ಗ್ರೂಪ್ 2 ಹುದ್ದೆಗಳನ್ನು ತಕ್ಷಣ ಭರ್ತಿ ಮಾಡುವ ಜತೆಗೆ ಶಿಕ್ಷಕರ ಹುದ್ದೆಗಳ ಭರ್ತಿಗೆ ಡಿಎಸ್ ಸಿ ನಡೆಸಬೇಕು. ಪ್ರತಿ ವರ್ಷ ಉದ್ಯೋಗ ದಿನಗಳನ್ನು ಖಾತ್ರಿ ಜಾರಿಗೊಳಿಸಬೇಕು. ಬುಡಕಟ್ಟು ಯುವಕರಿಗೆ ವಿಶೇಷ ಡಿಎಸ್‌ಸಿ ನೀಡಬೇಕು. ಉದ್ಯೋಗ ಖಾತ್ರಿ ಕೆಲಸವನ್ನು ತಲಾ 200 ದಿನಗಳಿಗೆ ಮತ್ತು ನಗರ ಪ್ರದೇಶದ ಬಡವರಿಗೆ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆ ಜಾರಿಗೊಳಿಸಲು ಕೇಂದ್ರ ಸರ್ಕಾರದ ಮೇಲೆ ಒತ್ತಡ ಹೇರಬೇಕು.

ಕೇಂದ್ರದ ಬಿಜೆಪಿ ಸರಕಾರ ಕಾರ್ಪೊರೇಟ್ ಕಂಪನಿಗಳಿಗೆ ಸಾವಿರಾರು ಕೋಟಿ ಸಬ್ಸಿಡಿ ನೀಡಿ ಲಕ್ಷ ಕೋಟಿ ಮೌಲ್ಯದ ಸಾರ್ವಜನಿಕ ವಲಯದ ಉದ್ದಿಮೆಗಳನ್ನು ಹಸ್ತಾಂತರಿಸುತ್ತದೆ. ಮಣಿಪುರದ ಭೀಕರತೆಯ ಬಗ್ಗೆ ಇಡೀ ದೇಶವೇ ಕಳವಳಗೊಂಡಿರುವಾಗ ಇತ್ತೀಚೆಗೆ ನಡೆದ ಸಂಸತ್ ಅಧಿವೇಶನದಲ್ಲಿ ಕಾರ್ಪೊರೇಟ್ ಕಂಪನಿಗಳಿಗೆ ಅರಣ್ಯ ಸಂಪತ್ತು ಮತ್ತು ಭೂಗತ ಖನಿಜಗಳನ್ನು ಲೂಟಿ ಮಾಡಲು ಅನುಕೂಲವಾಗುವಂತೆ ಕಾನೂನುಗಳಿಗೆ ತಿದ್ದುಪಡಿ ತರಲಾಗಿದೆ.

ಚುನಾವಣೆಯ ಲಾಭಕ್ಕಾಗಿ ಸಿಲಿಂಡರ್ ಬೆಲೆ ಕಡಿತ

ಮುಂಬರುವ ಐದು ರಾಜ್ಯಗಳ ಚುನಾವಣೆಯ ಲಾಭ ಪಡೆಯಲು ಸಿಲಿಂಡರ್ ಬೆಲೆಯನ್ನು ಕಡಿತಗೊಳಿಸಲಾಗಿದೆ. ಈ ಹಿಂದೆ ಬಿಹಾರ ಚುನಾವಣೆ ವೇಳೆ 1 ಲಕ್ಷ ಕೋಟಿ ಪ್ಯಾಕೇಜ್, ವಿವಿಧ ರಾಜ್ಯಗಳ ಚುನಾವಣೆ ವೇಳೆ ಪೆಟ್ರೋಲ್, ಡೀಸೆಲ್ ಬೆಲೆ ಏರಿಕೆ ಮಾಡದಿರುವುದು, ಕರ್ನಾಟಕ ಚುನಾವಣೆಯಲ್ಲಿ ಉಚಿತ ಭರವಸೆ ನೀಡಿ ಜನರನ್ನು ವಂಚಿಸಿ ಮತ ಲೂಟಿ ಮಾಡಿರುವುದು ಬಿಜೆಪಿಯ ಬೂಟಾಟಿಕೆ ರಾಜಕಾರಣಕ್ಕೆ ಸಾಕ್ಷಿ. ಈ ನೀತಿಗಳನ್ನು ಕುರುಡಾಗಿ ಅನುಮೋದಿಸುವ ಯಾವುದೇ ಪಕ್ಷವು ಅಂತಿಮವಾಗಿ ಸಾರ್ವಜನಿಕ ವಿಶ್ವಾಸವನ್ನು ಕಳೆದುಕೊಳ್ಳುತ್ತದೆ.

ಸಂಪಾದಕೀಯ

ನೂರು ದಿನಗಳು ಕಳೆದಿವೆ; ಮುಂದಿನ ದಿನಗಳು ಹೇಗೆ?

ಸಿದ್ದರಾಮಯ್ಯ ನೇತೃತ್ವದ ಹೊಸ ರಾಜ್ಯ ಸರ್ಕಾರ ಅಧಿಕಾರ ವಹಿಸಿಕೊಂಡು ನೂರು ದಿನಗಳು ಗತಿಸಿವೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿಗಳ ನೇತೃತ್ವದಲ್ಲಿ ಮೈಸೂರು ಮಹಾರಾಜ ಕಾಲೇಜು ಮೈದಾನದಲ್ಲಿ ಸೇರಿದ ಸಹಸ್ರಾರು ಜನ, ಮುಖ್ಯವಾಗಿ ಮಹಿಳೆಯರು ಕುಣಿದು ಕುಪ್ಪಳಿಸಿ ನೂರು ದಿನದ ಸಂಭ್ರಮಾಚರಣೆ ಆಚರಿಸಿದ್ದಾರೆ. ಹಿರಿಯ ಕಾಂಗ್ರೆಸ್ ಮುಖಂಡರಾದ ಮಲ್ಲಿಕಾರ್ಜುನ ಖರ್ಗೆ, ದೆಹಲಿಯಿಂದ ಆಗಮಿಸಿದ್ದ ರಾಹುಲ್ ಗಾಂಧಿ, ರಾಜ್ಯದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಮೊದಲಾದವರು ಜನಸಾಗರದಲ್ಲಿ ಸೇರಿಕೊಂಡು ಕರ್ನಾಟಕದ ಜನತೆಯನ್ನು ಕೊಂಡಾಡಿದ್ದಾರೆ.

ಕಾಂಗ್ರೆಸ್ ಕಾರ್ಯಕರ್ತರ ಈ ಹುಮ್ಮಸ್ಸಿಗೆ ಕಾರಣ ಇಲ್ಲದಿರಲಿಲ್ಲ. ಕಳೆದ ಎಟೊಂಬತ್ತು ವರ್ಷಗಳಿಂದ ಜನರ ಮನಸ್ಸಿನಲ್ಲಿ ಮಡುಗಟ್ಟಿದ ಬಿಜೆಪಿ ವಿರುದ್ಧದ ಆಕ್ರೋಶ ಕೊನೆಗೂ ಸ್ಫೋಟಗೊಂಡಿತ್ತು. ದ್ವೇಷದ ಕಿಚ್ಚು ಹಚ್ಚುವ ನಿಮ್ಮ ವಿನಾಶಕಾರಿ ರಾಜಕಾರಣ ಸಾಕಪ್ಪ ಸಾಕು ಎಂದು ಪ್ರಧಾನಿ ಮೋದಿಯವರಿಗೆ ಜನತೆ ಎಚ್ಚರಿಸಿದಂತಾಗಿತ್ತು. ಈ ಸಂಭ್ರಮದಲ್ಲಿ ಕಾಂಗ್ರೆಸ್ಸಿಗರು ಮಾತ್ರವಲ್ಲ, ಇತ್ತೀಚಿನ ರಾಜಕೀಯ ಬೆಳವಣಿಗೆಗಳನ್ನು ಕಂಡು ರೋಸಿಹೋದ ನಾಡಿನ ದೇಶಪ್ರೇಮಿಗಳು ಕಾಂಗ್ರೆಸಿಗರ ಜೊತೆಯಲ್ಲಿ ಸಂತಸಪಟ್ಟಿದ್ದರು. ತೊಲಗಿತ್ತಪ್ಪ ಪೀಡೆ ಎಂದು ಮನಸ್ಸಿನ ಒಳಗೊಳಗೆ ಆನಂದ ಪಟ್ಟಿದ್ದರು.

ನಾವು ನುಡಿದಂತೆ ನಡೆದಿದ್ದೇವೆ ಎಂದು ಮುಖ್ಯಮಂತ್ರಿ ಹೇಳುತ್ತಿರುವುದು ಅತಿಶಯೋಕ್ತಿ ಏನಲ್ಲ. ಚುನಾವಣೆಯ ಪೂರ್ವದಲ್ಲಿ ಜನತೆಯ ಮುಂದೆ ಇಡಲಾದ ಐದು ಗ್ಯಾರಂಟಿಗಳಲ್ಲಿ ನಾಲ್ಕನ್ನು ಸರ್ಕಾರ 100 ದಿನಗಳ ಒಳಗಾಗಿಯೇ ಅನುಷ್ಠಾನಗೊಳಿಸಿದ್ದಾರೆ. ಮುಖ್ಯವಾಗಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ, ಅನ್ನ ಭಾಗ್ಯದ ಅಡಿಯಲ್ಲಿ ಬಡವರಿಗೆ ಪ್ರತಿ ತಿಂಗಳು 10 ಕೆಜಿ ಅಕ್ಕಿ, ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ರೂ. 2000 ಈ ಮಹಿಳಾ ಪ್ರಧಾನ ಗ್ಯಾರಂಟಿಗಳು ಇಲ್ಲಿಯವರೆಗೆ ಅತ್ಯಂತ ನಿರ್ಲಕ್ಷ್ಯಕ್ಕೆ ಒಳಗಾದ ಮಹಿಳೆಯರಲ್ಲಿ ಚೈತನ್ಯವನ್ನು ಬಿತ್ತಿದಂತಾಗಿದೆ.

ಬಿಜೆಪಿಯವರಿಗೆ ಈ ಬೆಳವಣಿಗೆ ನುಂಗಲಾದ ತುತ್ತಾಗಿದೆ. ಯಾವುದೇ ಸರ್ಕಾರ ಒಳ್ಳೆಯದನ್ನು ಮಾಡಿದಾಗ ಮೆಚ್ಚುಗೆ ವ್ಯಕ್ತಪಡಿಸುವುದು ಧರ್ಮ. ಗ್ಯಾರಂಟಿಗಳು ಜಾರಿಗೆ ಬಂದರೆ ಕರ್ನಾಟಕ ದಿವಾಳಿಯಾಗುತ್ತದೆ, ಶ್ರಮಿಕರು ಸೋಮಾರಿಗಳಾಗುತ್ತಾರೆ ಎಂದು ಟೀಕಿಸಲು ಇವರು ಹಿಂಜರಿಯುತ್ತಿಲ್ಲ. ಇದು ಸೋತು ಸುಣ್ಣವಾದ ಬಿಜೆಪಿಯವರ ಮತ್ಸರದ ಆರೋಪ. ಜನರ ಕೈಗೆ ಹಣ ಬಂದರೆ ನಾಡಿನ ಅಭಿವೃದ್ಧಿಯಾಗುತ್ತದೆಯೇ ಹೊರತು ನಾಡಿಗೆ ಕೇಡಾಗುವುದಿಲ್ಲ. ಸಮೃದ್ಧಿಯ ಬಾಗಿಲನ್ನು ಅದು ತೆರೆಯುತ್ತದೆ. ಉಚಿತ ಅಕ್ಕಿ ಕೊಡುವ ಕಾರ್ಯಕ್ರಮವನ್ನು ಇದೇ ರೀತಿ ಟೀಕಿಸಲಾಗುತ್ತಿತ್ತು. ಆದರೆ, ಯಾವ ಅನಾಹುತ ಸಂಭವಿಸಲಿಲ್ಲ.

ಕರ್ನಾಟಕದಲ್ಲಿ ಬಿಜೆಪಿ ಹೀನಾಯ ಸೋಲನ್ನು ಅನುಭವಿಸಿದರೂ, ಅದರ ಅಪಾಯ ಕುಗ್ಗಿಲ್ಲ. ಈಗ ಅದು ಮುಖ್ಯವಾಗಿ ಮುಂಬರುವ ಲೋಕಸಭಾ ಚುನಾವಣೆಯತ್ತ ಮುಖಮಾಡಿದೆ. ಹೇಗಾದರೂ ಮಾಡಿ ಗೆಲ್ಲಲು ಅದು ಎಲ್ಲ ರೀತಿಯ ಅಕ್ರಮಗಳಿಗೆ ಇಳಿಯದು ಎಂದು ಹೇಳಲಾಗದು. ಈಗ ಅದು ಗಾಯಗೊಂಡ ಹುಲಿಯಂತಾಗಿದೆ. ಸೇಡಿಗಾಗಿ ಹೊಂಚುಹಾಕುತ್ತಿದೆ. ಅದರ ಯಾವದೇ ತಂತ್ರ ಕುತಂತ್ರಗಳಿಗೆ ಸಿಕ್ಕಿಹಾಕಿಕೊಳ್ಳದಂತೆ ನಾಡಿನ ಜನತೆ ಸಜ್ಜಾಗಬೇಕು.

ಕಾಂಗ್ರೆಸ್ ಪಕ್ಷದ ಮೇಲೆ ಹೊಸ ಜವಾಬ್ದಾರಿ ಬಂದಾಗಿದೆ. ಹಿಂದಿನಂತೆ ಅದು ಮೃದು ಹಿಂದುತ್ವದ ದಾರಿಯನ್ನು ತುಳಿಯಬಾರದು. ಕಾಂಗ್ರೆಸಿನ ಹಿಂದಿನ ಚರಿತ್ರೆಯನ್ನು ತಿಳಿಯದವರಿಲ್ಲ. ಕೇವಲ ಐದು ಗ್ಯಾರಂಟಿಗಳ ಗುಣಗಾನ ಮಾಡುತ್ತಾ ಬಡಜನರಿಂದ, ರೈತ ಕಾರ್ಮಿಕರಿಂದ ಸರ್ಕಾರ ದೂರ ಹೋಗಬಾರದು. ಮೋದಿಯವರಂತೆ ಕಾರ್ಪೊರೇಟ್ ಕಂಪೆನಿಗಳ ಪಾದಸೇವೆ ಮಾಡುವ ದಾರಿಯನ್ನು ತ್ಯಜಿಸಬೇಕು. ದೇಶದಲ್ಲಿ ಮತ್ತು ರಾಜ್ಯದಲ್ಲಿ ಕಾರ್ಪೊರೇಟ್ ಕಂಪೆನಿಗಳು ಕೋಮುವಾದಿ ಶಕ್ತಿಗಳೊಂದಿಗೆ ಮೈತ್ರಿ ಮಾಡಿಕೊಂಡು ದೇಶವನ್ನು ಲೂಟಿಮಾಡಲು ಆಳುವ ವರ್ಗಗಳು ಸಂಚು ರೂಪಿಸುತ್ತಿವೆ. ಜನಸಾಮಾನ್ಯರು ಬೆಲೆ ಏರಿಕೆಯಿಂದ ತತ್ತರಿಸುತ್ತಿದ್ದಾರೆ. ನಿರುದ್ಯೋಗ ದೇಶವ್ಯಾಪಿಯಾಗಿ ಹರಡುತ್ತಿದೆ. ಮಹಿಳೆಯರು, ದಲಿತರು, ಆದಿವಾಸಿಗಳು ಮತ್ತು ಅಲ್ಪಸಂಖ್ಯಾತರು ನಿರಂತರ ದೌರ್ಜನ್ಯಕ್ಕೆ ಒಳಗಾಗುತ್ತಿದ್ದಾರೆ. ದೇಶದಲ್ಲಿ ಸರ್ವಾಧಿಕಾರ ತಲೆಎತ್ತುತ್ತಿದೆ. ಕಾಂಗ್ರೆಸ್ ಈ ಬೆಳವಣಿಗೆಗಳನ್ನು ಕಡೆಗಣಿಸಬಾರದು. ಜನರ ಕೊಂಡುಕೊಳ್ಳುವ ಶಕ್ತಿ ವೃದ್ಧಿಯಾಗಬೇಕಾದರೆ ಅವರಿಗೆ ನಿರಂತರ ಕೆಲಸ ಒದಗಿಸಬೇಕು. ರೈತರ ಫಸಲಿಗೆ ನ್ಯಾಯಸಮ್ಮತ ಬೆಲೆ ಸಿಗುವಂತಾಗಬೇಕು. ಕಾರ್ಮಿಕರಿಗೆ, ಅಸಂಘಟಿತ ವಲಯದ ಕಾರ್ಮಿಕರಿಗೆ, ಕೃಷಿ ಕಾರ್ಮಿಕರಿಗೆ ಯೋಗ್ಯ ವೇತನ ದೊರೆಯಬೇಕು. ಗುತ್ತಿಗೆ, ದಿನಗೂಲಿ ಹಾಗೂ ಸ್ಕೀಮ್ ವರ್ಕರ್ಸ್ ಇವರನ್ನು ಕಾಯಂಗೊಳಿಸಿ ಸರಿಯಾದ ವೇತನ ನೀಡಬೇಕು. ಈ ಎಲ್ಲ ಜನಪರ ಕಾರ್ಯಗಳಿಗೆ ಬಹಳಷ್ಟು ಹಣ ಬೇಕಾಗುತ್ತದೆ. ಮಂತ್ರಿಗಳಿಗೆ, ಶಾಸಕರಿಗೆ ಲೂಟಿಮಾಡಲು ಅವಕಾಶ ಸಿಗದಂತೆ ನೋಡಿಕೊಳ್ಳಬೇಕು. ಶ್ರೀಮಂತರ ಮೇಲೆ ಗರಿಷ್ಠ ತೆರಿಗೆ ವಿಧಿಸಿ ಅಗತ್ಯ ಹಣವನ್ನು ಸಂಗ್ರಹಿಸಬೇಕು. ಗ್ಯಾರಂಟಿ ಯೋಜನೆಗಳನ್ನು ಈಡೇರಿಸಿದರೆ ನಮ್ಮ ಕೆಲಸ ಮುಗಿಯಿತು ಎಂಬ ಧೋರಣೆಗೆ ಅವಕಾಶ ನೀಡಬಾರದು. ಹಸಿವುಮುಕ್ತ ಕರ್ನಾಟಕ ಮಾಡುತ್ತೇವೆ ಎಂದು ಮುಖ್ಯಮಂತ್ರಿ ಹಲವು ಬಾರಿ ಹೇಳಿದ್ದಾರೆ. ಇದು ಕೇವಲ ಭರವಸೆಯಾಗಿ ಉಳಿಯಬಾರದು, ಕೊಟ್ಟ ಮಾತಿಗೆ ತಪ್ಪಿ ನಡೆದರೆ ನಾಡಿನ ಜನತೆ ಕಾಂಗ್ರೆಸ್ ಪಕ್ಷವನ್ನು ತಿರಸ್ಕರಿಸದೆ ಇರಲಾರರು. ಬರಗಾಲದ ಮುನ್ಸೂಚನೆಗಳಿವೆ. ಕೇಂದ್ರ ಸರ್ಕಾರ ಸ್ಪಂದಿಸುತ್ತಿಲ್ಲ. ಮುಂದೇನು ಎಂಬ ಗಂಭೀರ ಪ್ರಶ್ನೆ ಎದುರಾದರೆ ಆಶ್ಚರ್ಯವಿಲ್ಲ.

–ನಿತ್ಯಾನಂದಸ್ವಾಮಿ

ಈ ವಾರ

ಸಾಧನೆ ಮತ್ತು ಹೀನಾಯ ಪರಿಸ್ಥಿತಿಗಳ ನಡುವೆ ನಿಂತು

ಎಸ್.ವೈ.ಗುರುಶಾಂತ್

ಚಂದ್ರನ ಮೇಲೆ ವಿಕ್ರಂ ಲ್ಯಾಂಡಿಂಗ್ ಆದ ಸುದ್ದಿ ಲೈವ್ ನೋಡುತ್ತಿರುವಂತೆ ಎಲ್ಲರಲ್ಲೂ ಭಾರೀ ಪುಳಕ. ಚಂದ್ರನ ದಕ್ಷಿಣ ಧೃವದಲ್ಲಿ ಇಳಿದ ಮೊಟ್ಟ ಮೊದಲ ನೌಕೆ ಭಾರತದ್ದು ಎನ್ನುವ ಹಿರಿಮೆ. ಅದೂ ಎರಡು ಬಾರಿ ತಾಂತ್ರಿಕ ವೈಫಲ್ಯದ ಬಳಿಕ ಮಾಡಿದ ಸಾಧನೆ ಎಂದ ಮೇಲೆ ನಮ್ಮ ವಿಜ್ಞಾನಿಗಳು, ತಂತ್ರಜ್ಞರ ಬಗ್ಗೆ ಹೆಮ್ಮೆ ಪಡದಿರಲು ಹೇಗೆ ಸಾಧ್ಯ?! ಹಾಗಾಗಿಯೇ ಭಾರತೀಯರೆಲ್ಲರಲ್ಲೂ ಸಂತಸದ ಹೊನಲು ಸಹಜ.

ನಿಜ, ಹೆಮ್ಮೆ ಪಡಬೇಕಾದುದು ಕೇವಲ ಭಾರತೀಯರಲ್ಲ. ಯಾವುದೇ ವಿಜ್ಞಾನ–ವಿಜ್ಞಾನಿ–ತಂತ್ರಜ್ಞಾನ–ತಂತ್ರಜ್ಞರ ಸಾಧನೆಗೆ ಜಗತ್ತು ಅಭಿಮಾನ ಹೆಮ್ಮೆ ಪಡಬೇಕು. ಯಾಕೆಂದರೆ ಅದು ಮಾನವ ಜಗತ್ತಿನ ಸಾಧನೆಯೂ ಹೌದು.

ಈ ಸುದ್ದಿ ಟಿ.ವಿ. ದೃಶ್ಯ ಮಾಧ್ಯಮದಲ್ಲಿ ವರದಿ ಮಾಡುತ್ತಿದ್ದವರೂ ಸಹ ಚಂದ್ರ ಮೇಲೆ ಹತ್ತಿದ್ದರು! ಅವರ ಭಾವಾವೇಶಕ್ಕೆ ಪಾರವೇ ಇರಲಿಲ್ಲ. ವರದಿಗಾರಿಕೆಯಲ್ಲಿ ಹ್ಯಾಂಕರ್ಗಳು ನೀಡುತ್ತಿದ್ದ ತಾಂತ್ರಿಕ ಮಾಹಿತಿಗಳು ಹೆಚ್ಚಿನ ಪೂರ್ವ ಸಿದ್ಧತೆಯನ್ನು, ಉಪಗ್ರಹ ಯಶಸ್ವಿಯಾಗಿ ತಲುಪುವ ವಿಶ್ವಾಸವನ್ನು ಖಾತ್ರಿ ಮಾಡುತ್ತಿದ್ದವು. ಎಂದಿನಂತೆ ಪ್ರಧಾನಿಯವರ ಭಾಷಣ ಖಂಡಿತಕ್ಕೂ ಮೊದಲೇ ಸಿದ್ದಗೊಂಡಿದ್ದನ್ನು ತೋರುತ್ತಿತ್ತು. ನಿಜ, ವೈಫಲ್ಯಗೊಂಡಾಗ ಮಾಡಬೇಕಾದ ವಿಷಾದದ ಭಾಷಣವೂ ಸಿದ್ಧಗೊಂಡಿರುವಂತೆ ಇದೂ ಸಹ! ಈ ಮಾತನ್ನು ಹೇಳುವಾಗ ನೆನಪಾಗುವುದು ಮೊಟ್ಟ ಮೊದಲ ಬಾರಿ ಚಂದ್ರನ ಮೇಲೆ ಮಾನವ ಸಹಿತ ಅಮೇರಿಕಾದ ಗಗನ ನೌಕೆ ಇಳಿದಾಗ, ಅದರಲ್ಲಿದ್ದ ನೀಲ್ ಆರ್ಮ ಸ್ಟ್ರಾಂಗ್, .ಆಲ್ಡಿನ್. .ರವರು ಚಂದ್ರನ ಮೇಲೆ ಇಳಿದು ಮೊದಲ ಹೆಜ್ಜೆಗಳನ್ನು ಹಾಕಿದಾಗ ಅಂದಿನ ಅಮೇರಿಕಾದ ಅಧ್ಯಕ್ಷ ಜಾನ್. ಎಫ್ ಕೆನಡಿ ಮಾಡಿದ ಭಾಷಣ ಮತ್ತು ವಿಫಲವಾದರೆ ಅಥವಾ ಅವರು ಜೀವಂತ ಹಿಂತಿರುಗದಿದ್ದರೆ ಮಾಡಬೇಕೆಂದಿದ್ದ ಮತ್ತೊಂದು ಕರಡು ಭಾಷಣ ಮೊದಲೇ ಸಿದ್ಧಗೊಂಡಿತ್ತು. ಅದರಲ್ಲಿ ವಿಫಲವಾದ ಬಗ್ಗೆ, ಬದುಕುಳಿಯದ ಬಗ್ಗೆ ಆಡಬೇಕಿದ್ದ ಮಾತುಗಳಿದ್ದವು.'

ಈಗ ನಮ್ಮ ಪ್ರಧಾನಮಂತ್ರಿಗಳು ಭಾಷಣ ಆರಂಭಿಸುತ್ತಿದ್ದಂತೆ ಸುಮಾರು 80 ಲಕ್ಷದಷ್ಟಿದ್ದ ಲೈವ್ ವೀಕ್ಷಕರ ಸಂಖ್ಯೆ 10 ಲಕ್ಷಕ್ಕೆ ಇಳಿಯಿತು ಎನ್ನುವುದು ಬೇರೆ ಮಾತು ಅನ್ನಿ!


ಇಲ್ಲಿ ಗಮನಿಸಬೇಕಾದ ಮತ್ತೊಂದು ಅಂಶವೆಂದರೆ: ಮರುದಿನ ಪತ್ರಿಕೆಗಳ ಪುಟಗಳಲ್ಲಿ ಇದು ಹೇಗೆ ವರದಿ ಆಯ್ತು ಎನ್ನುವುದು, ಅದಕ್ಕಿಂತಲೂ ಸಾಧನೆಯ ಶಿಖರದ ಜೊತೆ ಮತ್ತೇನು ವರದಿಗಳಿದ್ದವು ಎನ್ನುವುದು. ವಿಪರ್ಯಾಸವೋ ಅಥವಾ ವಾಸ್ತವವೋ, ಚಂದ್ರಯಾನ 3 ಮಿಷನ್ ಸಕ್ಸಸ್ ಸುದ್ದಿಯ ಪಕ್ಕದಲ್ಲೇ ಕರ್ನಾಟಕದ ರಾಮನಗರ ಜಿಲ್ಲೆಯ ಪೌರ ಕಾರ್ಮಿಕರು ತಮಗೆ ಸಿಗಬೇಕಿರುವ ಸಂಬಳವನ್ನು ಅಧಿಕಾರಿಗಳು ಕೊಡದೇ, ಹಿಂಸೆ ಪಡುತ್ತಿರುವುದರಿಂದ ತಮ್ಮ ಮೈ ಮೇಲೆ ಮಲಸುರಿದು ಕೊಂಡು ಪ್ರತಿಭಟನೆ ದಾಖಲಿಸಿದ್ದ ಸುದ್ದಿ. ಒಂದು ಕಡೆ ಮಾನವನ, ಅದರಲ್ಲೂ 'ವಿಶ್ವ ಗುರು' ವಾಗಲಿರುವ ಭಾರತದ ಸಾಧನೆ ಶಿಖರದಿತ್ತುಂಗ ವೆಂದು ಬಣ್ಣಿಸುತ್ತಿರುವಾಗಲೇ ಶ್ರಮಿಕರು ಸಾಮಾಜಿಕವಾಗಿ, ಆರ್ಥಿಕವಾಗಿ ತುಳಿತಕ್ಕೊಳಗಾದ ದಲಿತ ಸಮುದಾಯದ ಪ್ರತಿನಿಧಿಗಳ ಹೀನಾಯ ಪರಿಸ್ಥಿತಿ, ಮುಖ್ಯವಾಗಿ ಮಾನವನ ಘನತೆಗಾದ ಘೋರ ಅಮಾನವೀಯ ಸ್ಥಿತಿಯನ್ನು ನಗ್ನಗೊಳಿಸಿದ್ದವು. 'ಜುಟ್ಟಿಗೆ' ಮಲ್ಲಿಗೆ ಹೂವು ಕಟ್ಟುತ್ತಿರುವಾಗ ಹೊಟ್ಟೆಗೆ ಹಿಟ್ಟಿಲ್ಲದ ಧಾರುಣ ಚಿತ್ರವನ್ನು, ಅಂತಹುಗಳ ಆದ್ಯತೆ, ಅಗತ್ಯಗಳ ಪ್ರಶ್ನೆಯನ್ನು ಮತ್ತೇ ರಾಚುತ್ತಿದ್ದವು!

* * *

ಚಂದ್ರಯಾನ ಯೋಜನೆಯ ಯಶಸ್ಸಿಗೆ ದುಡಿದ, ಭಾಗಿಯಾದ ಎಲ್ಲರನ್ನೂ ಅಭಿನಂದಿಸಲು ಬೆಂಗಳೂರಿಗೆ ಪ್ರಧಾನಿಗಳೇ ಖುದ್ದಾಗಿ ಬಂದರು. ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳೂ ವಿಜ್ಞಾನಿಗಳನ್ನು ಕಂಡು ಅಭಿನಂದಿಸಿದ್ದರು. ಈ ಯೋಜನೆಯಲ್ಲಿ ನಿರ್ಣಾಯಕ ವಿಭಾಗಗಳಲ್ಲಿ ಮಹತ್ವದ ಪಾತ್ರ ವಹಿಸಿದವರ ಕುರಿತೂ ಮಾಹಿತಿಗಳು, ಅಭಿಪ್ರಾಯಗಳೂ ಪ್ರಕಟಗೊಂಡವು. ಇಲ್ಲಿ ಹೆಣ್ಣು ಮಕ್ಕಳದ್ದೂ ಬಹುಮುಖಿ ಕೊಡುಗೆ. ಈಗಲೂ ಚಂದ್ರಯಾನೋತ್ಸವ ನಿಂತಿಲ್ಲ. ಹಾಗೇ ಇದರಲ್ಲಿ ರಾಜಕೀಯ ಫಸಲು ಕೊಯ್ಯುವ ಇರಾದೆಯೂ ಹಿಂದೆ ಉಳಿಯಲಿಲ್ಲ!

ಹಾಗೆ ನೋಡಿದರೆ ಇದು 1960 ರ ದಶಕದಿಂದಲೂ ಭಾರತ ಆರಂಭಿಸಿದ್ದ ಮಹತ್ವದ ಕಾರ್ಯ ಯೋಜನೆ, ಅದರ ಮುನ್ನಡೆಯ ಹಲವು ತಲೆಮಾರುಗಳ ಪರಿಶ್ರಮದ ಫಲ. ಈ ರಂಗದಲ್ಲಿ ಭಾರತಕ್ಕೆ ಸೋವಿಯತ್ ರಶಿಯಾದಂತಹ ಸಮಾಜವಾದಿ ಸ್ನೇಹಶೀಲ ರಾಷ್ಟ್ರಗಳ ಕೊಡುಗೆಯೂ ಇದೆ. ವಿಚಿತ್ರ ಎಂದರೆ ಇಂದು ನಮ್ಮನ್ನು ಆಳುವವರು ಅಪ್ಪಿಕೊಳ್ಳುತ್ತಿರುವ ಅಮೇರಿಕಾವೇ ಕ್ರಯೋಜನಿಕ್

ಪುಟ 04 ಕ್ಕೆ



ಕಾಮ್ರೇಡ್ ಸರೋಜಿನಿ ಬಾಲನಂದನ್ ನಿಧನ





ಕೇರಳದ ಮಹಿಳಾ ಚಳವಳಿಯ ಹಿರಿಯ ನಾಯಕಿ ಮತ್ತು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ಕೇರಳ ರಾಜ್ಯ ಸಮಿತಿಯ ಮಾಜಿ ಅಧ್ಯಕ್ಷೆ ಮತ್ತು ಅಖಿಲ ಭಾರತ ಉಪಾಧ್ಯಕ್ಷರಾದ ಕಾಮ್ರೇಡ್ ಸರೋಜಿನಿ ಬಾಲನಂದನ್ 29 ಆಗಸ್ಟ್ 2023 ರಂದು ಕೊಚ್ಚಿಯಲ್ಲಿ ನಿಧನರಾಗಿದ್ದಾರೆ. ಅವರಿಗೆ ಆಕೆಗೆ 86 ವರ್ಷವಾಗಿತ್ತು.

ಹಿರಿಯ ಟ್ರೇಡ್ ಯೂನಿಯನ್ ನಾಯಕ ಮತ್ತು ಸಿಐಟಿಯುನ ಮಾಜಿ ಅಧ್ಯಕ್ಷ ಕಾಮ್ರೇಡ್ ಇ ಬಾಲನಂದನ್ ಅವರನ್ನು ವಿವಾಹವಾದ ಅವರು 60 ರ ದಶಕದಲ್ಲಿ ಕೇರಳದಲ್ಲಿ ಚಳುವಳಿಗೆ ಸೇರಿದರು. ಜೈಲು ಮತ್ತು ಭೂಗತ ಜೀವನವನ್ನು ಕಳೆಯಬೇಕಾದ ಕಾರ್ಮಿಕ ನಾಯಕನ ಹೆಂಡತಿಯಾಗಿ ಅವರು ವೈಯಕ್ತಿಕ ಸಂಕಷ್ಟಗಳನ್ನು ಎದುರಿಸಬೇಕಾಯಿತು ಎಂದು ಅವರಿಗೆ ಶ್ರದ್ಧಾಂಜಲಿ ಅರ್ಪಿಸುತ್ತ ಸಿಐಟಿಯು ಹೇಳಿದೆ.

ಮಹಿಳಾ ಚಳವಳಿಯ ಭಾಗವಾಗಿ ಅವರು ಅನೇಕ ಹೋರಾಟಗಳನ್ನು ಮುನ್ನಡೆಸಿದರು ಮತ್ತು ಪೊಲೀಸ್ ದೌರ್ಜನ್ಯಗಳನ್ನು ಎದುರಿಸಿದರು. ಅವರು ಪೊಲೀಸ್ ಲಾಠಿಚಾರ್ಜ್ ಎದುರಿಸಿದರು ಮತ್ತು ಒಂದು ವಾರದವರೆಗೆ ಆಸ್ಪತ್ರೆಯಲ್ಲಿದ್ದರು, ನಂತರ ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಕಾರ್ಮಿಕರ ಹೋರಾಟದಲ್ಲಿ ಭಾಗವಹಿಸಿದ್ದಕ್ಕಾಗಿ ಜೈಲುವಾಸ ಅನುಭವಿಸಿದರು.

ಅವರು ಎರ್ನಾಕುಳಂ ಜಿಲ್ಲೆಯ ಕಲಮಶೆರಿಯಲ್ಲಿ ಪಂಚಾಯತ್ ಅಧ್ಯಕ್ಷರಾಗಿ ಮತ್ತು ಕೇರಳದ ಸಮಾಜ ಕಲ್ಯಾಣ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದರು.

ಸಾಧನೆ ಮತ್ತು ಹೀನಾಯ ಪರಿಸ್ಥಿತಿಗಳ ನೆಡುವೆ ನಿಂತು..... ಪುಟ 3 ರಿಂದ

ಇಂಜಿನ್ ಕೊಡದಂತೆ ರಶಿಯಾದ ಮೇಲೆ ಒತ್ತಡ ಹೇರಿತ್ತು. ಕಾರಣ ಅದು ಸಿಕ್ಕರೆ ಬಾಹ್ಯಾಕಾಶದ ಶೋಧನೆಯಲ್ಲಿ ಭಾರತ ದಾಪುಗಾಲು ಹಾಕುತ್ತದೆ ಎಂದು. ಈ ಭೂಮಿಯ ಮೇಲಿರುವ ಯಾವುದೇ ದೇಶ ಕಂಡುಕೊಳ್ಳುವ ವೈಜ್ಞಾನಿಕ ಸಂಶೋದನೆ, ತಂತ್ರಜ್ಞಾನ ಎಲ್ಲರಿಗೂ ಸಿಗಬೇಕು, ಫಲ ದೊರೆಯ ಬೇಕು ಎನ್ನದೇ ವಾಣಿಜ್ಯದ ಖಾಸಗಿ ಸ್ವತ್ತಾಗ ಬೇಕು, ತನ್ನ ಅಧಿಪತ್ಯದಲ್ಲೇ ಇರಬೇಕು ಎನ್ನುವ ದುರಾಸೆ. ಆದರೆ ಭಾರತದ ವಿಜ್ಞಾನಿಗಳು ಅಮೇರಿಕಾದ ದುಷ್ಟ ಆಟವನ್ನೇ ಸವಾಲಾಗಿ ಸ್ವೀಕರಿಸಿ ಸಾಧಿಸಿದರು. ದೇಶವೊಂದರ ಮುನ್ನಡೆಗೆ ಅಡ್ಡಿ ಮಾಡಿದ ಅಮೇರಿಕಾದ ಯತ್ನ ಪೂರ್ಣ ಫಲ ನೀಡಲಿಲ್ಲ. ಆದರೆ ಹೊಸತೊಂದರ ಸಂಶೋಧನೆ ವಂಚಿತವಾಯಿತು ವಿಳಂಬವಾಯಿತು ಎನ್ನುವುದನ್ನೂ ಗಮನಿಸಬೇಕು.

ಸಾಧನೆಗೆ ಶ್ರಮಿಸಿದ ಎಲ್ಲರನ್ನೂ ಅಭಿನಂದಿಸಿ ಪ್ರೋತ್ಸಾಹಿಸುವುದು ಸಹಜವಾದುದೇ. ವಿಕ್ರಮ್ ಲ್ಯಾಂಡಿಂಗ್ ಆದ ಕ್ಷಣದಲ್ಲೇ ಆಫ್ರಿಕಾದ ಜೋಹಾನ್ಸ್ ಬರ್ಗ್ ನಲ್ಲಿದ್ದ ಪ್ರಧಾನಿ ಅಲ್ಲಿಂದಲೇ ಅಭಿನಂದಿಸಿದರು, ಒಂದು ಭಾಷಣವನ್ನೂ ಮಾಡಿದರು. ಇಷ್ಟಕ್ಕೂ ತೃಪ್ತಿ ಪಡದೇ ಖುದ್ದಾಗಿ ಬೆಂಗಳೂರಿಗೆ ಬಂದು ಅವನ್ನು ಕಂಡರು. ಇಲ್ಲೇ ಇದ್ದ ರಾಜ್ಯದ ಮುಖ್ಯಮಂತ್ರಿ ಸಿದ್ಧರಾಮಯ್ಯ, ಉ.ಮು. ಡಿ.ಕೆ.ಶಿವಕುಮಾರ್ ಸಹ ಲ್ಯಾಂಡರ್ ಇಳಿದ ಮರುದಿನವೇ ವಿಜ್ಞಾನಿಗಳನ್ನು ಭೇಟಿ ಮಾಡಿದ್ದರು, ಅಭಿನಂದಿಸಿ ಜಾಹೀರಾತು ನೀಡಿದ್ದರು. ಪ್ರಧಾನಿ ಅಷ್ಟಕ್ಕೇ ನಿಲ್ಲದೇ ಇನ್ನೂ ಹಲವು ಹೆಜ್ಜೆ ಮುಂದೆ ಹೋದರು. ವಿಕ್ರಮ್ ಲ್ಯಾಂಡರ್ ಇಳಿದ ಜಾಗವನ್ನು 'ಶಿವಶಕ್ತಿ ಕೇಂದ್ರ' ಎಂದು ನಾಮಕರಣ ಮಾಡಿದರು! ಎಂತಹ ವಿಪರ್ಯಾಸ?! ವಿಜ್ಞಾನದ ಸಾಧನೆಗೆ ಅಲೌಕಿಕ ಲೋಕದ ಅಧ್ಯಾತ್ಮಿಕ ಹೆಸರು! ವಿಜ್ಞಾನಿಗಳ ಪರಿಶ್ರಮ, ದೇಶದ ಎಲ್ಲ ಧರ್ಮೀಯರ ಬೆವರಿನ ಹಣದಿಂದ ಮಾಡಿದ ಸಂಶೋಧನೆಯನ್ನು ಒಂದು ಧಾರ್ಮಿಕ ಕಲ್ಪನೆಗೆ ಸೀಮಿತಗೊಳಿಸಿ 'ಹಿಂದುತ್ವ' ದ ತಮ್ಮ ರಾಜಕೀಯ ಅಜೆಂಡಾಕ್ಕೆ ಸಮೀಕರಿಸಿ ಅದನ್ನು ಬಳಸಲು ಹಪಾಹಪಿಸಿದ್ದು ಹೇಸಿಗೆ ತರುವಂತಹುದು. ಚಂದ್ರನ ಮೇಲಿರುವ ಎಲ್ಲವನ್ನೂ ಬಾಚಿಕೊಳ್ಳ ಬಯಸುವ ಕಾರ್ಪೋರೇಟ್ ಕಂಪನಿಗಳ ಜೊತೆ ನಾಗರಿಕ ಪ್ರಧಾನಿಯೂ ಹಪಾಹಪಿಸಿದ್ದು ಅಸಹ್ಯ ಹುಟ್ಟಿಸಿತು.

ಇಂತಹ ಅಬ್ಬರದಲ್ಲಿ ಇಸ್ರೋದ ಮಾಜಿ ಅಧ್ಯಕ್ಷ ಪ್ರೊ.ಮಾಧವನ್ ನಾಯರ್ ರವರು ಹೇಳಿದ, ತೆರೆದಿಟ್ಟ ಸತ್ಯದ ಒಂದು ಮಾತಿಗೆ ಕಿವಿಗೊಡುವವರೇ ಇಲ್ಲವಾಯಿತು. ದೇಶಕ್ಕಾಗಿ ನಿಜಕ್ಕೂ ದುಡಿಯುವ ಇಸ್ರೋ ವಿಜ್ಞಾನಿಗಳ ಜೀವನದ ಸ್ಥಿತಿ, ಪಡೆಯುವ ನಿಕೃಷ್ಟ ಸಂಬಳದ ಬಗ್ಗೆ ಗಮನ ಸೆಳೆದಿದ್ದರು. ಅವರ ವೇತನ ಜಾಗತಿಕವಾಗಿ ವಿಜ್ಞಾನಿಗಳು ಪಡೆಯುವ ವೇತನದ ಐದನೆಯ ಒಂದು ಭಾಗ (1/5). ನಮ್ಮ ದೇಶದ ಹಮ್ಮೆ ಹೆಚ್ಚಿಸುವ ನಮ್ಮ ವಿಜ್ಞಾನಿಗಳು ಜೀವಿಸುವುದು ಸಾಮಾನ್ಯರಂತೆ ಅಷ್ಟಕ್ಕಷ್ಟೇ' ಎಂದು ಹೇಳುವ ಮೂಲಕ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆ, ಸಂಶೋಧನೆಗಳಿಗೆ ಭಾರತ ಸರ್ಕಾರ ನೀಡುತ್ತಿರುವ ಅನುದಾನ ಸಾಲುತ್ತಿಲ್ಲ ಎಂಬ ಆಗ್ರಹವನ್ನು ಪ್ರತಿಧ್ವನಿಸಿತ್ತು. ಈ ಸಾಲಿನ ಬಜೆಟ್ ನಲ್ಲಿ ಇಸ್ರೋಗೆ ಸುಮಾರು 28 ಕೋಟಿ ರೂ.ಗಳ ಅನುದಾನವನ್ನು ಭಾರತ ಸರ್ಕಾರ ಹಿಂದಿನ ವರ್ಷಕ್ಕಿಂತ ಕಡಿತಗೊಳಿಸಿದೆ. ದೇಶದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸಂಶೋಧನೆ ಹಾಗೂ ಅಭಿವೃದ್ಧಿಗೆ ಭಾರತ ಸರ್ಕಾರ ನೀಡುತ್ತಿರುವ ಹಣ ಸಾಲುತ್ತಿಲ್ಲ. ಮೇಲಾಗಿ ಕಡಿತವೂ ಆಗುತ್ತಿದೆ. ಇದರಿಂದಾಗಿ ನಮ್ಮ ಸಂಶೋದನೆಗಳು ಸ್ಥಗಿತಗೊಳ್ಳುತ್ತಿವೆ' ಎಂಬ ಮಾತನ್ನು ವಿಶ್ವ ವಿಖ್ಯಾತ ವಿಜ್ಞಾನಿ ಭಾರತರತ್ನ ಪ್ರೊ.ಸಿ.ಎನ್.ಆರ್.ರಾವ್ ಅವರು ಹಲವು ವರ್ಷಗಳಿಂದ ಹೇಳುತ್ತಲೇ ಇದ್ದಾರೆ. ವಿಜ್ಞಾನ ತಂತ್ರಜ್ಞಾನಗಳ ಬೆಳವಣಿಗೆಯಿಂದ ಭಾರತ ಬೆಳೆಯಲಾರದು ಎಂದು ಆಳುವವರಿಗೆ ಅನಿಸಿದೆಯೇ? ಪರಾವಂಬನೆಯತ್ತ ದೇಶವನ್ನು ನೂಕುತ್ತಿರುವವರು ಮಂತ್ರ ತಂತ್ರಗಳಿಂದ ಭಾರತ ಬೆಳೆಯುತ್ತದೆ ಎಂದು ಭಾವಿಸಿದ್ದಾರೆಯೇ?

ಶೇರು ಮಾರುಕಟ್ಟೆಯಲ್ಲಿ ಅದಾನಿ ಸಮೂಹದ ಕೈಚಳಕಗಳ ತಾಜಾಪುರಾವೆಗಳು

–ಮುಚ್ಚಿ ಹಾಕದಂತೆ ತಡೆಯಲು ಸುಪ್ರಿಂ ಕೋರ್ಟ್ ಮಧ್ಯಪ್ರವೇಶಿಸಬೇಕು

ಅದಾನಿ ಸಮೂಹ ತನ್ನ ಕಂಪನಿಗಳ ಮೌಲ್ಯ ಮತ್ತು ಆಸ್ತಿಗಳನ್ನು ಉಬ್ಬಿಸಲು ಅವುಗಳ ಷೇರುಗಳ ಬೆಲೆಗಳಲ್ಲಿ ಕೈಚಳಕ ನಡೆಸಿರುವ ಬಗ್ಗೆ ತಾಜಾ ಪುರಾವೆಗಳು ಹೊರಹೊಮ್ಮಿವೆ. 'ಸಂಘಟಿತ ಅಪರಾಧ ಮತ್ತು ಭ್ರಷ್ಟಾಚಾರ ವರದಿ ಮಾಡುವ ಯೋಜನೆ' **(Organised Crime and Corruption Reporting Project-OCCRP)** ಫೈನಾನ್ಶಿಯಲ್ ಟೈಮ್ಸ್ ಮತ್ತು ದಿ ಗಾರ್ಡಿಯನ್ ಪತ್ರಿಕೆಗಳಿಗೆ ಒದಗಿಸಿರುವ ಮಾಹಿತಿಗಳು ವಿನೋದ್ ಅದಾನಿಯವರ ಇಬ್ಬರು ನಿಕಟ ಸಹವರ್ತಿಗಳು ಬರ್ಮುಡಾದಲ್ಲಿ ಒಂದು ಹೂಡಿಕೆ ನಿಧಿಯನ್ನು ಹೇಗೆ ಬಳಸಿದರು ಮತ್ತು ಅದಾನಿ ಕಂಪನಿಗಳಲ್ಲಿ ಕೋಟ್ಯಂತರ ಡಾಲರ್‌ಗಳ ಷೇರುಗಳನ್ನು ಖರೀದಿಸಲು 'ಚಿಪ್ಪು ಕಂಪನಿ'ಗಳನ್ನು ಹೇಗೆ ಸ್ಥಾಪಿಸಿದರು ಎಂಬುದನ್ನು ಬಹಿರಂಗಪಡಿಸಿವೆ ಎಂದು ವರದಿಯಾಗಿದೆ.

2014 ರಲ್ಲಿ ಅದಾನಿ ಕಂಪನಿಗಳ ಕಡಲಾಚೆಯ ನಿಧಿಯ ವಿಷಯ 'ಸೆಬಿ' (ಶೇರು ಮಾರುಕಟ್ಟೆಯ ನಿಯಂತ್ರಕ ವ್ಯವಸ್ಥೆ)ಯ ಪರಿಶೀಲನೆಯಲ್ಲಿತ್ತು. ಆದರೆ ನಂತರ ವಿಚಾರಣೆಗಳನ್ನು ಮುಕ್ತಾಯಗೊಳಿಸಲಾಯಿತು ಎಂಬುದನ್ನೂ ಈ ವರದಿ ತೋರಿಸುತ್ತದೆ.

ಪ್ರಧಾನಮಂತ್ರಿ ಮೋದಿಯವರೊಂದಿಗಿನ ಅದಾನಿ ಸಂಪರ್ಕಗಳು ಇಲ್ಲಿಯವರೆಗೆ ನಿಯಂತ್ರಕ ಅಧಿಕಾರಿಗಳು ಷೇರು ಮಾರುಕಟ್ಟೆಯಲ್ಲಿ ಇಂತಹ ವ್ಯಾಪಕ ವಂಚನೆ ಮತ್ತು ಕೈಚಳಕದ ವಿರುದ್ಧ ಯಾವುದೇ ಕ್ರಮವನ್ನು ತೆಗೆದುಕೊಳ್ಳದಂತೆ ಖಚಿತಪಡಿಸಿದೆ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ತಾಜಾ ಪುರಾವೆ ಗಂಭೀರವಾದ ತನಿಖೆಯನ್ನು ಅಗತ್ಯಗೊಳಿಸಿದೆ ಎಂದಿದೆ ಮತ್ತು ಇದನ್ನು ಮುಚ್ಚಿ ಹಾಕದಂತೆ ಖಚಿತಪಡಿಸಲು ಸುಪ್ರೀಂ ಕೋರ್ಟ್ ಮಧ್ಯ ಪ್ರವೇಶಿಸಬೇಕಾಗುತ್ತದೆ ಎಂದು ಹೇಳಿದೆ.



ಕ್ರೂರ ವರ್ತನೆಗೆ ಗುರಿಯಾದ ಬಾಲಕನ ಮನೆಗೆ ಸಿಪಿಐ(ಎಂ) ನಿಯೋಗದ ಭೇಟಿ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಸುಭಾಷಿಣಿ ಅಲಿ ಮತ್ತು ರಾಜ್ಯಸಭಾ ಸದಸ್ಯ ಜಾನ್ ಬ್ರಿಟ್ಟಾಸ್ ಅವರನ್ನೊಳಗೊಂಡ ಸಿಪಿಐ(ಎಂ) ನಿಯೋಗವು ಉತ್ತರಪ್ರದೇಶದ ಮುಝಪ್ಪರ್ ನಗರ ಜಿಲ್ಲೆಯ ಒಂದು ಹಳ್ಳಿಯ ಶಾಲೆಯ ಮಾಲೀಕರೂ ಆದ ಶಿಕ್ಷಕರ ಕ್ರೂರ ವರ್ತನೆಗೆ ಗುರಿಯಾದ ಮುಸ್ಲಿಂ ಬಾಲಕನ ಕುಟುಂಬವನ್ನು ಆಗಸ್ಟ್ 30ರಂದು ಭೇಟಿ ಮಾಡಿತು.

ನಿಯೋಗವು ಖುಬ್ ಬಾಪುರ್ ಗ್ರಾಮದ ಅವರ ಅವಿಭಕ್ತ ಕುಟುಂಬದ ಮನೆಯಲ್ಲಿ ಆ ಚಿಕ್ಕ ಹುಡುಗನನ್ನು ಮತ್ತು ಆತನ ಪೋಷಕರಾದ ಇರ್ಷಾದ್ ಮತ್ತು ರುಬೀನಾರನ್ನು ಭೇಟಿ ಮಾಡಿತು. ಅವರು ಬಡ ಜನಗಳು. ಅವರ ಇಬ್ಬರು ಹಿರಿಯ ಪುತ್ರರು ಚಂಡೀಗಢದಲ್ಲಿ ಕೆಲಸ ಮಾಡುತ್ತಿದ್ದಾರೆ. ಅವರಲ್ಲಿ ಕಿರಿಯವನು ತನ್ನ ಓದನ್ನು ತ್ಯಜಿಸಿ ದಿನಗೂಲಿಯಾಗಬೇಕಾಯಿತು. ಅವರಿಬ್ಬರೂ ಶಿಕ್ಷಕರನ್ನು ಭೇಟಿಯಾಗಲು ಹೋಗಿದ್ದರು. ಆದರೆ ಆಕೆ ತನ್ನ ವರ್ತನೆಗೆ ಯಾವುದೇ ವಿಷಾದ ವ್ಯಕ್ತಪಡಿಸಲಿಲ್ಲ. ಸಿಪಿಐ(ಎಂ) ನಿಯೋಗವು ಅವರಿಗೆ ಬೆಂಬಲ ಮತ್ತು ಸೌಹಾರ್ದದ ಭರವಸೆ ನೀಡಿತು ಮತ್ತು ಚಿಕ್ಕ ಹುಡುಗ ಮತ್ತು ಅವನ ಸಹೋದರನ ಶಿಕ್ಷಣವನ್ನು ನೋಡಿಕೊಳ್ಳಲಾಗುವುದು ಎಂದು ಹೇಳಿತು.

ಶಾಲೆಯ ಪರವಾನಗಿಯನ್ನು ರದ್ದುಗೊಳಿಸಲಾಗಿದೆ ಎಂದು ಸುಭಾಷಿಣಿ ಅಲಿ ಮತ್ತು ಜಾನ್ ಬ್ರಿಟ್ಟಾಸ್ ಅವರಿಗೆ ತಿಳಿಸಲಾಯಿತು. ಅವರು ಆ ಶಿಕ್ಷಕಿಯನ್ನು ಬಂಧಿಸಬೇಕು ಎಂದು ಒತ್ತಾಯಿಸಿದ್ದಾರೆ ಮತ್ತು ಉತ್ತರಪ್ರದೇಶ ಸರ್ಕಾರವು ಪಕ್ಷಪಾತದ ರೀತಿಯಲ್ಲಿ ಕಾನೂನುಗಳನ್ನು ಜಾರಿಗೆ ತರುತ್ತಿರುವಂತೆ ಕಾಣುತ್ತದೆ, ಇದು ಅತ್ಯಂತ ದುರದೃಷ್ಟಕರ ಎಂದು ಹೇಳಿದ್ದಾರೆ.

ಎಲೆಕ್ಟ್ರಿಕ್ ಬಸ್ಸುಗಳು: ಸಾರ್ವಜನಿಕ ಸಾರಿಗೆಯನ್ನು ಖಾಸಗೀಕರಣಕ್ಕೆ ಇಟ್ಟ ಹೆಜ್ಜೆ



ರಾಜ್ಯ ಸರ್ಕಾರ ಬೆಂಗಳೂರು ನಗರ ವ್ಯಾಪ್ತಿಯಲ್ಲಿ ಮತ್ತು ರಾಜ್ಯದ ಪ್ರಮುಖ ನಗರಗಳ ನಡುವಿನ ಸಂಚಾರಕ್ಕೆ ಎಲೆಕ್ಟ್ರಿಕ್ ಬಸ್ಸುಗಳನ್ನು ಹೆಚ್ಚಿಸಲು ಮುಂದಾಗಿದೆ. ಈಗಾಗಲೇ ಈ ಬಸ್ಸುಗಳು ಸಂಚರಿಸುತ್ತಿವೆ. ಕ್ರಮೇಣ ಎಲೆಕ್ಟ್ರಿಕ್ ಬಸ್ಸುಗಳ ಸಂಖ್ಯೆ ಹೆಚ್ಚಿಸುವ ಮೂಲಕ, ಡೀಸೆಲ್ ಬಳಕೆಯ ಬಸ್ಸುಗಳಿಂದ ಆಗುವ ವಾಯುಮಾಲಿನ್ಯ ತಡೆಗಟ್ಟಬಹುದು ಎಂಬುದು ಸರ್ಕಾರದ ವಾದ. ಇದು ಮೇಲ್ನೋಟಕ್ಕೆ ಸರಿ ಎನಿಸಬಹುದಾದರೂ, ಕರ್ನಾಟಕ ಸೇರಿದಂತೆ ದೇಶದ ಎಲ್ಲಾ ರಾಜ್ಯಗಳಲ್ಲಿಯೂ ಎಲೆಕ್ಟ್ರಿಕ್ ಬಸ್ಸುಗಳ ಹೆಚ್ಚಳದ ಹಿಂದೆ ದೇಶದ ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಸಂಪೂರ್ಣವಾಗಿ ಖಾಸಗಿಯವರ ತೆಕ್ಕೆಗೆ ಒಪ್ಪಿಸುವ ಗುಪ್ತ ಅಜೆಂಡಾ ಇದೆ. ಇದು ಉತ್ಪಾದನೆ, ಸರಕು ಮತ್ತು ಸೇವೆ ಎಲ್ಲವನ್ನೂ ಖಾಸಗಿಯವರಿಗೆ ಒಪ್ಪಿಸುವ ಮತ್ತು ಸರ್ಕಾರ ತನ್ನ ಸಾಮಾಜಿಕ ಜವಾಬ್ದಾರಿಯಿಂದ ಕಳಚಿಕೊಳ್ಳುವ ಒಕ್ಕೂಟ ಸರ್ಕಾರದ ಮುಕ್ತ ಆರ್ಥಿಕ ನೀತಿಗಳ ಒಂದು ಭಾಗವಾಗಿದೆ.

ಎಲೆಕ್ಟ್ರಿಕ್ ಬಸ್‌ಗಳನ್ನು ಖಾಸಗಿ ವ್ಯಕ್ತಿಗಳು ಮತ್ತು ಸಂಸ್ಥೆಗಳು ಖರೀದಿಸುತ್ತಾರೆ. ಅವರಿಗೆ ಪೇಮ್–2 ಯೋಜನೆಯ ಮೂಲಕ ಒಂದು ಬಸ್ಸು ಖರೀದಿಸಲು ಕೇಂದ್ರ ಸರ್ಕಾರ ರೂ. 55 ಲಕ್ಷ ಮತ್ತು ರಾಜ್ಯ ಸರ್ಕಾರಗಳು ರೂ. 33 ಲಕ್ಷ ಸಹಾಯಧನ ನೀಡುತ್ತವೆ. ಅಂದರೆ, ಒಂದು ಬಸ್ಸಿಗೆ ಸರ್ಕಾರದಿಂದ 88 ಲಕ್ಷ ರೂ.ಗಳ ಸಹಾಯಧನ!! ಖಾಸಗಿಯವರು ಆರ್‌ಟಿಸಿ (ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳು) ಮೂಲಕ ಬಸ್ ಓಡಿಸಬೇಕು. ಅದಕ್ಕೆ ಆರ್‌ಟಿಸಿಯವರು ದಿನವೊಂದಕ್ಕೆ ಕನಿಷ್ಟ 225 ಕಿಮೀ ಲೆಕ್ಕದಲ್ಲಿ, ಅದು ಚಲಿಸುವ ಪ್ರತಿ ಕಿಮೀ ಗೆ 51 ರೂ. ಹಣ ಪಾವತಿಸಬೇಕು. ಚಾಲಕರನ್ನು ಬಸ್ ಮಾಲೀಕರೇ ನೇಮಕ ಮಾಡಿಕೊಳ್ಳುತ್ತಾರೆ. ನಿರ್ವಾಹಕರು ಮಾತ್ರ ಸಾರಿಗೆ ಸಂಸ್ಥೆಯ ನೌಕರರಾಗಿರುತ್ತಾರೆ. ಪ್ರಸ್ತುತ, ಕರ್ನಾಟಕದ ಹಲವು ಭಾಗಗಳಲ್ಲಿ ಚಲಿಸುತ್ತಿರುವ ಎಲೆಕ್ಟ್ರಿಕ್ ಬಸ್ಸುಗಳು ಇದೇ ರೀತಿಯಲ್ಲಿ ಸಂಚರಿಸುತ್ತಿವೆ. ಖಾಸಗಿ ವಲಯದವರಿಗೆ ಒಂದು ಬಸ್ಸಿಗೆ ಪ್ರತಿನಿತ್ಯ ಪಾವತಿಸುವ ಮೊತ್ತವು ಕೆಎಸ್‌ಆರ್‌ಟಿಸಿ, ಬಿಎಂಟಿಸಿ ಸಂಸ್ಥೆಗಳಿಗೆ ಒಂದು ಬಸ್ಸಿನಿಂದ ಬರುವ ಆದಾಯಕ್ಕಿಂತ ಹೆಚ್ಚು. ಇದು ದೇಶಾದ್ಯಂತ ಎಲೆಕ್ಟ್ರಿಕ್ ಬಸ್ಸುಗಳ ಕಥೆ.

ದುಬಾರಿ ಬೆಲೆಯ ಎಲೆಕ್ಟ್ರಿಕ್ ಬಸ್

ಪ್ರಪಂಚದ ಎಲ್ಲಾ ದೇಶಗಳು ಪ್ರತಿ ಲಕ್ಷ ಜನಸಂಖ್ಯೆಗೆ ಸರಾಸರಿ 60 ಬಸ್‌ಗಳನ್ನು ಹೊಂದಿವೆ. ಚೀನಾದಲ್ಲಿ ಪ್ರತಿ 1000 ಜನರಿಗೆ 6 ಬಸ್‌ಗಳಿದ್ದರೆ, ಭಾರತದಲ್ಲಿ ಪ್ರತಿ 10,000 ಜನರಿಗೆ ಕೇವಲ 4 ಬಸ್‌ಗಳಿವೆ ಮತ್ತು ದೇಶದಲ್ಲಿ ಶೇ. 90 ರಷ್ಟು ಜನರಿಗೆ ಸ್ವಂತ ವಾಹನಗಳಿಲ್ಲ ಎಂದು ಸ್ವತಃ ಸಾರಿಗೆ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ. ಸಚಿವರ ಪ್ರಕಟಣೆಯು ದೇಶದಲ್ಲಿ ಸಾರ್ವಜನಿಕ ಸಾರಿಗೆಯನ್ನು ಎಷ್ಟು ವಿಸ್ತರಿಸಬೇಕು ಎಂಬುದನ್ನು ತೋರಿಸುತ್ತದೆ.

ಎಲೆಕ್ಟ್ರಿಕ್ ಬಸ್ಸುಗಳ ವಿಷಯಕ್ಕೆ ಬಂದರೆ, ಅವುಗಳ ಬೆಲೆ ಸುಮಾರು ರೂ. 2 ಕೋಟಿ. ಅದೇ ಡೀಸೆಲ್ ಎಂಜಿನ್ ಐಷಾರಾಮಿ ಬಸ್ ಬೆಲೆ ರೂ. 40 ಲಕ್ಷ. ಸಾಮಾನ್ಯ ಬಸ್ಸಿಗೆ ರೂ. 25 ಲಕ್ಷ. ಭಾರತಕ್ಕೆ ಈಗ ಬೇಕಾಗಿರುವುದು ಜನರ ಅಗತ್ಯಕ್ಕೆ ತಕ್ಕಂತೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವುದು. ಇತ್ತೀಚೆಗೆ ಕೇಂದ್ರ ಸಚಿವ ಸಂಪುಟವು 169 ನಗರ/ಪಟ್ಟಣಗಳಲ್ಲಿ 10,000 ಎಲೆಕ್ಟ್ರಿಕ್ ಬಸ್‌ಗಳಿಗೆ ರೂ.20,000 ಕೋಟಿಯನ್ನು ಕೇಂದ್ರದಿಂದ ಭರಿಸಲು ನಿರ್ಧರಿಸಲಾಗಿದೆ. ಅದೇ ವೆಚ್ಚದಲ್ಲಿ 40,000 ಡೀಸೆಲ್ ಬಸ್‌ಗಳನ್ನು ಖರೀದಿಸಬಹುದು. ಇದರಿಂದ ಲಕ್ಷಾಂತರ ನಿರುದ್ಯೋಗಿಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗ ದೊರೆಯಲಿದೆ.

ಎಲೆಕ್ಟ್ರಿಕ್ ಬಸ್ಸುಗಳ ಮುಖ್ಯ ಅಂಶವೆಂದರೆ ಬ್ಯಾಟರಿ. ಇದು ಅತ್ಯಂತ ದುಬಾರಿಯಾಗಿದೆ. ಇದನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕು. ಚಾರ್ಜಿಂಗ್ ನಂತಹ ಮೂಲಸೌಕರ್ಯಗಳನ್ನು ದೊಡ್ಡ ಪ್ರಮಾಣದಲ್ಲಿ ಒದಗಿಸಬೇಕು. ಪ್ರಪಂಚದಾದ್ಯಂತ ಇವುಗಳ ಬಗ್ಗೆ ವ್ಯಾಪಕವಾದ ಸಂಶೋಧನೆಗಳು ನಡೆಯುತ್ತಿವೆ. ನಮ್ಮ ದೇಶದಲ್ಲಿ ಎಲೆಕ್ಟ್ರಿಕ್ ವಾಹನಗಳ ಬ್ಯಾಟರಿಗೆ ಬೇಕಾದ ಲಿಥಿಯಂ ಇತ್ತೀಚೆಗೆ ಕಾಶ್ಮೀರದಲ್ಲಿ ಕಂಡುಬಂದಿದೆ. ಹಾಗಾಗಿ ನಮ್ಮ ದೇಶ ಇನ್ನೂ ಹತ್ತು ವರ್ಷ ಕಾಯಬಹುದು. ಅದೇ ಸಮಯದಲ್ಲಿ, ಖನಿಜ ಸಂಪತ್ತು ಮತ್ತು ಇತರ ಮೂಲಸೌಕರ್ಯಗಳನ್ನು ರಚಿಸಬಹುದು. ಪ್ರಪಂಚದಾದ್ಯಂತ ಎಲೆಕ್ಟ್ರಿಕ್ ಬಸ್‌ಗಳ ಕುರಿತು ಅನೇಕ ಸಂಶೋಧನೆಗಳು ನಡೆಯುತ್ತಿವೆ. ಬೆಲೆಗಳು ಸಹ ಕ್ರಮೇಣ ಕಡಿಮೆಯಾಗುತ್ತವೆ. ಇಷ್ಟು ಅವಸರದ ಅಗತ್ಯವಿದೆಯೇ?

ಪರಿಸರದ ಹಿತದೃಷ್ಟಿಯಿಂದ ಎಂಬುದು ನೆಪಮಾತ್ರ

ಇತ್ತೀಚಿನ ದಿನಗಳಲ್ಲಿ ಕೇಂದ್ರ ಸರ್ಕಾರವು ಎಲೆಕ್ಟ್ರಿಕ್ ಬಸ್‌ಗಳ ಬಗ್ಗೆ ಭಾರಿ ಕ್ರಮಗಳನ್ನು ತೆಗೆದುಕೊಳ್ಳುತ್ತಿದೆ. ಇದಕ್ಕಾಗಿ ಸಾವಿರಾರು ಕೋಟಿ ರೂ.ಗಳನ್ನು ವಿನಿಯೋಗಿಸುತ್ತಿದೆ. ಇದೆಲ್ಲವೂ ಪರಿಸರದ ಹಿತದೃಷ್ಟಿಯಿಂದ ಮಾಡುವುದಾಗಿ ಸರ್ಕಾರ ಹೇಳುತ್ತದೆ. ಇದರ ಸತ್ಯಗಳನ್ನು ನೋಡೋಣ. ಭಾರತದಲ್ಲಿ ಬಿಡುಗಡೆಯಾಗುವ ಮಾಲಿನ್ಯದ ಶೇ. 50 ರಷ್ಟು ಕೈಗಾರಿಕೆಗಳಿಂದ, ಶೇ. 20 ರಿಂದ 30 ರಷ್ಟು ವಾಹನಗಳಿಂದ ಮತ್ತು ಉಳಿದವು ಇತರ ಕಾರಣಗಳಿಂದ ಬರುತ್ತದೆ. ಮಾರ್ಚ್ 31, 2019 ರಂತೆ (ಹೆಚ್ಚಿನ ವಿವರಗಳನ್ನು ಸರ್ಕಾರವು ಇನ್ನೂ ಬಿಡುಗಡೆ ಮಾಡಬೇಕಿದೆ), ದೇಶದಲ್ಲಿ ನೋಂದಾಯಿತ ವಾಹನಗಳಲ್ಲಿ ದ್ವಿಚಕ್ರ ವಾಹನಗಳು ಶೇ. 74 ರಷ್ಟಿದ್ದರೆ, ಕಾರುಗಳು, ಜೀಪ್‌ಗಳು ಮತ್ತು ಟ್ಯಾಕ್ಸಿಗಳು ಶೇ. 12.99 ರಷ್ಟಿದೆ. ಬಸ್ಸುಗಳು ಶೇ. 0.69 ರಷ್ಟು ಮಾತ್ರ. ಅಂದರೆ ಹೊರಸೂಸುವ ಮಾಲಿನ್ಯದಲ್ಲಿ ಬಸ್ ಗಳ ಪಾಲು ನಾಮಮಾತ್ರವಾಗಿದೆ. 2019 ರ ಹೊತ್ತಿಗೆ, ದೇಶದಲ್ಲಿ 10 ಲಕ್ಷದ 47 ಸಾವಿರ ಬಸ್‌ಗಳಿದ್ದು, ಅದರಲ್ಲಿ ರಾಜ್ಯಗಳ ರಸ್ತೆ ಸಾರಿಗೆ ಸಂಸ್ಥೆಗಳ ಬಸ್ಸುಗಳು ಕೇವಲ 1,35,847. ಆರ್.ಟಿ.ಸಿ ಬಸ್ಸುಗಳು ಕನಿಷ್ಠ ಪ್ರಮಾಣದ ಮಾಲಿನ್ಯವನ್ನು ಹೊರಸೂಸುತ್ತವೆ. ಇವೆಲ್ಲ ಸರ್ಕಾರದ ಅಂಕಿಅಂಶಗಳು. ಕೇವಲ ಶೇ. 0.69 ರಷ್ಟಿರುವ ಬಸ್ಸುಗಳ ಮಾಲಿನ್ಯದ ಬಗ್ಗೆ ಇಷ್ಟೊಂದು ಗದ್ದಲವೇಕೆ?

ವಾಹನ ಮಾಲಿನ್ಯದಲ್ಲಿ ಸಿಂಹಪಾಲು ದ್ವಿಚಕ್ರ ವಾಹನಗಳು, ಕಾರುಗಳು, ಜೀಪುಗಳು ಇತ್ಯಾದಿಗಳಿಂದ ಬರುತ್ತಿದೆ. ಅದನ್ನು ನಿಯಂತ್ರಿಸುವುದು ಸಮಸ್ಯೆಗೆ ಪರಿಹಾರವಾಗಿದೆ. ಹೀಗಾಗಬೇಕೆಂದರೆ, ಸಾರ್ವಜನಿಕ ಸಾರಿಗೆಯನ್ನು ಗಣನೀಯವಾಗಿ ಹೆಚ್ಚಿಸುವುದು ಮತ್ತು ಖಾಸಗಿ ವಾಹನಗಳ ಬಳಕೆಯನ್ನು ಕಡಿಮೆ ಮಾಡುವುದು ಅನಿವಾರ್ಯವಾಗಿದೆ. ಆದರೆ ಆ ನಿಟ್ಟಿನಲ್ಲಿ ಸರ್ಕಾರಗಳು ಯಾವ ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ?

ಹಲವು ದೇಶಗಳಲ್ಲಿ ಸಾರ್ವಜನಿಕ ಸಾರಿಗೆಯು ಉಚಿತವಾಗಿದೆ

ಖಾಸಗಿ ವಾಹನಗಳ ಬಳಕೆಯನ್ನು ನಿಯಂತ್ರಿಸಲು (ದೈನಂದಿನ ಅಗತ್ಯಗಳಿಗಾಗಿ) ಮತ್ತು ಸಾರ್ವಜನಿಕ ಸಾರಿಗೆಯ ಬಳಕೆಯನ್ನು ವಿಸ್ತರಿಸಲು ವಿಶ್ವದ ಬಹಳಷ್ಟು ದೇಶಗಳು ಹಲವು ಕ್ರಮಗಳನ್ನು ತೆಗೆದುಕೊಳ್ಳುತ್ತಿವೆ. ಲುಕ್ಸಂಬರ್ಗ್‌ನಲ್ಲಿ ಸಾರ್ವಜನಿಕ ಸಾರಿಗೆಯು ಎಲ್ಲರಿಗೂ ಸಂಪೂರ್ಣವಾಗಿ ಉಚಿತವಾಗಿದೆ. ಅಮೆರಿಕಾದಲ್ಲಿಯೂ ಸಹ, ಸಾರ್ವಜನಿಕ ಸಾರಿಗೆಯು ಉಚಿತವಾಗಿದೆ/ಕೆಲವು ರಾಜ್ಯಗಳು ಮತ್ತು ನಗರಗಳಲ್ಲಿ ತುಂಬಾ ಕಡಿಮೆ ಪ್ರಯಾಣ ದರದಲ್ಲಿ ಸೇವೆ ನೀಡುತ್ತಿವೆ. ವಿಶ್ವದ ಯಾವುದೇ ದೇಶವು ಬಸ್ಸುಗಳ ನಿರ್ವಹಣಾ ವೆಚ್ಚದ ಶೇಕಡಾ 30–40 ಕ್ಕಿಂತ ಹೆಚ್ಚು ಶುಲ್ಕ ವಿಧಿಸುವುದಿಲ್ಲ. ನಿರ್ವಹಣಾ ವೆಚ್ಚದ ಬಹುಪಾಲು ಭಾಗವನ್ನು ಕೇಂದ್ರ, ರಾಜ್ಯ ಮತ್ತು ಸ್ಥಳೀಯ ಸರ್ಕಾರಗಳು ವಿವಿಧ ರೂಪಗಳಲ್ಲಿ ಪೂರೈಸುತ್ತವೆ. ಪ್ರಪಂಚದಲ್ಲಿ ಎಲ್ಲಿಯೂ ಸಾರ್ವಜನಿಕ ಸಾರಿಗೆಯನ್ನು ಲಾಭ ಮತ್ತು ನಷ್ಟದ ಪ್ರಮಾಣದಲ್ಲಿ ಅಳೆಯಲಾಗುವುದಿಲ್ಲ. ಮಾಲಿನ್ಯ ತಡೆಗಟ್ಟುವ ಬಗ್ಗೆ ಮಾತನಾಡುವ ಮೊದಲು ಸಾರ್ವಜನಿಕ ಸಾರಿಗೆಯನ್ನು ವಿಸ್ತರಿಸುವುದು ಮತ್ತು ಕೈಗೆಟುಕುವ ಬೆಲೆಯಲ್ಲಿ ದೈನಂದಿನ ಅಗತ್ಯಗಳಿಗಾಗಿ ಎಲ್ಲರಿಗೂ ಲಭ್ಯವಾಗುವಂತೆ ಮಾಡುವುದು ಮೊದಲ ಕಾರ್ಯವಾಗಬೇಕು.

ಎಲೆಕ್ಟ್ರಿಕ್ ಬಸ್ಸುಗಳ ಬೆಲೆ ಸುಮಾರು ರೂ. 2 ಕೋಟಿ. ಅದೇ ಡೀಸೆಲ್ ಎಂಜಿನ್ ಐಷಾರಾಮಿ ಬಸ್ ಬೆಲೆ ರೂ. 40 ಲಕ್ಷ. ಸಾಮಾನ್ಯ ಬಸ್ಸಿಗೆ ರೂ. 25 ಲಕ್ಷ. ಈಗ ಬೇಕಾಗಿರುವುದು ಜನರ ಅಗತ್ಯಕ್ಕೆ ತಕ್ಕಂತೆ ಬಸ್ಸುಗಳ ಸಂಖ್ಯೆಯನ್ನು ಹೆಚ್ಚಿಸುವುದು. ಇತ್ತೀಚೆಗೆ ಕೇಂದ್ರ ಸಚಿವ ಸಂಪುಟವು 169 ನಗರ/ಪಟ್ಟಣಗಳಲ್ಲಿ 10,000 ಎಲೆಕ್ಟ್ರಿಕ್ ಬಸ್‌ಗಳಿಗೆ ರೂ. 20,000 ಕೋಟಿಯನ್ನು ಕೇಂದ್ರ ಭರಿಸಲು ನಿರ್ಧರಿಸಲಾಗಿದೆ. ಅದೇ ವೆಚ್ಚದಲ್ಲಿ 40,000 ಡೀಸೆಲ್ ಬಸ್‌ಗಳನ್ನು ಖರೀದಿಸಬಹುದು. ಇದರಿಂದ ಲಕ್ಷಾಂತರ ನಿರುದ್ಯೋಗಿಗಳಿಗೆ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಉದ್ಯೋಗ ದೊರೆಯಲಿದೆ.

ಕೇಂದ್ರ ಸರ್ಕಾರವು 2015 ರಿಂದ FAME 1 ಮತ್ತು 2019 ರಿಂದ FAME 2 ಅನ್ನು ಪರಿಚಯಿಸಿತು (ಹೈಬ್ರಿಡ್ ಮತ್ತು ಎಲೆಕ್ಟ್ರಿಕ್ ವಾಹನಗಳ ವೇಗದ ಅಳವಡಿಕೆ ಮತ್ತು ಉತ್ಪಾದನೆ). ಫೇಮ್ 2ರ ನಿಯಮದೊಳಗೆ ಬಸ್ ಗಳ ಖರೀದಿ, ನಿರ್ವಹಣೆ ಹಾಗೂ ಚಾಲನೆಯನ್ನು ಖಾಸಗಿಯವರೇ ಮಾಡಬೇಕು ಎಂಬ ಷರತ್ತನ್ನು ಕೇಂದ್ರ ವಿಧಿಸಿದೆ. ಇದಕ್ಕಾಗಿ ಜಿ.ಸಿ.ಸಿ. (ಒಟ್ಟು ವೆಚ್ಚದ ಒಪ್ಪಂದ). ಅದು ವೆಚ್ಚಗಳು ಮತ್ತು ಪ್ರಯೋಜನಗಳನ್ನು ಒಳಗೊಂಡಂತೆ ನಿರ್ಧರಿಸುವುದು. ಇದು ಎಲೆಕ್ಟ್ರಿಕ್ ಬಸ್‌ಗಳ ಕಥೆಯಲ್ಲಿನ ನಿಜವಾದ ರಹಸ್ಯ. ಜನರ ಹಣವನ್ನು ಕೆಲವೇ ವ್ಯಕ್ತಿಗಳಿಗೆ ಕೊಡುವುದು ಮತ್ತು ಸಾರ್ವಜನಿಕ ವಲಯವನ್ನು ನಾಶಪಡಿಸುವುದು ಇದರ ಅಂತಿಮ ಗುರಿಯಾಗಿದೆ.

ಸಾರ್ವಜನಿಕ ವಲಯವನ್ನು ನಾಶಮಾಡಿ ಖಾಸಗಿಯವರಿಗೆ ಹಸ್ತಾಂತರಿಸಲು

ಇದರ ಹಿಂದೆ ಮತ್ತೊಂದು ದೊಡ್ಡ ಷಡ್ಯಂತ್ರ ಅಡಗಿದೆ. ಜಾಗತಿಕ ತಾಪಮಾನದ (ಪರಿಸರ ಸಂರಕ್ಷಣೆ) ಹೆಸರಿನಲ್ಲಿ, ಪಳೆಯುಳಿಕೆ ಇಂಧನಗಳ ಬಳಕೆಯನ್ನು ಗಣನೀಯವಾಗಿ ಕಡಿಮೆ ಮಾಡಲು ಮತ್ತು ಪರ್ಯಾಯ ಇಂಧನಗಳ ಬಳಕೆಯನ್ನು ಹೆಚ್ಚಿಸಲು ವಿಶ್ವ ಬ್ಯಾಂಕ್ ಆದೇಶಿಸುತ್ತದೆ. ಅಮೇರಿಕಾ ವಿಶ್ವದ ಅತ್ಯಂತ ಮಾಲಿನ್ಯಕಾರಕ ದೇಶವಾಗಿದೆ (ಶೇ. 27). ಅದರ ನಂತರ ಯುರೋಪಿಯನ್ ದೇಶಗಳಲ್ಲಿ 22 ಪ್ರತಿಶತ, ದಕ್ಷಿಣ ಮತ್ತು ಆಗ್ನೇಯ ದೇಶಗಳು ಕೇವಲ 9 ಪ್ರತಿಶತ. ಜಗತ್ತಿನಲ್ಲಿ ಅತಿ ಹೆಚ್ಚು ಮಾಲಿನ್ಯವನ್ನು ಉಂಟುಮಾಡುವ ಮೂಲಕ ಜನಜೀವನ ಮತ್ತು ಪರಿಸರವನ್ನು ಕಲುಷಿತಗೊಳಿಸುತ್ತಿರುವ ಅಮೇರಿಕಾ ಮತ್ತು ಯುರೋಪಿಯನ್ ರಾಷ್ಟ್ರಗಳು ಮುಖ್ಯ ಜವಾಬ್ದಾರಿಯನ್ನು ತೆಗೆದುಕೊಳ್ಳಬೇಕು. ಆ ದೇಶಗಳು ಇದಕ್ಕೆ ಸಿದ್ಧವಿಲ್ಲ. ಆದರೆ ಅಮೆರಿಕದ ಜೂನಿಯರ್ ಪಾಲುದಾರರಾಗಿರುವ ನರೇಂದ್ರ ಮೋದಿಯವರ ಸರಕಾರ ದೇಶವನ್ನು ಹಾಳು ಮಾಡುತ್ತಿದೆ. ಕಲ್ಲಿದ್ದಲು ಭಾರತದ ಇಂದನ ಉತ್ಪಾದನೆಯ ಶೇಕಡಾ 25 ರಷ್ಟಿದ್ದರೆ, ಪಳೆಯುಳಿಕೆ ಇಂಧನಗಳು ಶೇಕಡಾ 44 ರಷ್ಟಿದೆ. ದೇಶದಲ್ಲಿ ವಿದ್ಯುತ್ ಉತ್ಪಾದನೆಯು ಮುಖ್ಯವಾಗಿ ಶೇ. 78 ರಷ್ಟು ಥರ್ಮಲ್ ವಿದ್ಯುತ್ ಆಗಿದೆ. ಕಲ್ಲಿದ್ದಲು ಇದಕ್ಕೆ ಪ್ರಮುಖವಾಗಿದೆ. ಪಳೆಯುಳಿಕೆ ಇಂಧನಗಳು ಮತ್ತು ಅದಕ್ಕೆ ಸಂಬಂಧಿಸಿದ ಕೈಗಾರಿಕೆಗಳು 2 ಕೋಟಿ 15 ಲಕ್ಷ ಜನರಿಗೆ ಉದ್ಯೋಗ ನೀಡುತ್ತಿವೆ. ವಿದ್ಯುತ್ ಉತ್ಪಾದನೆಯಲ್ಲಿ ಸಾರ್ವಜನಿಕ ವಲಯದ ಪಾಲು ಸಿಂಹಪಾಲು. ಪವನ ಮತ್ತು ಸೌರಶಕ್ತಿಯಂತಹ ಹೊಸ ವಿದ್ಯುತ್ ಉತ್ಪಾದನೆಯಲ್ಲಿ 96 ಪ್ರತಿಶತ ಖಾಸಗಿ ವಲಯವಾಗಿದೆ. ಇಂತಹ ಬಹುಮುಖ್ಯವಾದ ಸಾರ್ವಜನಿಕ ವಲಯವನ್ನು ನಾಶಮಾಡಿ ಖಾಸಗಿಯವರಿಗೆ ಹಸ್ತಾಂತರಿಸಲು ಮೋದಿ ಸರಕಾರ ಸಂಕಲ್ಪ ಮಾಡಿದ್ದು, ಕೋಟಿಗಟ್ಟಲೆ ಜನರನ್ನು ನಿರುದ್ಯೋಗದ ಸೇನೆಗೆ ತಳ್ಳಲಿದೆ. ಅಮೆರಿಕಕ್ಕೆ ಶರಣಾಗುವ ಮೂಲಕ ಕಾರ್ಪೊರೇಟ್‌ಗಳಿಗೆ ಉತ್ತೇಜನ ನೀಡುವುದು ಮೋದಿ ಸರ್ಕಾರದ ಎಲೆಕ್ಟ್ರಿಕ್ ಬಸ್‌ಗಳ ಕಲ್ಪನೆ. ಈ ಪಿತೂರಿಗಳನ್ನು ಅರ್ಥಮಾಡಿಕೊಳ್ಳಬೇಕು.

ಸಾರಿಗೆ ಸಂಸ್ಥೆಯ ನೌಕರರು ಉದ್ಯೋಗ ಕಳೆದುಕೊಳ್ಳುತ್ತಾರೆ

ಈ ಬಸ್ಸುಗಳ ಚಾಲಕರನ್ನು ಮತ್ತು ಬಸ್ಸುಗಳ ದುರಸ್ಥಿ ಹಾಗೂ ನಿರ್ವಹಣೆ

ಪುಟ 06 ಕ್ಕೆ

ಸರಕಾರದ ನೀತಿ–ನಿರ್ಧಾರಗಳಿಂದ ಮನರೇಗದ ಮೇಲೆ ನಕಾರಾತ್ಮಕ ಪರಿಣಾಮಗಳು

ಸೂಕ್ತ ಕ್ರಮಗಳನ್ನು ಕೈಗೊಳ್ಳಿ– ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಬೃಂದಾ ಕಾರಟ್ ಪತ್ರ

ಸಿಪಿಐ(ಎಂ) ಪೊಲಿಟ್ ಬ್ಯೂರೋ ಸದಸ್ಯೆ ಬೃಂದಾ ಕಾರಟ್ ಅವರು ಆಗಸ್ಟ್ 30ರಂದು ಭಾರತ ಸರ್ಕಾರದ ಗ್ರಾಮೀಣಾಭಿವೃದ್ಧಿ ಸಚಿವರಾದ ಶ್ರೀ ಗಿರಿರಾಜ್ ಸಿಂಗ್ ಅವರಿಗೆ ಪತ್ರವನ್ನು ಬರೆದು ಮಹಾತ್ಮಗಾಂಧಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ಸಂಬಂಧಪಟ್ಟಂತೆ ಕೇಂದ್ರ ಸರ್ಕಾರವು ತೆಗೆದುಕೊಂಡ ಹಲವಾರು ನೀತಿ ನಿರ್ಧಾರಗಳು ಕೆಲಸಗಾರರ ಮೇಲೆ, ಅದರಲ್ಲೂ ಮಹಿಳಾ ಕೂಲಿಕಾರರ ಮೇಲೆ ನಕಾರಾತ್ಮಕ ಪರಿಣಾಮಗಳನ್ನು ಬೀರಿವೆ ಎಂಬ ಸಂಗತಿಯತ್ತ ಗಮನ ಸೆಳೆದಿದ್ದಾರೆ. ಬೃಂದಾ ಕಾರಟ್ 2004ರಲ್ಲಿ ಅಧಿಕಾರಕ್ಕೆ ಬಂದ ಯುಪಿಎ–1 ಸರಕಾರದ ಅವಧಿಯಲ್ಲಿ ಈ ಕಾಯಿದೆಯನ್ನು ರೂಪಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದವರು ಎಂದು ಇಲ್ಲಿ ನೆನಪಿಸಿಕೊಳ್ಳಬಹುದು.

ಈ ಯೋಜನೆಯ ಅನುಷ್ಠಾನಕ್ಕೆ ನೀಡಲಾಗುತ್ತಿರುವ ನಿಧಿ ಏನೇನೂ ಸಾಲದು ಎಂಬುದು ಈ ವರ್ಷದಲ್ಲಿ ಇದಕ್ಕೆ ನೀಡಿದ ನಿಧಿಯಲ್ಲಿ 91% ಐದು ತಿಂಗಳಲ್ಲೇ ಖರ್ಚಾಗಿದೆ, ಆದರೆ ಉದ್ಯೋಗ ನಿರ್ಮಾಣ ಸರಾಸರಿ ಕೇವಲ 35.4 ದಿನಗಳು ಎಂಬ ಸರಕಾರದ ಅಂಕಿಅಂಶಗಳಲ್ಲೇ ಕಾಣುತ್ತದೆ ಎಂದು ಬೃಂದಾ ಕಾರಟ್ ತಮ್ಮ ಪತ್ರದಲ್ಲಿ ಹೇಳಿದ್ದಾರೆ.

ಕೂಲಿಗಳ ಸಕಾಲಿಕ ಪಾವತಿಗೆ ನೆರವಾಗುತ್ತದೆ ಎಂದು ತಂದಿರುವ ಆಧಾರ್‌ಗೆ ಜೋಡಿಸಿದ ಕೂಲಿ ಪಾವತಿ ವ್ಯವಸ್ಥೆಯಿಂದ ಕೂಲಿಕಾರರಿಗೆ ಯಾವುದೇ ಗಮನಾರ್ಹ ಪ್ರಯೋಜನವಿಲ್ಲದಿದ್ದರೂ, ಗಮನಾರ್ಹವಾದ ನಷ್ಟಗಳಾಗುತ್ತಿರುವುದರ ಬಗ್ಗೆ ಖಂಡಿತವಾಗಿಯೂ ಪುರಾವೆಗಳಿವೆ ಎಂದು ಅವರು ಹೇಳಿದ್ದಾರೆ.

ಆನ್‌ಲೈನ್ ಹಾಜರಾತಿ ನೋಂದಣಿ ವ್ಯವಸ್ಥೆಯ ಬಗ್ಗೆ ಬಹಳಷ್ಟು ದೂರುಗಳು ಕೇಳಬಂದಿವೆ, ಮುಖ್ಯವಾಗಿ ಮಹಿಳಾ ಕೂಲಿಕಾರರು ಇದಕ್ಕಾಗಿ ಸಂಪರ್ಕದ ಕೊರತೆಯಿಂದಾಗಿ ಕೆಲವೊಮ್ಮೆ ತಮ್ಮ ಹಾಜರಾತಿ ನೋಂದಣಿಗೆ ಹೆಚ್ಚುವರಿ ಒಂದು ಗಂಟೆ ವ್ಯಯಿಸಬೇಕಾಗುತ್ತದೆ ಎಂದು ಕಂಡು ಬಂದಿದೆ. ಹಾಜರಾತಿ ನೋಂದಣಿಯಾಗದೆ ಕೂಲಿ ನಿರಾಕರಣೆಗೆ ಕಾರಣವಾದ ಉದಾಹರಣೆಗಳೂ ಇವೆ.

ಇದಲ್ಲದೆ, ಮಹಿಳಾ ಕೆಲಸದ ಮಾನದಂಡಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಪರಿಸ್ಥಿತಿಯಲ್ಲಿ ಮನರೇಗ ಕೆಲಸದ ಸ್ಥಳಗಳು ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸಲು ಕಡಿಮೆ ದರದಲ್ಲಿ ಮಹಿಳಾ ಶ್ರಮವನ್ನು ಕೀಳುವ ಉದಾಹರಣೆಗಳಾಗಿವೆ ಎಂದಿರುವ ಬೃಂದಾ ಕಾರಟ್, ಈ ಪ್ರಶ್ನೆಗಳನ್ನು ಪರಿಶೀಲಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಗ್ರಾಮೀಣಾಭಿವೃದ್ಧಿ ಮಂತ್ರಿಗಳಿಗೆ ಹೇಳಿದ್ದಾರೆ.

ಅವರ ಪತ್ರದ ಪೂರ್ಣ ಪಾಟವನ್ನು ಈ ಮುಂದೆ ಕೊಡಲಾಗಿದೆ:

ಶ್ರೀ ಗಿರಿರಾಜ್ ಸಿಂಗ್ ಜೀ,

ನಮಸ್ಕಾರ. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ(ಮನರೇಗ) ಗೆ ಸಂಬಂಧಿಸಿದಂತೆ ಸರ್ಕಾರವು ತೆಗೆದುಕೊಂಡ ಹಲವಾರು ನೀತಿ ನಿರ್ಧಾರಗಳ ನಕಾರಾತ್ಮಕ ಪರಿಣಾಮದ ಬಗ್ಗೆ ನಿಮ್ಮ ಗಮನವನ್ನು ಸೆಳೆಯಲು ನಾನು ನಿಮಗೆ ಈ ಪತ್ರವನ್ನು ಬರೆಯುತ್ತಿದ್ದೇನೆ. ಈ ಕಾಯಿದೆಯನ್ನು ಮತ್ತು ಕಾರ್ಮಿಕರ ಹಕ್ಕುಗಳಿಗೆ ಸಂಬಂಧಿಸಿದ ವಿಧಿಗಳನ್ನು ಅಂತಿಮಗೊಳಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡವರಲ್ಲಿ ಒಬ್ಬಳಾಗಿ ಬೇಡಿಕೆ ಆಧಾರಿತ ಕೆಲಸ ಪಡೆಯುವ ಕಾರ್ಮಿಕರ ಹಕ್ಕುಗಳಿಗೆ ಧಕ್ಕೆಯಾಗುತ್ತಿರುವುದು ನನಗೆ ಅತ್ಯಂತ ಕಳವಳಕಾರಿ ವಿಷಯವಾಗಿದೆ. ನಿಧಿ ಹಂಚಿಕೆ ಶೋಚನೀಯ ರೀತಿಯಲ್ಲಿ ಅಸಮರ್ಪಕವಾಗಿದೆ. ಸಚಿವಾಲಯದ ವೆಬ್‌ಸೈಟ್‌ನಲ್ಲಿನ ಅಂಕಿಅಂಶಗಳ ಪ್ರಕಾರ, ಹಂಚಿಕೆಯಾದ ಶೇಕಡಾ 91 ರಷ್ಟು ಹಣವನ್ನು ಈಗಾಗಲೇ ಖರ್ಚು ಮಾಡಲಾಗಿದೆ. ಪ್ರಸ್ತುತ ಸರಾಸರಿ ಕೆಲಸದ ದಿನಗಳು ಕೇವಲ 35.4 ದಿನಗಳು. ಇಂತಹ ಪರಿಸ್ಥಿತಿಯಲ್ಲಿ ಮನರೇಗ ಕಾರ್ಮಿಕರು ತೀವ್ರ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಇದಲ್ಲದೆ, ಕೆಲಸದ ಸ್ಥಳದಲ್ಲಿ ಹಾಜರಾತಿಯ ಆನ್‌ಲೈನ್ ನೋಂದಣಿ ಮತ್ತು ಆಧಾರ್ ಆಧಾರಿತ ಪಾವತಿಗಳಂತಹ ಪಾಲಿಸಲೇಬೇಕಾದ ಷರತ್ತುಗಳು ಕಾನೂನಿನಲ್ಲಿ ಅಂತರ್ಗತವಾಗಿರುವ ಬೇಷರತ್ತಾದ ಹಕ್ಕುಗಳು ಜಾಬ್ ಕಾರ್ಡ್ ಹೊಂದಿರುವವರಿಗೆ ನಿರ್ಬಂಧಿತ ರೀತಿಯಲ್ಲಷ್ಟೇ ಲಭ್ಯವಾಗುವಂತೆ ಮಾಡಿವೆ.

ಆಧಾರ್ ಗೆ ಜೋಡಿಸಿದ ಕೂಲಿ ಪಾವತಿ ವ್ಯವಸ್ಥೆ ತಂದಿರುವುದು ಕೂಲಿಗಳ ಸಕಾಲಿಕ ಪಾವತಿಯಲ್ಲಿ ಹೆಚ್ಚಿನ ಬದಲಾವಣೆಯನ್ನೇನೂ ತಂದಿಲ್ಲ. ಜೂನ್‌ನಲ್ಲಿ, ಸರ್ಕಾರವು ಪಿಐಬಿ ನಿಂದ ನೀಡಿದ ಪತ್ರಿಕಾ ಪ್ರಕಟಣೆಯಲ್ಲಿ ಸಚಿವಾಲಯವು ಆಧಾರ್ ಸಕ್ರಿಯ ಪಾವತಿ ವ್ಯವಸ್ಥೆಗೆ ಒತ್ತಾಯಿಸುತ್ತಿಲ್ಲ, ಬದಲಿಗೆ ಹೆಚ್ಚಿನ ಹೊಂದಾಣಿಕೆಗೆ ಅವಕಾಶವಿರುವ ಆಧಾರ್ ಆಧಾರಿತ ಪಾವತಿ ವ್ಯವಸ್ಥೆಯ (ಎಬಿಪಿಎಸ್) ಭರವಸೆ ನೀಡಿತ್ತು. ಆದಾಗ್ಯೂ, ಆಗಸ್ಟ್ 30, 2023 ರಂದು 'ದಿ ಹಿಂದೂ' ದೈನಿಕದಲ್ಲಿ ವರದಿಯಾದ ಸಂಸ್ಥೆಯೊಂದು ನಡೆಸಿದ ಸಮೀಕ್ಷೆಯು "ಒಟ್ಟು 26 ಕೋಟಿ ಜಾಬ್‌ಕಾರ್ಡುದಾರರಲ್ಲಿ ಶೇಕಡಾ 41.1 ರಷ್ಟು ಜನರು ಈ ಪಾವತಿ ವಿಧಾನಕ್ಕೆ ಇನ್ನೂ ಅರ್ಹರಾಗಿಲ್ಲ. ಹೆಚ್ಚಿನ ಸಂಖ್ಯೆಯ ಸಕ್ರಿಯ ಜಾಬ್ ಕಾರ್ಡುದಾರರನ್ನು ಹೊಂದಿರುವ ಐದು ರಾಜ್ಯಗಳಿಂದ, 1.2 ಕೋಟಿ ಕಾರ್ಮಿಕರು ಎಬಿಪಿಎಸ್ ಖಾತೆಗಳನ್ನು ಹೊಂದಿಲ್ಲದ ಕಾರಣ ಪಾವತಿಗಳಿಗೆ ಅರ್ಹರಾಗಿರುವುದಿಲ್ಲ." ಎಂಬ ಸಂಗತಿಯನ್ನು ಹೊರಗೆಡಹಿದೆ. ಸರ್ಕಾರದ ಕೇಂದ್ರ ಮಾಹಿತಿ ಭಂಡಾರದಲ್ಲಿ ದಾಖಲಾದ ದತ್ತಾಂಶದ ವಿಶ್ಲೇಷಣೆಯ ಆಧಾರದ ಮೇಲೆ ಸಮೀಕ್ಷೆಯು ಎಬಿಪಿಎಸ್ ಮತ್ತು ಸಾಮಾನ್ಯ ಖಾತೆಯ ವಹಿವಾಟುಗಳ ನಡುವೆ ಪಾವತಿಗಳಿಗೆ ತೆಗೆದುಕೊಂಡ ಸಮಯದ ಪ್ರಮಾಣಕ್ಕೆ ಅಥವಾ ಶೇಕಡಾವಾರು ನಿರಾಕರಣೆಗಳಿಗೆ ಸಂಬಂಧಿಸಿದಂತೆ ವ್ಯತ್ಯಾಸ ಸಂಖ್ಯಾಶಾಸ್ತ್ರೀಯವಾಗಿ ಬಹಳ ಕಡಿಮೆ ಎಂದು ತೋರಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಇಲ್ಲಿಯವರೆಗೆ ಇದರಿಂದ ಕೂಲಿಕಾರರಿಗೆ ಯಾವುದೇ ಗಮನಾರ್ಹ ಪ್ರಯೋಜನವಿಲ್ಲದಿದ್ದರೂ, ಗಮನಾರ್ಹವಾದ ನಷ್ಟಗಳಾಗುತ್ತಿರುವುದರ ಬಗ್ಗೆ ಖಂಡಿತವಾಗಿಯೂ ಪುರಾವೆಗಳಿವೆ.

ಕಳೆದ ಆರು ತಿಂಗಳಲ್ಲಿ ನಾನು ಮನರೇಗ ಸ್ಥಳಗಳಿಗೆ ಭೇಟಿ ನೀಡಿದ್ದೇನೆ ಮತ್ತು ಹಲವು ರಾಜ್ಯಗಳಾದ್ಯಂತ ಕೂಲಿಕಾರರೊಂದಿಗೆ ಸಂವಾದ ನಡೆಸಿದ್ದೇನೆ. ದಿನದ ನಿರ್ದಿಷ್ಟ ಸಮಯದಲ್ಲಿ ಕೆಲಸದ ಸ್ಥಳದಲ್ಲಿ ಆನ್‌ಲೈನ್ ನೋಂದಣಿಗಳ ಮೂಲಕ ಹಾಜರಾತಿ ವ್ಯವಸ್ಥೆಯನ್ನು ತಂದಿರುವ ಬಗ್ಗೆ ದೂರುಗಳು ಸಾಮಾನ್ಯವಾಗಿ ಕೇಳಬಂದವು. ಗ್ರಾಮೀಣ ಭಾರತದ ವಿಶಾಲ ಪ್ರದೇಶಗಳಲ್ಲಿ, ವಿಶೇಷವಾಗಿ ದೂರದ ಬುಡಕಟ್ಟು ಪ್ರದೇಶಗಳಲ್ಲಿ ಸಂಪರ್ಕವು ತುಂಬಾ ಕಳಪೆಯಾಗಿದೆ, ಕಡ್ಡಾಯ ಆನ್‌ಲೈನ್ ನೋಂದಣಿಯು ಕೂಲಿಕಾರರಿಗೆ ಹೆಚ್ಚಿನ ತೊಂದರೆಗಳಿಗೆ ಕಾರಣವಾಗುತ್ತಿದೆ. ಅನೇಕ ರಾಜ್ಯಗಳಲ್ಲಿ ಬಹುಪಾಲು ಮನರೇಗ ಕೂಲಿಕಾರರು ಮಹಿಳೆಯರೇ ಆಗಿರುವಲ್ಲಿ ಇದು ವಿಶೇಷವಾಗಿ ತಟ್ಟಿದೆ. ನಿಮಗೆ ತಿಳಿದಿರುವಂತೆ, ನಮ್ಮ ಪಿತೃಪ್ರಧಾನ ಸಂಸ್ಕೃತಿಗಳಲ್ಲಿ ಮನೆಕೆಲಸ ಮತ್ತು ಕುಟುಂಬದ ಆರೈಕೆಯ ಮುಖ್ಯ ಜವಾಬ್ದಾರಿಯನ್ನು ಮಹಿಳೆಯರ ಮೇಲೆ ಹೊರಿಸಲಾಗುತ್ತದೆ. ತಮ್ಮ ಮನರೇಗ ಕೆಲಸದ ದಿನದ ಮೊದಲು ಮತ್ತು ನಂತರ ಮಹಿಳೆಯರು ಇನ್ನೂ ಹೆಚ್ಚಿನ ಗಂಟೆಗಳ ಕೆಲಸವನ್ನು ಮಾಡುತ್ತಾರೆ. ಆದರೆ, ಸಂಪರ್ಕದ ಕೊರತೆಯಿಂದಾಗಿ ಕೆಲವೊಮ್ಮೆ ತಮ್ಮ ಹಾಜರಾತಿ ನೋಂದಣಿಗೆ ಹೆಚ್ಚುವರಿ ಒಂದು ಗಂಟೆ ವ್ಯಯಿಸಬೇಕಾಗುತ್ತದೆ ಎಂದು ಅವರು ದೂರುತ್ತಾರೆ. ಹಾಜರಾತಿ ನೋಂದಣಿಯಾಗದೆ ಕೂಲಿ ನಿರಾಕರಣೆಗೆ ಕಾರಣವಾದ ಉದಾಹರಣೆಗಳೂ ಇವೆ.

ಮಹಿಳಾ ಕಾರ್ಮಿಕರೊಂದಿಗಿನ ನನ್ನ ಸಂವಾದದಲ್ಲಿ, ಎಸ್‌ಒಆರ್(ಕೂಲಿದರಗಳ ಪಟ್ಟಿ) ಗಳು ಮತ್ತು ನಿರ್ಧರಿಸಿದ ಪೀಸ್‌ರೇಟ್‌ಗಳನ್ನು ಪೂರ್ಣಗೊಳಿಸುವುದು ತುಂಬಾ ಕಷ್ಟ ಎಂದು ನನಗೆ ಕಂಡುಬಂದಿದೆ. ಮಹಿಳಾ ಕೆಲಸದ ಮಾನದಂಡಗಳಿಗೆ ಸಂಬಂಧಿಸಿದಂತೆ ಪ್ರಸ್ತುತ ಪರಿಸ್ಥಿತಿಯಲ್ಲಿ ಮನರೇಗ ಸ್ಥಳಗಳು ಸಾರ್ವಜನಿಕ ಆಸ್ತಿಗಳನ್ನು ನಿರ್ಮಿಸಲು ಕಡಿಮೆ ದರದಲ್ಲಿ ಮಹಿಳಾ ಶ್ರಮವನ್ನು ಕೀಳುವ ಉದಾಹರಣೆಗಳಾಗಿವೆ. ಮನರೇಗ ಸ್ಥಳಗಳಲ್ಲಿ ಯಾವುದೇ ಸಚಿವಾಲಯವು ಇತ್ತೀಚಿನ ದಿನಗಳಲ್ಲಿ ಸಮಯದ ಬಳಕೆಯ ಸಮೀಕ್ಷೆಗಳನ್ನು ಪ್ರಾರಂಭಿಸಿಲ್ಲ. ಈ ಹಿಂದೆ ಅನೇಕ ರಾಜ್ಯಗಳಲ್ಲಿ, ಇಂತಹ ಸಮೀಕ್ಷೆಗಳ ನಂತರ ಮಹಿಳೆಯರಿಗೆ ಕೆಲಸದ ಮಾನದಂಡಗಳನ್ನು ನಿರ್ಧರಿಸಲಾಯಿತು. ಇದು ತುರ್ತು ಅವಶ್ಯಕತೆಯಾಗಿದೆ.

ನಾನು ಎತ್ತಿರುವ ಸಮಸ್ಯೆಗಳನ್ನು ಪರಿಗಣಿಸಿ ಸೂಕ್ತ ಕ್ರಮ ಕೈಗೊಳ್ಳುವಿರಿ ಎಂದು ಭಾವಿಸುತ್ತೇನೆ."



ಸಾರ್ವಜನಿಕ ಸಾರಿಗೆಯನ್ನು ಖಾಸಗೀಕರಣಕ್ಕೆ ಇಟ್ಟ ಹೆಜ್ಜೆ.... ಪುಟ 5 ರಿಂದ

ಕಾರ್ಯಕ್ಕೆ ನೇಮಕಗೊಳ್ಳುವ ಮೆಕಾನಿಕ್ ಗಳು, ಹೆಲ್ಪರ್‌ಗಳು ಮತ್ತು ಇತರೆ ಕಾರ್ಮಿಕರನ್ನು ಅದರ ಮಾಲೀಕರು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳುವುದರಿಂದ ಈ ಎಲ್ಲಾ ಕಾರ್ಮಿಕರು, ಸರ್ಕಾರಿ ಸ್ವಾಮ್ಯದ ಸಾರಿಗೆ ಸಂಸ್ಥೆಗಳ ನೌಕರರಿಗೆ ಸಿಗುವ ವೇತನ ಮತ್ತು ಇತರೆ ಸೌಲಭ್ಯಗಳಿಂದ ವಂಚಿತರಾಗುತ್ತಾರೆ. ಎಲೆಕ್ಟ್ರಿಕ್ ಬಸ್ಸುಗಳ ಸಂಖ್ಯೆ ಹೆಚ್ಚಾದಂತೆ, ಈಗಿರುವ ಡೀಸೆಲ್ ಚಾಲಿತ ಬಸ್ಸುಗಳ ಸಂಖ್ಯೆ ಕಡಿಮೆಯಾಗುತ್ತಾ ಹೋಗುತ್ತದೆ. ಕಡೆಗೊಮ್ಮೆ ಸಾರ್ವಜನಿಕ ಸಾರಿಗೆ ಸೇವೆ ಸಂಪೂರ್ಣವಾಗಿ ಖಾಸಗಿಯವರ ಪಾಲಾಗುತ್ತದೆ. ರಾಜ್ಯ ರಸ್ತೆ ಸಾರಿಗೆ ಸಂಸ್ಥೆಗಳಲ್ಲಿ ಮತ್ತು ಬಿಎಂಟಿಸಿ ಯಲ್ಲಿ ಈಗ ದುಡಿಯುತ್ತಿರುವ ಬಹುತೇಕ ನೌಕರರು ತಮ್ಮ ಉದ್ಯೋಗ ಕಳೆದುಕೊಳ್ಳಬೇಕಾದ ಅನಿವಾರ್ಯ ಸ್ಥಿತಿ ಬರುತ್ತದೆ.

ದುಬಾರಿ ಪ್ರಯಾಣ ದರದ ಅಪಾಯ

ಮತ್ತೊಂದೆಡೆ, ಖಾಸಗಿಯವರು ಸಾರಿಗೆ ಸೇವಾ ವಲಯವನ್ನು ಏಕಸ್ವಾಮ್ಯ ಮಾಡಿಕೊಂಡ ನಂತರ, ಬಸ್ ಪ್ರಯಾಣದರ ನಿಗದಿ ಸರ್ಕಾರದ ಕೈ ತಪ್ಪಿಹೋಗುತ್ತದೆ. ಖಾಸಗಿಯವರು ತಮಗೆ ಇಷ್ಟ ಬಂದಂತೆ ದರ ನಿಗದಿ ಮಾಡುತ್ತಾರೆ. ಇದಕ್ಕೆ ಇಂದಿನ ಉದಾಹರಣೆ ಟ್ಯಾಕ್ಸಿ ಸೇವಾ ವಲಯದಲ್ಲಿ ಈಗಾಗಲೇ ಬಹುತೇಕ ಏಕಸ್ವಾಮ್ಯ ಮಾಡಿಕೊಂಡಿರುವ ಓಲಾ, ಉಬರ್ ನಂತಹ ಸಂಸ್ಥೆಗಳು ಮನಸೋಯಿಚ್ಛೆ ಪ್ರಯಾಣದರ ನಿಗದಿಪಡಿಸುವ ಮೂಲಕ ತನ್ನ ಟ್ಯಾಕ್ಸಿ ಮತ್ತು ಆಟೋ ಗ್ರಾಹಕರಿಂದ ಮಾಡುತ್ತಿರುವ ಸುಲಿಗೆ. ಈ ಸಂಸ್ಥೆಗಳನ್ನು ನಿಯಂತ್ರಿಸಲು ಸರ್ಕಾರ ಅಥವಾ ಸಾರಿಗೆ ಇಲಾಖೆಯಿಂದ ಸಾಧ್ಯವಾಗುತ್ತಿಲ್ಲ ಎಂಬುದನ್ನು ನಾವಿಲ್ಲಿ ಗಮನಿಸಬೇಕು. ಜನರಿಗೆ ಸಾರಿಗೆ ಸೌಲಭ್ಯ ಒದಗಿಸುವ ಜವಾಬ್ದಾರಿಗಿಂತ ಲಾಭ ಗಳಿಸುವುದೇ ಖಾಸಗಿಯವರಿಗೆ ಮುಖ್ಯವಾಗಿರುವ ಕಾರಣದಿಂದ, ಪ್ರಯಾಣಿಕರ ಸಂಖ್ಯೆ ಕಡಿಮೆ ಇರುವ ಕಡೆಗಳಲ್ಲಿ ಬಸ್ ಓಡಿಸುವುದನ್ನು ಸ್ಥಗಿತಗೊಳಿಸುತ್ತಾರೆ. ಕೇಂದ್ರ ಸರ್ಕಾರದ ಖಾಸಗೀಕರಣ ನೀತಿಗಳು ಏನೆಲ್ಲಾ ಪರಿಣಾಮ ಬೀರುತ್ತವೆ ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಸರ್ಕಾರದ ಈ ನೀತಿಗಳ ವಿರುದ್ಧ ಸಾರಿಗೆ ನೌಕರರು ಮತ್ತು ಸಾರ್ವಜನಿಕರು ಜೊತೆಗೂಡಿ ಹೋರಾಟ ನಡೆಸುವ ಮೂಲಕ ಖಾಸಗೀಕರಣದ ನೀತಿಯನ್ನು ತಡೆಯೋಣ

–ಸಿಚಿ

('ಅಖಿಲ ಭಾರತ ರಸ್ತೆ ಸಾರಿಗೆ ಕಾರ್ಮಿಕರ ಒಕ್ಕೂಟ'ದ ಪ್ರಧಾನ ಕಾರ್ಯದರ್ಶಿ ಆರ್. ಲಕ್ಷ್ಮಯ್ಯ ಅವರ ಲೇಖನದಿಂದ ಒಂದಷ್ಟು ಮಾಹಿತಿ ಪಡೆಯಲಾಗಿದೆ.)

ಶಿಕ್ಷಣ ವ್ಯವಸ್ಥೆಯಲ್ಲಿ ಮುಸ್ಲಿಮ್–ವಿರೋಧಿ ಟಾರ್ಗೆಟ್

ಪ್ರಕಾಶ್ ಕಾರತ್

ಶಿಕ್ಷಕಿಯೊಬ್ಬಳು ತರಗತಿಯ ಸಹಪಾಠಿಗಳಿಂದ ಏಳು ವರ್ಷದ ಮುಸ್ಲಿಂ ಹುಡುಗನಿಗೆ ಹೊಡೆಸಿದ ಆಘಾತಕಾರಿ ಪ್ರಕರಣ ಉತ್ತರ ಪ್ರದೇಶದ ಮುಜಾಫರಾಬಾದ್ ಜಿಲ್ಲೆಯಿಂದ ವರದಿಯಾಗಿದೆ. ಇದನ್ನೊಂದು ಪ್ರತ್ಯೇಕಿತ ಪ್ರಕರಣವೆಂದು ಭಾವಿಸಲಾಗದು. ಇದೊಂದು ತೀರಾ ಒಳ ಪ್ರದೇಶದ ಚಿಕ್ಕ ಖಾಸಗಿ ಶಾಲೆಯಲ್ಲಿ ನಡೆದ ಘಟನೆಯಾದ್ದರಿಂದ ಈ ಧರ್ಮಾಂಧತೆಯನ್ನು ಕೇವಲ ಒಂದು ವಿಪಥನ (ಅಬರೇಶನ್) ಎಂದು ನಿರ್ಲಕ್ಷಿಸಲೂ ಸಾಧ್ಯವಿಲ್ಲ.

ಶಾಲೆಯ ಮಾಲಕಿಯೂ ಆಗಿರುವ ಶಿಕ್ಷಕಿ ತೃಪ್ತಾ ತ್ಯಾಗಿ, ಹುಡುಗನನ್ನು ನಿರ್ದಿಷ್ಟವಾಗಿ ಮುಸ್ಲಿಂ ಎಂದು ಗುರುತಿಸಿ ಆತನನ್ನು ಹೊಡೆಯಲು ಒಬ್ಬರಾದ ಮೇಲೆ ಇನ್ನೊಬ್ಬರು ಬರುವಂತೆ ಉಳಿದ ಮಕ್ಕಳಿಗೆ ಹೇಳುತ್ತಿರುವುದು ವಿಡಿಯೋದಲ್ಲಿ ಸ್ಪಷ್ಟವಾಗಿ ಗೋಚರಿಸುತ್ತದೆ. ಆ ಹುಡುಗನ ಧಾರ್ಮಿಕ ಕಾರಣಕ್ಕಾಗಿಯೇ ಆತನನ್ನು ಈ ಪರಿಯ ಘೋರ ಶಿಕ್ಷೆಗೆ ಒಳಪಡಿಸಲಾಯಿತೆನ್ನುವಲ್ಲಿ ಯಾವುದೇ ಅನುಮಾನವಿಲ್ಲ.

ಈ ಅಮಾನವೀಯ ಘಟನೆ ಇಡೀ ದೇಶದಲ್ಲಿ ಆಕ್ರೋಶದ ಅಲೆ ಎಬ್ಬಿಸಿದೆ. ಇದು ದೇಶದಲ್ಲಿ ಹರಡುತ್ತಿರುವ ದ್ವೇಷ ರಾಜಕಾರಣದ ಲಕ್ಷಣವಾಗಿದೆ ಎಂಬುದು ಸಾರ್ವತ್ರಿಕವಾದ ಅಭಿಪ್ರಾಯವಾಗಿದೆ. ಸಮಾಜದಲ್ಲಿ ದ್ವೇಷದ ವಿಷ ಹರಡುತ್ತಿರುವುದು ನಿಜವಾಗಿದ್ದು ಅದು ವ್ಯಕ್ತವಾಗುತ್ತಿರುವ ನಿರ್ದಿಷ್ಟ ರೀತಿ ಮತ್ತು ಮುಸ್ಲಿಮರಿಗೆ ಸಂಬಂಧಪಟ್ಟಂತೆ ಶೈಕ್ಷಣಿಕ ವ್ಯವಸ್ಥೆ ಮೇಲೆ ಆಗುತ್ತಿರುವ ಪರಿಣಾಮವನ್ನು ಅರ್ಥ ಮಾಡಿಕೊಳ್ಳಬೇಕು.

ಬಿಜೆಪಿ ಖಂಡನಾರ್ಹ ಧೋರಣೆ

ಮುಸ್ಲಿಂ–ವಿರೋಧಿ ಧರ್ಮಾಂಧತೆಯ ಈ ಪ್ರಕರಣವನ್ನು ಬಿಜೆಪಿ ಹೇಗೆ ನೋಡುತ್ತದೆ ಎನ್ನುವುದಕ್ಕೆ ಮುಜಾಫರ್‌ನಗರದ ಬಿಜೆಪಿ ಸಂಸದ ಸಂಜೀವ್ ಬಲಿಯಾನ್ ಅವರ ನಡೆಯೇ ಸಾಕ್ಷಿಯಾಗಿದೆ. ಗ್ರಾಮಕ್ಕೆ ತೆರಳಿ ಆ ಶಿಕ್ಷಕಿಯನ್ನು ಭೇಟಿಯಾದ ಸಂಸದ, 'ಇದೊಂದು ಚಿಕ್ಕ ವಿಷಯವಾಗಿದ್ದು ಬಗೆಹರಿಸಲಾಗಿದೆ' ಎಂದು ಘೋಷಿಸಿದ್ದಾರೆ. 'ದೈಹಿಕ ಶಿಕ್ಷೆ ನೀಡುವುದು ಈ ಭಾಗದಲ್ಲಿ ಸಾಮಾನ್ಯವಾಗಿದೆ. ಸಮಾಜಸೇವೆ ಮಾಡುತ್ತಿರುವ ದಿವ್ಯಾಂಗ (ವಿಕಲಚೇತನ) ಶಿಕ್ಷಕಿಯನ್ನು ಈ ವಿವಾದದಲ್ಲಿ ಎಳೆಯಬಾರದು' ಎಂದವರು ಫರ್ಮಾನು ಹೊರಡಿಸಿದ್ದಾರೆ.

ಒಂದು ದುರದೃಷ್ಟಕರ ಘಟನೆಯನ್ನು ಕೋಮುವಾದೀಕರಿಸಲು ಪ್ರತಿಪಕ್ಷಗಳು ಪ್ರಯತ್ನಿಸುತ್ತಿವೆ ಎಂದು ಬಿಜೆಪಿ ಸಂಸದ ಆರೋಪಿಸಿದ್ದಾರೆ. ಆದರೆ, ಆಳುವ ಪಕ್ಷವಾಗಿರುವ ಬಿಜೆಪಿಯೇ ಶಿಕ್ಷಣ ಸಂಸ್ಥೆಗಳಲ್ಲಿ ಇಂಥ ಮುಸ್ಲಿಂ–ವಿರೋಧಿ ಧೋರಣೆಗೆ ಬೆಂಬಲ ಹೊಂದಿರುವುದು ವಾಸ್ತವ ವಿಚಾರವಾಗಿದೆ.



ಬಿಜೆಪಿ ರಾಜ್ಯಗಳಲ್ಲಿ ಟಾರ್ಗೆಟ್

ಬಿಜೆಪಿ ಆಡಳಿತವಿರುವ ರಾಜ್ಯಗಳ ಸರಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಮುಸ್ಲಿಂ ಬೋಧಕರು ಮತ್ತು ವಿದ್ಯಾರ್ಥಿಗಳನ್ನು ಟಾರ್ಗೆಟ್ ಮಾಡಲಾಗುತ್ತಿದೆ. ಕಳೆದ ವರ್ಷದ ಕೊನೆಯಲ್ಲಿ ಮಧ್ಯ ಪ್ರದೇಶದ ಇಂದೋರ್‌ನ ಸರಕಾರಿ ನೂತನ ಕಾನೂನು ಕಾಲೇಜ್‌ನ ನಾಲ್ವರು ಮುಸ್ಲಿಂ ಬೋಧಕರ ಮೇಲೆ ಇಸ್ಲಾಂ ಪ್ರಚಾರ ಮತ್ತು ಲವ್ ಜಿಹಾದ್‌ಗಾಗಿ ದಾಳಿ ಮಾಡಲಾಯಿತು. ಅವರನ್ನು ಅಮಾನತು ಮಾಡಿ ವಿಚಾರಣೆಗೆ ಆದೇಶಿಸಲಾಯಿತು. ಇಷ್ಟು ಮಾತ್ರವಲ್ಲದೆ ಮುಸ್ಲಿಂ ಧರ್ಮಕ್ಕೆ ಸೇರಿದವರಾದ ಪ್ರಿನ್ಸಿಪಾಲರನ್ನು ಕೂಡ ಆಧಾರರಹಿತ ಆರೋಪದ ಮೇಲೆ ರಾಜೀನಾಮೆ ನೀಡುವಂತೆ ಒತ್ತಡ ಹೇರಲಾಯಿತು. ಈ ವಿಚಾರದಲ್ಲಿ ಆರೆಸ್ಸೆಸ್ ವಿದ್ಯಾರ್ಥಿ ಘಟಕ ಎಬಿವಿಪಿ ಮಾಡಿದ ಆರೋಪಗಳನ್ನು ರಾಜ್ಯದ ಗೃಹ ಸಚಿವರು ಬಹಿರಂಗವಾಗಿ ಬೆಂಬಲಿಸಿದರು. ಅದೇ ರಾಜ್ಯದ ವಿದಿಶಾದಲ್ಲಿ ಕಳೆದ ವರ್ಷ ಅಕ್ಟೋಬರ್‌ನಲ್ಲಿ ಇನ್ನೊಬ್ಬ ಮಹಿಳಾ ಮುಸ್ಲಿಂ ಪ್ರಿನ್ಸಿಪಾಲರನ್ನು ಕೆಲಸದಿಂದ ತೆಗೆದು ಹಾಕಲಾಯಿತು. ಆಕೆ ವಿರುದ್ಧ ಬಜರಂಗ ದಳ ಮಾಡಿದ್ದ ಆರೋಪಗಳ ಆಧಾರದಲ್ಲಿ ಈ ಕ್ರಮ ಕೈಗೊಳ್ಳಲಾಗಿತ್ತು. ಕರ್ನಾಟಕದಲ್ಲಿ ಅಧಿಕಾರದಲ್ಲಿದ್ದ ಬಿಜೆಪಿ 2022ರಲ್ಲಿ ಸರಕಾರಿ ಶಾಲೆಗಳು ಮತ್ತು ಕಾಲೇಜ್‌ಗಳ ವಿದ್ಯಾರ್ಥಿನಿಯರು ಹಿಜಾಬ್ ಧರಿಸುವುದನ್ನು ನಿಷೇಧಿಸಿತ್ತು.

ಶಾಲೆಗಳಲ್ಲಿರುವ ಯಾವುದೇ 'ಮುಸ್ಲಿಂ' ಸಾಂಸ್ಕೃತಿಕ ಅಂಶಗಳನ್ನು ತೆಗೆದು ಹಾಕಲು ಬಿಜೆಪಿ–ಆಡಳಿತದ ರಾಜ್ಯಗಳಲ್ಲಿ ಪ್ರಯತ್ನಗಳು ಮುಂದುವರಿದಿವೆ. ಉತ್ತರ ಪ್ರದೇಶದ ಬರೇಲಿಯ ಸರಕಾರಿ ಶಾಲೆಯೊಂದರ ಪ್ರಿನ್ಸಿಪಾಲ್ ಹಾಗೂ ಇನ್ನೊಬ್ಬ ಶಿಕ್ಷಕನನ್ನು ಅಮಾನತು ಮಾಡಲಾಗಿದೆ. ಕಾರಣ ಏನು ಗೊತ್ತೇ? ಬೆಳಗಿನ ಪ್ರಾರ್ಥನೆ ವೇಳೆ ಪ್ರಖ್ಯಾತ ಕವಿ ಇಕ್ಬಾಲ್‌ರ ಜನಪ್ರಿಯ ಕವನವೊಂದನ್ನು ವಿದ್ಯಾರ್ಥಿಗಳು ಹಾಡಿದ್ದು! ಗುಜರಾತ್‌ನ ಮುಂದ್ರಾದಲ್ಲಿ, ಈದ್ ದಿನ ಶಾಲೆಯಲ್ಲಿ ನಡೆದ ನಾಟಕದಲ್ಲಿ ವಿದ್ಯಾರ್ಥಿಗಳು ತಲೆಬುರುಡೆಗಳನ್ನು ಪ್ರದರ್ಶಿಸಿದ ಕಾರಣಕ್ಕೆ ಖಾಸಗಿ ಶಾಲೆಯ ಪ್ರಿನ್ಸಿಪಾಲರನ್ನು ಅಮಾನತು ಮಾಡಲಾಗಿದೆ.

ಮದರಸಾಗಳಿಗೂ ವಿಸ್ತರಣೆ

ಬಿಜೆಪಿ–ಆಡಳಿತದ ರಾಜ್ಯಗಳ ಸರಕಾರಿ ಮತ್ತು ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಈ ರೀತಿ ನಡೆಯುತ್ತಿದ್ದು ಅಂಥ ದಾಳಿಗಳು ಮುಸ್ಲಿಂ ಧಾರ್ಮಿಕ ಮತ್ತು ಸ್ವಯಂಸೇವಾ ಸಂಸ್ಥೆಗಳು ನಡೆಸುವ ಮದರಸಾಗಳಿಗೂ ವಿಸ್ತರಣೆಯಾಗುತ್ತಿದೆ. ತಾವು 600 ಮದರಸಾಗಳನ್ನು ಮುಚ್ಚಿದ್ದು ರಾಜ್ಯದ ಎಲ್ಲಾ ಮದರಸಾಗಳನ್ನು ಮುಚ್ಚುವ ಗುರಿ ಹೊಂದಿದ್ದೇನೆ ಎಂದು ಅಸ್ಸಾಂ ಮುಖ್ಯಮಂತ್ರಿ 2023 ಮಾರ್ಚ್‌ನಲ್ಲಿ ಹೇಳಿದ್ದಾರೆ. 'ಹೊಸ ಭಾರತ'ದಲ್ಲಿ ಅವುಗಳ ಅಗತ್ಯವಿಲ್ಲ ಎನ್ನುವುದು ಅವರ ಅಭಿಪ್ರಾಯ. ಉತ್ತರ ಪ್ರದೇಶದ ಆದಿತ್ಯನಾಥ ಸರಕಾರ 2022ರಲ್ಲಿ ಎಲ್ಲಾ ಮದರಸಾಗಳ ಸಮೀಕ್ಷೆಗೆ ಆದೇಶಿಸಿತ್ತು. ಸುಮಾರು 8,500 ಮದರಸಾಗಳು ಮಾನ್ಯತೆ ಹೊಂದಿಲ್ಲದಿರುವುದು ಸಮೀಕ್ಷೆಯಿಂದ ತಿಳಿದು ಬಂದಿದ್ದು ಅವುಗಳ ವಿರುದ್ಧ ಕ್ರಮ ಕೈಗೊಳ್ಳಲು ರಾಜ್ಯ ಸರಕಾರ ನಿರ್ಧರಿಸಿದೆ. ಮಾನ್ಯತೆ ಹೊಂದಿರುವ ಮದರಸಾಗಳು ಪ್ರತಿ ದಿನ ಬೆಳಿಗ್ಗೆ ತರಗತಿಗಳು ಆರಂಭವಾಗುವ ಮುನ್ನ ರಾಷ್ಟ್ರ ಧ್ವಜವನ್ನು ಹಾರಿಸಬೇಕೆಂದು ಅದು ಆದೇಶ ಹೊರಡಿಸಿದೆ. ರಾಷ್ಟ್ರಕ್ಕೆ ತಮ್ಮ ನಿಷ್ಠೆಯನ್ನು ಸಾಬೀತು ಪಡಿಸಬೇಕೆನ್ನುವುದು ಇದರ ಅರ್ಥವಾಗಿದೆ.

ಇನ್ನೂ ವಿಶಾಲವಾದ ಚಿತ್ರಣವನ್ನು ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕಾಗಿದೆ. ಹಿಂದೂತ್ವ ಸಿದ್ಧಾಂತವು ಶೈಕ್ಷಣಿಕ ವ್ಯವಸ್ಥೆಯಲ್ಲಿ ಬೇರು ಬಿಡುತ್ತಿದೆ. ಹೊಸ ಶಿಕ್ಷಣ ನೀತಿ (ಎನ್‌ಇಪಿ) ಅನುಷ್ಠಾನದ ಮೂಲಕ ಅದನ್ನು ಅಧಿಕೃತವಾಗಿ ಪರಿಚಯಿಸಲಾಗುತ್ತಿದೆ. ಪಠ್ಯಕ್ರಮ ಮತ್ತು ಪಠ್ಯಪುಸ್ತಕಗಳನ್ನು ಬದಲಾಯಿಸುತ್ತಿರುವ ಪ್ರಕ್ರಿಯೆಯಲ್ಲಿ ಅದನ್ನು ಕಾಣಬಹುದಾಗಿದೆ. ಅದೇ ಹೊತ್ತಿಗೆ, ಅಲ್ಪಸಂಖ್ಯಾತ–ವಿರೋಧಿಯಾದ ಹಿಂದೂತ್ವ ಸಿದ್ಧಾಂತದ ಪ್ರಮುಖ ಅಂಶವನ್ನು ಬಿಜೆಪಿ ಆಡಳಿತವಿರುವ ರಾಜ್ಯಗಳ ಶಿಕ್ಷಣ ವ್ಯವಸ್ಥೆಯಲ್ಲಿ ಕಾರ್ಯರೂಪಕ್ಕೆ ಇಳಿಸಲಾಗುತ್ತಿದೆ. ಸಂವಿಧಾನದಲ್ಲಿ ಕೊಡಲಾಗಿರುವ ಅಲ್ಪಸಂಖ್ಯಾತರ ಹಕ್ಕುಗಳನ್ನು ಉಲ್ಲಂಘಿಸುವುದು ಅದರಲ್ಲಿ ಸೇರಿದೆ. ಅಲ್ಪಸಂಖ್ಯಾತರು ತಮ್ಮದೇ ಆದ ಶಿಕ್ಷಣ ಸಂಸ್ಥೆಗಳನ್ನು ನಡೆಸುವ ಹಕ್ಕನ್ನು ಸಂವಿಧಾನದ 30ನೇ ವಿಧಿ ಖಾತರಿಪಡಿಸುತ್ತದೆ. ಮದರಸಾಗಳು ಇದೇ ವಿಭಾಗದಲ್ಲಿ ಬರುತ್ತವೆ. ಆದರೆ ಅವುಗಳನ್ನು ದಮನಿಸಲು ಅಥವಾ ಅವುಗಳ ಕೆಲಸದಲ್ಲಿ ಮೂಗು ತೂರಿಸಲು ಪ್ರಯತ್ನಿಸಲಾಗುತ್ತಿದೆ.

ಮುಜಾಫರ್‌ನಗರ ಶಾಲೆಯಲ್ಲಿ ನೋಡಿದ್ದು ಹಾಗೂ ಮಧ್ಯ ಪ್ರದೇಶದಲ್ಲಿ ಅಲ್ಪಸಂಖ್ಯಾತ ಸಮುದಾಯದ ಸಿಬ್ಬಂದಿ ಹಾಗೂ ಬೋಧಕರ ಮೇಲಿನ ವಿವಿಧ ದಾಳಿಗಳು ಮುಸ್ಲಿಂ–ವಿರೋಧಿ ನಡೆಯ ಇನ್ನೊಂದು ಮುಖವಾಗಿದೆ. ಇವೆಲ್ಲವೂ ಮುಸ್ಲಿಮರನ್ನು ಅವರ ನಾಗರಿಕ ಹಕ್ಕುಗಳಿಂದ ವಂಚಿತರನ್ನಾಗಿ ಮಾಡುವುದಲ್ಲದೆ ಪ್ರಜೆಯಾಗಿಯೂ ಅವರನ್ನು ಹಕ್ಕುಗಳಿಂದ ವಂಚಿಸುವ ವಿಶಾಲ ಯೋಜನೆಯ ಭಾಗವಾಗಿದೆ. ಅವರನ್ನು ಎರಡನೇ ದರ್ಜೆಯ ಪ್ರಜೆಗಳನ್ನಾಗಿ ಮಾಡಲು ಇದು ಪಕ್ಕಾ ಹಾದಿಯಾಗಿದೆ.

ಅನು: ವಿಶ್ವ

ಮುಜಾಫರ್‌ನಗರದ ಆಘಾತಕ್ಕೊಳಗಾದ ಬಾಲಕನ ಜತೆಗೆ ನಿಲ್ಲಿ– ಎಐಡಿಡಬ್ಲ್ಯುಎ ಕರೆ

"ನಮ್ಮ ದೇಶವನ್ನು ಹಾಳುಗೆಡಹುವ ದ್ವೇಷದ ಸಾಂಕ್ರಾಮಿಕವನ್ನು ನಿಲ್ಲಿಸಿ!"

ಉತ್ತರ ಪ್ರದೇಶದ ಮುಜಾಫರ್‌ನಗರ ಜಿಲ್ಲೆಯ ನೇಹಾ ಪಬ್ಲಿಕ್ ಸ್ಕೂಲ್‌ನಲ್ಲಿ ಆಗಸ್ಟ್ 24 ರಂದು ಸಂಭವಿಸಿದ ಮೈನಡುಗಿಸುವ ಘಟನೆಯ ಮಹತ್ವವನ್ನು ಭಾರತದ ಎಲ್ಲ ಪ್ರಜಾಪ್ರಭುತ್ವವಾದಿ ನಾಗರಿಕರು ಗುರುತಿಸಬೇಕು ಎಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘ (ಎಐಡಿಡಬ್ಲ್ಯುಎ) ಕರೆ ನೀಡಿದೆ.

ಮುಜಾಫರ್‌ನಗರದ ಖುಬ್ ಬಾಪುರ್ ಗ್ರಾಮದ ನೇಹಾ ಪಬ್ಲಿಕ್ ಶಾಲೆಯ ಶಿಕ್ಷಕಿ ಹಾಗೂ ಮಾಲಕಿಯಾಗಿರುವ ತ್ರಿಪ್ತಾ ತ್ಯಾಗಿ ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ 'ಅಲ್ಪಸಂಖ್ಯಾತರನ್ನು ದ್ವೇಷಿಸುವ' ತರಬೇತಿ ನೀಡುತ್ತಿರುವ ವಿಡಿಯೋ ಇದೀಗ ಬೆಳಕಿಗೆ ಬಂದಿದೆ. ಅದರಲ್ಲಿ ವಿದ್ಯಾರ್ಥಿಗಳನ್ನು ಒಬ್ಬೊಬ್ಬರಾಗಿ ಕರೆದು ತಮ್ಮ ಮುಸ್ಲಿಂ ಸಮುದಾಯದ ಸಹಪಾಠಿಯೊಬ್ಬನ ಕೆನ್ನೆಗೆ ಬಾರಿಸಬೇಕು ಮತ್ತು ಥಳಿಸಬೇಕು, ಎಂದು ಹೇಳುತ್ತಿರುವುದು ಕಾಣುತ್ತದೆ. ಆ ವೇಳೆಯಲ್ಲೆಲ್ಲ ತ್ರಿಪ್ತಾ ತ್ಯಾಗಿ ಮುಸ್ಲಿಂ ಸಮುದಾಯದ ವಿರುದ್ಧ ವಿಷಕಾರಿ ಟಿಪ್ಪಣಿಗಳನ್ನು ಮಾಡುತ್ತಿರುವುದು ನಿರಂತರವಾಗಿ ಕೇಳಿಬರುತ್ತದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ಚಿಕ್ಕಮಕ್ಕಳಿಗೆ ಕೋಮುವಾದಿ ಕ್ರೌರ್ಯದ ತರಬೇತಿ!

ಮುಝುಪ್ಫರ್‌ನಗರದ ಶಾಲೆಯಲ್ಲಿ ನಡೆದದ್ದು ಚಿಕ್ಕ ಮಕ್ಕಳಿಗೆ ಅಲ್ಪಸಂಖ್ಯಾತರ ಮೇಲೆ ದ್ವೇಷ ಮತ್ತು ಹಿಂಸಾಚಾರದ ತರಬೇತಿಯ ನಿದರ್ಶನವೇ ಆಗಿದೆ. ವಿಷಕಾರಿ ಹಿಂದುತ್ವ ರಾಜಕಾರಣ ಮತ್ತು ಆ ರಾಜಕೀಯ ಮತ್ತು ಸಿದ್ಧಾಂತವನ್ನು ಸಮರ್ಥಿಸಿಕೊಳ್ಳುವ ಮತ್ತು ಹಣಕಾಸು ಒದಗಿಸುವ ಎಲ್ಲರು ನಮ್ಮ ರಾಷ್ಟ್ರವನ್ನು ಈ ಅಪಾಯಕಾರಿ ಸ್ಥಿತಿಗೆ ತಂದಿದ್ದಾರೆ ಎಂದಿರುವ ಎಐಡಿಡಬ್ಲ್ಯುಎ ಈ ಹೇಳಲಾಗದ ಕ್ರೌರ್ಯವನ್ನು ಮಾತ್ರವಲ್ಲದೆ, ಇದೊಂದು ಅಪರೂಪದ ಘಟನೆ ಎಂದು ಬಣ್ಣಿಸಲು ಆಳುವ ಮಂದಿ ಮತ್ತು ಹೆಚ್ಚಿನ ಮುಖ್ಯವಾಹಿನಿಯ ಮಾಧ್ಯಮಗಳು ನಾಚಿಕೆಯಿಲ್ಲದ ಪ್ರಯತ್ನಿಸುತ್ತಿರುವುದನ್ನು ಬಲವಾಗಿ ಖಂಡಿಸಿದೆ.

ಅಲ್ಪಸಂಖ್ಯಾತ ಮತ್ತು ದಲಿತ ಸಮುದಾಯಗಳ ಸದಸ್ಯರು, ವಿಶೇಷವಾಗಿ ಮುಸ್ಲಿಂ ಸಮುದಾಯಕ್ಕೆ ಸೇರಿದವರು, ಹಿಂದುತ್ವ ಗ್ಯಾಂಗ್‌ಗಳ ದೊಂಬಿ ಹತ್ಯೆಗೆ ಬಲಿಯಾಗುವುದು ಇಂದು ಒಂದು ನಿಯಮಿತ ಸಂಗತಿಯಾಗಿದೆ. ಈ ಕೊಲೆಗಡುಕ ಪಡೆಗಳು ಸರ್ಕಾರಿ ಮತ್ತು ಪೊಲೀಸ್ ಯಂತ್ರಗಳ ಪ್ರತ್ಯಕ್ಷ ಹಾಗೂ ಪರೋಕ್ಷ ಬೆಂಬಲದೊಂದಿಗೆ ಕಾರ್ಯನಿರ್ವಹಿಸುತ್ತಿವೆ. ಮುಸ್ಲಿಮರನ್ನು ಬಹಿಷ್ಕರಿಸುವ ಮತ್ತು ಕೊಲ್ಲುವ ಕರೆಗಳು ಕೇಂದ್ರ ಮಂತ್ರಿಗಳು, ಮುಖ್ಯಮಂತ್ರಿಗಳು ಮತ್ತು ಸಂಸತ್ ಸದಸ್ಯರು ಸೇರಿದಂತೆ ಆಳುವ ಪಕ್ಷದ ರಾಜಕೀಯ ನಾಯಕರಿಂದ ಬರುತ್ತಿವೆ. ಶಾಲಾ ಪಠ್ಯಕ್ರಮದ ಪರಿಷ್ಕರಣೆಗಳು, ರಾಜಕೀಯ ಭಾಷಣಗಳು, ಮುದ್ರಣ ಮಾಧ್ಯಮ, ಟಿವಿ ಚಾನೆಲ್‌ಗಳು, ಮುಖ್ಯವಾಹಿನಿಯ ಸಿನಿಮಾ ಮತ್ತು ಸಾಮಾಜಿಕ ಮಾಧ್ಯಮಗಳು ಸೇರಿದಂತೆ ವಿವಿಧ ರೀತಿಗಳಲ್ಲಿ, ವಿವಿಧ ವಿಧಾನಗಳ ಮೂಲಕ ಮುಸ್ಲಿಮರ ಅನ್ಯೀಕರಣ, ತುಚ್ಛೀಕರಣ ಮತ್ತು ನಿಂದನೆಗಳನ್ನು ಹರಡಲಾಗುತ್ತಿದೆ.

"ಪ್ರತಿ ಮನಸ್ಸೂ ದ್ವೇಷ ಅಥವಾ ಭಯದ ಬಂಧಿಯಾಗುತ್ತಿದೆ!"

"ಆ ಶಾಲಾ ತರಗತಿ ಕೊಠಡಿಯಲ್ಲಿ ಕ್ರೂರವಾಗಿ ಹಲ್ಲೆಗೊಳಗಾದ ಮತ್ತು ಭಯೋತ್ಪಾದನೆಗೊಳಗಾದ ಬಾಲಕನೊಂದಿಗೆ ನಿಲ್ಲಬೇಕು ಎಂದು ನಾವು ಭಾರತದ ಎಲ್ಲಾ ಶಾಂತಿಪ್ರಿಯ ಜನರಿಗೆ ಮನವಿ ಮಾಡುತ್ತೇವೆ. ಆ ಮಗುವಿನ ಆಘಾತವೇ ಇಂದಿನ ನಮ್ಮ ರಾಷ್ಟ್ರದ ಸ್ಥಿತಿ ಎಂಬುದನ್ನು ಗುರುತಿಸಬೇಕು. ಬಹುಸಂಖ್ಯಾತ ಸಮುದಾಯದ ಜನರ ಮನಸ್ಸಿನಲ್ಲಿ ದ್ವೇಷ ಮತ್ತು ಅಲ್ಪಸಂಖ್ಯಾತರಲ್ಲಿ ಮಾರಣಾಂತಿಕ ಭಯವನ್ನು ಹುಟ್ಟುಹಾಕುವುದು – ಇದು ಇಂದು ಸಂಘಪರಿವಾರದ ಪ್ರಮುಖ ಕೆಲಸವಾಗಿದೆ. ಪ್ರತಿ ಮನಸ್ಸೂ ದ್ವೇಷ ಅಥವಾ ಭಯದಲ್ಲಿ ಬಂಧಿಯಾಗುತ್ತಿದೆ!" ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ "ನಮ್ಮ ದೇಶದ 'ಅಧಿಕೃತ ಸಿದ್ಧಾಂತ'ವಾಗಿ ಬೇರೂರಲು ಪ್ರಯತ್ನಿಸುತ್ತಿರುವ ಹಿಂಸಾತ್ಮಕ ಬಹುಸಂಖ್ಯಾಕವಾದಕ್ಕೆ ಪ್ರತಿರೋಧ ಒಡ್ಡಲು ನಮ್ಮ ಎಲ್ಲಾ ಪಡೆಗಳನ್ನು ಒಟ್ಟುಗೂಡಿಸಬೇಕು, ನಮ್ಮ ಮುಗ್ಧ ಮಕ್ಕಳೂ ಸೇರಿದಂತೆ ನಮ್ಮ ನಲ್ಮೆಯ ದೇಶದ ಮೇಲೆ ಅವರು ಉಂಟು ಮಾಡುತ್ತಿರುವ ಗಾಯಗಳಿಗೆ ಕೇಂದ್ರ ಮತ್ತು ಉತ್ತರಪ್ರದೇಶದ ಸರ್ಕಾರ ಉತ್ತರದಾಯಿಯಾಗುವಂತೆ ಮಾಡಲು ನಾವು ಒಂದಾಗಬೇಕು" ಎಂದು ಹೇಳಿದೆ.



'ಗ್ಯಾರಂಟಿಯಲ್ಲಿ ನೂರು ದಿನ! ಐದು ವರ್ಷ ಕಳೆದರೂ ಅಚ್ಚರಿಯಿಲ್ಲ!!

ಗುರುರಾಜ ದೇಸಾಯಿ

ಹೌದು, ಬಿಜೆಪಿಯ ದುರಾಡಳಿತದಿಂದ ಬೇಸತ್ತಿದ್ದ ಜನರಿಗೆ ಕಾಂಗ್ರೆಸ್‌ನ ಗ್ಯಾರಂಟಿಗಳು ಭರವಸೆ ಮೂಡಿಸಿದ್ದವು. ಬಿಜೆಪಿಯ ಭ್ರಷ್ಟಾಚಾರವನ್ನು ಜಗಜ್ಜಾಹೀರು ಮಾಡಿದ್ದ ಕಾಂಗ್ರೆಸ್, ವರ್ಗಾವಣೆಯ ಮೂಲಕ ಹಣ ತಿನ್ನುವುದರಲ್ಲಿ ತಾನೇನೂ ಕಮ್ಮಿ ಇಲ್ಲ ಎಂಬುದನ್ನು ಸಾಬೀತುಪಡಿಸಿದೆ. ವರ್ಗಾವಣೆಗಾಗಿ ಲಕ್ಷಾಂತರ ರೂಪಾಯಿ ಹಣ ಪಡೆದಿದ್ದಾರೆ ಎಂಬ ಮಾತುಗಳನ್ನು ನೌಕರರೆ ಉಗುಳು ನುಂಗಿ ಹೇಳುತ್ತಿದ್ದಾರೆ. ಗ್ಯಾರಂಟಿ

ಗ್ಯಾರಂಟಿಯಲ್ಲೆ ಗಿರಕಿ:

ಮೊದಲ ದಿನದಿಂದ ಹಿಡಿದು ಇಂದಿನವರೆಗೆ "ನುಡಿದಂತೆ ನಡೆದಿದ್ದೇವೆ" ಎಂಬ ನಾಮ ಫಲಕ ಹಾಕಿಕೊಂಡು ಗ್ಯಾರಂಟಿಯ ಸುತ್ತ ಗಿರಕಿ ಹೊಡೆಯುತ್ತಲೇ ಇದ್ದಾರೆ. ಐದು ಗ್ಯಾರಂಟಿಗಳಲ್ಲಿ ಶಕ್ತಿ ಯೋಜನೆ ಮಹಿಳೆಯರಿಗೆ ಬಲ, ಸ್ಥೈರ್ಯ ತುಂಬಿದೆ. ಹೆಚ್ಚುವರಿ 5 ಕೆಜಿ ಅಕ್ಕಿ, ಹಸಿದವರ ಹೊಟ್ಟೆ ತುಂಬಿಸುವ ಕೆಲಸ ಮಾಡುತ್ತಿದೆ. ಗೃಹಜ್ಯೋತಿಯಿಂದ ಉಳಿತಾಯವಾದ ಹಣ ಮನೆ ಖರ್ಚಿಗೆ ಜೀವ ತುಂಬಿದೆ. ಗೃಹಲಕ್ಷ್ಮೀ ಯೋಜನೆ ಜಾರಿಯಲ್ಲಿದ್ದರೆ, ಯುವನಿಧಿಯ ಬಗ್ಗೆ ಕಾಂಗ್ರೆಸ್ ಉಸಿರೇ ಎತ್ತುತ್ತಿಲ್ಲ. 2022-23 ಎಂಬ ಷರತ್ತಿನ ಕಾರಣ ಯುವಜನತೆ ಅದರ ಬಗ್ಗೆ ತಲೆ ಕೆಡಿಸಿಕೊಳ್ಳುತ್ತಿಲ್ಲ. ಜನ ಕಟ್ಟುತ್ತಿದ್ದ ಟ್ಯಾಕ್ಸ್‌ನ ಹಣ ಇಲ್ಲಿಯವರಗೆ ಶ್ರೀಮಂತರಿಗೆ ಮಾತ್ರ ಸಿಗುತ್ತಿತ್ತು. ಈಗ ಅದು ಬಡ ಜನರಿಗೆ ಸಿಗುತ್ತಿದೆ. ಸಾಧ್ಯವಾಗಬಹುದಾದ ಯೋಜನೆಗಳನ್ನು ಸಾಧ್ಯವಾಗಿಸಿದ ಕಾರಣ ಕಾಂಗ್ರೆಸ್ ಸರ್ಕಾರ 'ಗ್ಯಾರಂಟಿಯನ್ನು ಉಳಿಸಿಕೊಂಡಿದೆ.

ಗ್ಯಾರಂಟಿಯಲ್ಲಿನ ಕೆಲ ಷರತ್ತುಗಳು ಉದಾರೀಕರಣದ ವಾಸನೆಯನ್ನು ತೋರಿಸುತ್ತಿದೆ. ಶಕ್ತಿಯೋಜನೆಗೆ ಆಧಾರ್‌ಕಾರ್ಡ್ ಕಡ್ಡಾಯ ಮಾಡಿರುವುದು ಕೆಲ ಜನರನ್ನು ಹೊರಗುಳಿಯುವಂತೆ ಮಾಡಿದೆ. ತಮಿಳುನಾಡು, ಕೇರಳ, ಆಂಧ್ರ, ತೆಲಂಗಾಣ ಹಾಗೂ ಉತ್ತರ ಭಾರತದಿಂದ ವಲಸೆಬಂದ ಕಾರ್ಮಿಕರನ್ನು ಈ ಯೋಜನೆಯಿಂದ ಹೊರಗಿಟ್ಟಂತಾಗಿದೆ. ದೆಹಲಿಯಲ್ಲಿ ಈ ರೀತಿಯ ಷರತ್ತುಗಳಿಲ್ಲ ಎಂಬುದನ್ನು ಗಮನಿಸಬೇಕು. ಗೃಹಲಕ್ಷ್ಮಿ ಯೋಜನೆಗೆ ಫಲಾನುಭವಿಗಳನ್ನು ನೀವೇ ನಿರ್ಧರಿಸಿ ಎಂದು ಕುಟುಂಬಗಳಿಗೆ ಬಿಟ್ಟಿದ್ದು ಅಪಾಯವನ್ನು ತಂದೊಡ್ಡಲಿದೆ. ಮನೆಯಲ್ಲಿ ಮೂರ್ನಾಲ್ಕು ಜನ ಹೆಣ್ಣು ಮಕ್ಕಳಿದ್ದರೆ ಈ ಯೋಜನೆ ಯಾರಿಗೆ ಸಿಗಬೇಕು ಎಂಬ ಗೊಂದಲವನ್ನು ಸೃಷ್ಟಿಸಿದೆ. ಗಂಡನ ಆಧಾರ್ ಕಾರ್ಡ್ ಕಡ್ಡಾಯ ಎಂದು ಹೇಳುವ ಮೂಲಕ ಗಂಡಿನ ಅನಿವಾರ್ಯತೆಯನ್ನು ಸೃಷ್ಟಿಸಿ ಪುರುಷ ಪ್ರಧಾನ ಮೌಲ್ಯಗಳನ್ನು ಹೇರಲು ಹೊರಟಿದೆ. ಗ್ಯಾರಂಟಿ

ಅನ್ನಭಾಗ್ಯ ಯೋಜನೆಯಡಿ 10 ಕೆಜಿ ಅಕ್ಕಿ ಕೊಡುವುದಾಗಿ ಹೇಳಿದ್ದ ಸರ್ಕಾರಕ್ಕೆ ಕೇಂದ್ರ ಸರ್ಕಾರದ ಅಕ್ಕಿ ನಿರಾಕರಣೆ ನಿದ್ದೆಗೆಡಿಸಿತು.

> ಕಾಂಗ್ರೆಸ್ ಪಕ್ಷವನ್ನು ಆಯ್ಕೆ ಮಾಡಿದ್ದು ಸರಕಾರಿ ಶಾಲೆಗಳನ್ನು ಮುಚ್ಚಲಿಕ್ಕಾಗಿಯೇ? ಗ್ಯಾರಂಟಿ ಆಗಸ್ಟ್ 30ರ ದಿನ ಪತ್ರಿಕೆಯ ಮುಖಪುಟದ ತುಂಬ " ಕರ್ನಾಟಕ ಮಾದರಿ ನೂರು ದಿನ" ಎಂಬ ಜಾಹೀರಾತನ್ನು ಎಲ್ಲರೂ ಗಮನಿಸಿದ್ದಿರಿ! ವಿಷಯ ಜಾಹೀರಾತಿನ ಕುರಿತಲ್ಲ, ಕಾಂಗ್ರೆಸ್ ಸರ್ಕಾರ ಬಂದು ನೂರು ದಿನ ಆಯ್ತು, ಗ್ಯಾರಂಟಿ ಹೊರತು ಪಡಿಸಿದರೆ ಬೇರೆನೂ ಸಾಧನೆಗಳು ಕಾಣುತ್ತಿಲ್ಲ, ಗ್ಯಾರಂಟಿ ಇಲ್ಲದಿದ್ದರೆ ಸರ್ಕಾರದ ಸಾಧನೆ ಶೂನ್ಯವಾಗಿರುತ್ತಿತ್ತು ಎಂಬ ಚರ್ಚೆಗಳು ಆರಂಭವಾಗಿವೆ. ಈಗಲೂ ಸದ್ದಿಲ್ಲದೆ ಜಾಗತೀಕರಣ, ಉದಾರೀಕರಣ, ಖಾಸಗೀಕರಣದ ಪರವಾಗಿ ಕೆಲಸಗಳು ನಡೆದಿವೆ.

ಕೇಂದ್ರದ ಕುತಂತ್ರವನ್ನು ಹಣಿಯುವುದಕ್ಕಾಗಿ 5 ಕೆಜಿ ಅಕ್ಕಿ ಬದಲಿಗೆ ನಗದು ನೀಡುವ ನಿರ್ಧಾರ ಮಾಡಿತು. ಪ್ರತಿ ಕೆಜಿಗೆ 34 ರೂ ಅಂತೆ ಒಬ್ಬ ಸದಸ್ಯರಿಗೆ 170 ರೂ ನೀಡಲು ತೀರ್ಮಾನಿಸಿತು. ಈ ಹಣ ಬಹಳಷ್ಟು ಜನರ ಖಾತೆಗೆ ಜಮಾ ಆಗಿಲ್ಲ ಎಂಬ ಕಾರಣಗಳು ಕೇಳಿ ಬರುತ್ತಿವೆ.

ಯುವನಿಧಿ ಯೋಜನೆಯಂತೂ ಮೂಗಿಗೆ ತುಪ್ಪ ಸವರುವ ಯೋಜನೆಯಾಗಿದೆ. ನಿರುದ್ಯೋಗವನ್ನು ತಡೆಗಟ್ಟಲು ಉದ್ಯೋಗ ನೀಡುವುದು ಸರ್ಕಾರದ ಕರ್ತವ್ಯ ಎನ್ನುವಂತದ್ದನ್ನು ಮರೆತಿದೆ. ಉದ್ಯೋಗ ಸೃಷ್ಠಿ ಮಾಡಬೇಕು ಇಲ್ಲವೇ ಉದ್ಯೋಗ ಭತ್ಯೆಯನ್ನು ನೀಡಬೇಕು. ಆದರೆ ಸರ್ಕಾರ ಯುವನಿಧಿ ಎಂಬ ಗಾಳಿ ತುಂಬಿದ ಬಲೂನು ತೋರಿಸಿ 'ಯುವ ಸಬಲೀಕರಣ' ಎಂದು ಹೇಳುತ್ತಿದೆ. 2022-23 ರ ಹಿಂದಿನ ವರ್ಷದಲ್ಲಿ ಶಿಕ್ಷಣ ಪಡೆದವರನ್ನು, ಹತ್ತಾರು ವರ್ಷಗಳಿಂದ ಉದ್ಯೋಗ ಸಿಗದೆ ಇರುವವರನ್ನು ಈ ಯೋಜನೆಯಿಂದ ದೂರ ತಳ್ಳಿರುವುದು ಎಷ್ಟು ಸರಿ?

ಈ ಎಲ್ಲಾ ಕೊರತೆಗಳ ನಡುವೆಯೂ ಗ್ಯಾರಂಟಿ ಒಂದಿಷ್ಟು ನಿಟ್ಟುಸಿರು ಬಿಡಲು ಕಾರಣವಾಗಿದೆ. ಆದರೆ ಕಾಂಗ್ರೆಸ್ ಗ್ಯಾರಂಟಿಯ ಹೆಸರಿನಲ್ಲಿಯೇ 5 ವರ್ಷ ಗಿರಕಿ ಹೊಡೆಯುವಂತೆ ಕಾಣುತ್ತಿದೆ.

ದಮನಿತರಿಗೆ ಧ್ವನಿಯಾಗಲೇ ಇಲ್ಲ:

ನಾವು ಶೋಷಿತ ಸಮುದಾಯಗಳ ಪರವಾಗಿ ಇದ್ದೇವೆ. ದಮನಿತರ ನೋವುಗಳನ್ನು ದೂರವಾಗಿಸಿ ಅವರ ಮುಖದಲ್ಲಿ ನಗು ಅರಳಿಸುವುದೇ ನಮ್ಮ ಕೆಲಸ ಎಂದು ಚುನಾವಣಾ ಪೂರ್ವದಲ್ಲಿ ಕಾಂಗ್ರೆಸ್ ಹೇಳಿತ್ತು. ಆದರೆ ದಮನಿತರ ಕಡೆ ಕಾಂಗ್ರೆಸ್ ಇಲ್ಲಿವರೆಗೆ ತಿರುಗಿಯೂ ನೋಡಿಲ್ಲ.

ದಲಿತರ ಕಲ್ಯಾಣಕ್ಕೆ ಕಾಂಗ್ರೆಸ್ ಸರ್ಕಾರ ಜೀವ ತುಂಬಬಹುದು ಎಂದು ಚುನಾವಣೆಯಲ್ಲಿ ದಲಿತ ಸಮುದಾಯ ದೊಡ್ಡ ಬೆಂಬಲವಾಗಿ ನಿಂತಿತ್ತು. ಆದರೆ, ದಲಿತರ ಅಭಿವೃದ್ಧಿಗಾಗಿ ಇಟ್ಟಿದ್ದ ಹಣವನ್ನು ಗ್ಯಾರಂಟಿಗೆ ಬಳಸುವ ಮೂಲಕ ಅವರ ಹಕ್ಕನ್ನು ಕಸಿದುಕೊಂಡಿದೆ. ಗ್ಯಾರಂಟಿಗಳಲ್ಲಿ ದಲಿತರಿಲ್ಲವೆ? ಎಂಬ ಉಡಾಫೆಯ ಮಾತುಗಳ ಮೂಲಕ ಕೆಲ ಸಚಿವರು ಸಮರ್ಥಿಸಿಕೊಂಡಿದ್ದು ದಲಿತ ಸಮುದಾಯಕ್ಕೆ ಮಾಡಿದ ಮೋಸವಾಗಿದೆ. 48,000 ಕ್ಕೂ ಹೆಚ್ಚು ಗಂಗಾ ಕಲ್ಯಾಣ ಯೋಜನೆಯ ಅರ್ಜಿಗಳು ನಿಗಮಗಳಲ್ಲಿ ಕೊಳೆಯುತ್ತಿವೆ. ಅದೇ ರೀತಿ ಎರಡು ಎಕರೆ ಭೂಮಿಗಾಗಿ ಭೂ ಒಡೆತನ ಯೋಜನೆಯಲ್ಲಿ 11,000 ಕ್ಕೂ ಹೆಚ್ಚು ಅರ್ಜಿಗಳನ್ನು ಸಲ್ಲಿಸಿದ್ದಾರೆ. ಹಿಂದಿನ ಬಿಜೆಪಿ ಸರ್ಕಾರ ಈ ಯೋಜನೆಗೆ ಹೆಚ್ಚಿನ ಹಣ ನೀಡದೆ ವಂಚನೆ ಮಾಡಿತ್ತು ಡಾ.ಬಿ.ಆರ್. ಅಂಬೇಡ್ಕರ್ ಮತ್ತು ಇತರೆ ನಿಗಮಗಳಲ್ಲಿ ಅರ್ಜಿದಾರರು ಬಕ ಪಕ್ಷಿಗಳಂತೆ ಕಾಯುತ್ತಿದ್ದಾರೆ. ಬಿಜೆಪಿ ಮಾಡಿದ ಕೆಲಸವನ್ನೆ ಕಾಂಗ್ರೆಸ್ ಮಾಡುತ್ತಿದೆ ಎಂಬ ಆತಂಕ ಈಗ ಎದುರಾಗಿದೆ. ಗ್ಯಾರಂಟಿ

ಬಿಜೆಪಿ ಅವಧಿಯಲ್ಲಿ ನಡೆದ ಕೋಮುಗಲಭೆಗಳು ರಾಜ್ಯದ ಜನರನ್ನು ಬೆಚ್ಚಿ ಬೀಳಿಸಿದ್ದವು. ರಾಜಕೀಯ ಲಾಭ ಪಡೆಯುವುದಕ್ಕಾಗಿ ಹಿಂದೂ - ಮುಸ್ಲಿಂರನ್ನು ವಿಭಜಿಸುವ ಮತ್ತು ಮುಸ್ಲಿಂರನ್ನು ಕೀಳಾಗಿ ಕಾಣುವಂತೆ ಬಿಂಬಿಸುವಲ್ಲಿ ಬಿಜೆಪಿ ಸಾಕಷ್ಟು ಹುನ್ನಾರ ನಡೆಸಿತ್ತು. ಕಾಂಗ್ರೆಸ್ ಬಂದರೆ ಕೋಮುಗಲಭೆಗಳು ನಡೆಯುದಿಲ್ಲ ಎಂಬ ಕಾರಣಕ್ಕಾಗಿ ಬಹಳಷ್ಟು ಜನ ಕಾಂಗ್ರೆಸ್‌ಗೆ ಮತ ನೀಡಿದ್ದರು. ಆದರೆ ಕೋಮು ಧ್ರುವೀಕರಣವನ್ನು ತಡೆಯಲು ಕಾಂಗ್ರೆಸ್ ವಿಫಲವಾಗಿದೆ. ಕರಾವಳಿಯಲ್ಲಿ ಈಗಲೂ ನಿತ್ಯ ಗಲಾಟೆಗಳು ನಡೆಯುತ್ತಿವೆ. ರಾಜಕೀಯ-ಸಾಮಾಜಿಕ - ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೋಮು ಧ್ರುವೀಕರಣದ ಮೂಲಕ ಹಿಂದುತ್ವದ ಅಜೆಂಡವನ್ನೂ ಬಿಜೆಪಿ ನಡೆಸುತ್ತಲೇ ಇದೆ. ಉಡುಪಿಯ ಖಾಸಗೀ ಕಾಲೇಜೊಂದರಲ್ಲಿ ವಿಡಿಯೋ ತೆಗೆದಿದ್ದಾರೆ ಎಂಬ ಕಾರಣವನ್ನು ಮುಂದೆ ಮಾಡಿ ಮುಸ್ಲಿಂ ಸಮುದಾಯದ ಬಗ್ಗೆ ಅಪಪ್ರಚಾರ ಮಾಡಿದ ಉದಾಹರಣೆ ಕಣ್ಮುಂದೆಯೇ ಇದೆ.

ಶ್ರಮಿಕ ವರ್ಗವನ್ನು ನಿರ್ಲಕ್ಷಿಸುವ ಹಳೆ ಚಾಳಿಯನ್ನು ಕಾಂಗ್ರೆಸ್ ಈಗಲೂ ಮುಂದುವರೆಸಿದೆ. ಬಿಜೆಪಿ ಸರ್ಕಾರ ಕಾರ್ಖಾನೆ ಕಾಯ್ದೆಗೆ ತಿದ್ದುಪಡಿ ತಂದು 8 ಗಂಟೆ ಕೆಲಸದ ಅವಧಿಯನ್ನು 12 ಗಂಟೆಗೆ ಏರಿಸಿತ್ತು. ಅದರ ಬಗ್ಗೆ ಏನನ್ನೂ ಮಾತನಾಡಲು ಸಿದ್ದರಿಲ್ಲ. ಮತ್ತು ರಾತ್ರಿಪಾಳೆಯದ ದುಡಿಮೆಯನ್ನು ಮಹಿಳೆಯರಿಗೆ ಕಡ್ಡಾಯಗೊಳಿಸಿದ್ದನ್ನು ರದ್ದು ಮಾಡಲು ಹಿಂದೇಟು ಹಾಕಿದೆ. ಕನಿಷ್ಠ ವೇತನ ಪರಿಷ್ಕರಣೆ ವಿಷಯದಲ್ಲೂ ಸರ್ಕಾರ ಯಾವುದೇ ಬದ್ದತೆಯನ್ನು ಪ್ರದರ್ಶನ ಮಾಡದೇ ಮಾಲೀಕರ ಒತ್ತಡಕ್ಕೆ ಮಣಿದಂತೆ ಕಾಣುತ್ತಿದೆ.

ಸೌಜನ್ಯ ಪ್ರಕರಣವನ್ನು ಎಸ್‌ಐಟಿ ಮೂಲಕ ಮರು ತನಿಖೆ ಮಾಡಬೇಕು ಎಂದು ಜನಪರ ಸಂಘಟನೆಗಳು, ಇತರೆ ಸಂಘಟನೆಗಳು ನಡೆಸುತ್ತಿರುವ ಹೋರಾಟ ಜೋರಾಗಿದೆ. ಬಹಳಷ್ಟು ಜನ ಮುಖ್ಯಮಂತ್ರಿಗಳನ್ನು ಭೇಟಿ ಮಾಡಿ ಮನವಿ ನೀಡುತ್ತಿದ್ದಾರೆ. ಮನವಿ ಸ್ವೀಕರಿಸಿದ ಮುಖ್ಯಮಂತ್ರಿಗಳು 'ನಾನು ಸ್ವತಃ ವಕೀಲನಾಗಿ ಅಧ್ಯಯನ ನಡೆಸುತ್ತೇನೆ' ಎಂದಿದ್ದು ಬಿಟ್ಟರೆ ಬೇರಾವ ಸ್ಪಂದನೆಯೂ ದೊರೆಯುತ್ತಿಲ್ಲ. ಇನ್ನೂ ಗೃಹಸಚಿವ ಜಿ. ಪರಮೇಶ್ವರ್ " ಸೌಜನ್ಯ ಪ್ರಕರಣ" ಮುಗಿದ ಅಧ್ಯಾಯ ಎಂದು ಕಡ್ಡಿ ತುಂಡಾಗಿಸಿ ಹೇಳಿದ್ದಾರೆ. ಧರ್ಮಸ್ಥಳ, ಉಜಿರೆ ಸುತ್ತಮುತ್ತ ನಡೆದಿರುವ ಅಸಹಜ ಸಾವುಗಳನ್ನು ತನಿಖೆ ಮಾಡಿಸಿ ನ್ಯಾಯ ಕೊಡಿಸುವ ಧೈರ್ಯ ಹಾಗೂ ಇಚ್ಚೆ ಕಾಂಗ್ರೆಸ್ ಸರ್ಕಾರಕ್ಕೆ ಇದ್ದಂತೆ ಕಾಣುತ್ತಿಲ್ಲ ಎಂಬುದು ಸ್ಪಷ್ಟವಾಗಿದೆ.

ಎಪಿಎಂಸಿ ತಿದ್ದುಪಡಿಕಾಯ್ದೆ, ಮತಾಂತರ ನಿಷೇಧ ಕಾಯ್ದೆಯನ್ನು ವಾಪಸ್ಸು ಪಡೆದ ಸರ್ಕಾರ ಜಾನುವಾರು ಹತ್ಯೆಕಾಯ್ದೆಯನ್ನು ವಾಪಸ್ಸು ಪಡೆದಿಲ್ಲ, ಆ ಮೂಲಕ ತಾನೊಂದು ಮೃದು ಹಿಂದುತ್ವ ಧೋರಣೆ ಹೊಂದಿದ ಪಕ್ಷ ಎಂಬುದನ್ನು ಕಾಂಗ್ರೆಸ್ ಸಾಬೀತು ಪಡಿಸಿದೆ. ರಾಜ್ಯ ಶಿಕ್ಷಣ ನೀತಿ ತರುವುದಾಗಿ ಹೇಳುವ ಸರ್ಕಾರ ಇನ್ನೊಂದೆಡೆ ಸರ್ಕಾರಿ ಶಾಲೆಗಳನ್ನು ಖಾಸಗಿ ಶಾಲೆಗಳಿಗೆ ದತ್ತು ನೀಡುವ ಕಾರ್ಯಕ್ಕೆ ಮುಂದಾಗುತ್ತಿವೆ. ಸರ್ಕಾರಿ ಶಾಲೆಗಳನ್ನು ನಡೆಸಲು ನಮಗೆ ಆಸಕ್ತಿ ಇಲ್ಲ ಎಂಬುದನ್ನು ಬಹಿರಂಗವಾಗಿ ತೋರಿಸಿದ್ದಲ್ಲದೆ, ಶಿಕ್ಷಣದ ಖಾಸಗೀರಣಕ್ಕೆ ರತ್ನಗಂಬಳಿ ಹಾಸುತ್ತಿದೆ.







ಸೌಜನ್ಯ ಪ್ರಕರಣ: ನ್ಯಾಯಕ್ಕಾಗಿ ವಿಸ್ತಾರಗೊಳ್ಳುತ್ತಿರುವ ಪ್ರತಿರೋಧ

ಪ್ರಮೀಳ ದೇವಾಡಿಗ

ಸೌಜನ್ಯ ಅತ್ಯಾಚಾರ ಮತ್ತು ಕೊಲೆ ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಬಿಐ ನ್ಯಾಯಾಲಯದ ತೀರ್ಪಿನ ತರುವಾಯ ಈ ಪ್ರಕರಣವನ್ನೇ ಮುಚ್ಚಿ ಹಾಕಲು ವ್ಯವಸ್ಥಿತ ಷಡ್ಯಂತ್ರ ನಡೆಯುತ್ತಿದೆ ಎಂಬ ಅನುಮಾನಗಳು ನಾಗರಿಕರಲ್ಲಿ ಬಲಗೊಂಡಿದೆ. ಈ ಹಿನ್ನೆಲೆಯಲ್ಲಿ ಜನಾಕ್ರೋಶ ಭುಗಿಲೆದ್ದಿದ್ದು, ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆಯುತ್ತಿವೆ. ಮುಂದುವರಿದ ಭಾಗವಾಗಿ, ರಾಜ್ಯ ಸರಕಾರ ಸೌಜನ್ಯ ಪ್ರಕರಣದ ತನಿಖೆಗಾಗಿ ದಕ್ಷ ಅಧಿಕಾರಿಗಳನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಬೇಕು, ಹಾಗೂ ಕುಮಾರಿ ಪದ್ಮಲತಾ, ವೇದವಲ್ಲಿ, ಆನೆ ಮಾವುತ ನಾರಾಯಣ, ಆತನ ಸೋದರಿ ಯಮುನ ಸಹಿತ ಧರ್ಮಸ್ಥಳ, ಉಜಿರೆ ಭಾಗಗಳಲ್ಲಿ ನಡೆದಿರುವ ಕೊಲೆ, 'ಅಸಹಜ ಸಾವು'ಗಳನ್ನು ನ್ಯಾಯಾಂಗ ತನಿಖೆ ಒಪ್ಪಿಸಬೇಕು ಎಂದು ಒತ್ತಾಯಿಸಿ ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಗಸ್ಟ್ 28, 2023ರಂದು ಬೆಳ್ತಂಗಡಿಯಲ್ಲಿ ರಾಜ್ಯ ಮಟ್ಟದ 'ಚಲೋ ಬೆಳ್ತಂಗಡಿ, ಮಹಾ ಧರಣಿ' ನಡೆಯಿತು.

ಸೌಜನ್ಯಳ ತಾಯಿ ತಮಗೆ ಅನುಮಾನವಿರುವ ಅತ್ಯಾಚಾರ, ಕೊಲೆ ಆರೋಪಿಗಳ ಹೆಸರನ್ನು ಬಹಿರಂಗವಾಗಿ ಹೇಳುತ್ತಿದ್ದಾರೆ. ಇದರಿಂದ ಕೆಲವರಿಗೆ ಹೆಗಲು ಮುಟ್ಟಿ ನೋಡುವ ಪರಿಸ್ಥಿತಿ ನಿರ್ಮಾಣವಾಯಿತು. ಧರ್ಮಸ್ಥಳದಲ್ಲಿ ಬಜರಂಗದಳ ಮತ್ತು ವಿಶ್ವ ಹಿಂದೂ ಪರಿಷತ್ ನೇತೃತ್ವದಲ್ಲಿ ಸೌಜನ್ಯ ಪರ ಹೋರಾಟ ಎಂದು ಹೇಳಿ, ಸ್ವ ಸಹಾಯ ಸಂಘದ ಸದಸ್ಯರನ್ನು ಒಟ್ಟುಗೂಡಿಸಿ ಪ್ರತಿಭಟನೆ ಏರ್ಪಡಿಸಿತ್ತು. ಪ್ರತಿಭಟನೆಯಲ್ಲಿ ಸೌಜನ್ಯಳ ಹೆಸರಿನ ಯಾವುದೇ ಪೋಸ್ಟರ್ ಗಳು ಇರಲಿಲ್ಲ, ಭಾಷಣದಲ್ಲಿ "ಧರ್ಮಸ್ಥಳದ ಹೆಸರಿಗೆ ಕಳಂಕ ತರಲು ನಾವು ಬಿಡುವುದಿಲ್ಲ, ಖಾವಂದರ ಜೊತೆ ನಾವಿದ್ದೇವೆ" ಎಂಬ ಮಾತುಗಳು ಕೇಳಿಬಂದಿತ್ತಲ್ಲದೆ, ಆಮಂತ್ರಿಸದೆ ಪ್ರತಿಭಟನೆಯಲ್ಲಿ ಪಾಲ್ಗೊಳ್ಳಲು ಬಂದ ಸೌಜನ್ಯಳ ತಾಯಿ ಮತ್ತು ತಂಗಿ, ತಮ್ಮನನ್ನು ವೇದಿಕೆ ಹತ್ತಲು ಬಿಡದೆ, ತಮ್ಮನ ಮೇಲೆ ಹಲ್ಲೆಯನ್ನು ಕೂಡ ಮಾಡಲಾಯಿತು. ಸೌಜನ್ಯಳ ತಂಗಿ "ನಾವು ಧರ್ಮಸ್ಥಳದ ನಿವಾಸಿಗಳು, ನಮ್ಮ ಊರಿನ ಹೆಸರು ಹೇಳುವುದು ತಪ್ಪಾ?" ಎಂದು ಮಾಧ್ಯಮದ ಮುಂದೆ ಪ್ರಶ್ನಿಸಿದ್ದಳು.

'ಚಲೋ ಬೆಳ್ತಂಗಡಿ, ಮಹಾ ಧರಣಿ'ಯಲ್ಲಿ ಸೌಜನ್ಯ ಪ್ರಕರಣದ ತನಿಖೆಗಾಗಿ ವಿಶೇಷ ತನಿಖಾ ತಂಡ ರಚನೆಗೆ ಒತ್ತಾಯ

ಸೌಜನ್ಯ ಕೊಲೆಯಾದ ಆರಂಭಿಕ ದಿನದಿಂದಲೂ ಸಿಪಿಐ(ಎಂ) ಪಕ್ಷದ ಹೋರಾಟ ಮುಂಚೂಣಿಯಲ್ಲಿತ್ತು. ಅಂದು ಈ ಹೋರಾಟದ ನಾಯಕತ್ವ ವಹಿಸಿದ್ದ ಬಿ.ಎಂ.ಭಟ್ ರವರು ಇತ್ತೀಚೆಗೆ ಮಾಧ್ಯಮದಲ್ಲಿ ತಮ್ಮ ಅಭಿಪ್ರಾಯವನ್ನು ತಿಳಿಸಿದಕ್ಕಾಗಿ ಅವರು ಮುಂದೆ ಎಲ್ಲಿಯೂ ಆ ವಿಷಯ ಮಾತನಾಡದಂತೆ ಅವರ ಮೇಲೆಯೂ ಕಾನೂನಾತ್ಮಕ ನೋಟೀಸ್ ಜಾರಿ ಗೊಳಿಸಿದ್ದರು.

ಹೀಗೆ ಪ್ರಶ್ನೆ ಮಾಡುವವರನ್ನು ಒಂದಲ್ಲ ಒಂದು ರೀತಿಯಲ್ಲಿ ತಡೆಯೊಡ್ಡಿ ಬಾಯಿ ಮುಚ್ಚಿಸುವ ತಂತ್ರ ಆರಂಭವಾಯಿತು. ಧರ್ಮಸ್ಥಳ ಹಾಗೂ ಧರ್ಮಾಧಿಕಾರಿ , ಬಿಜೆಪಿ ರಾಜ್ಯ ಸಭಾ ಸದಸ್ಯ ವೀರೇಂದ್ರ ಹೆಗ್ಗಡೆ ಯವರ ಪರವಾಗಿ ಬ್ಯಾಟಿಂಗ್ ಮಾಡಲು ಕೆಲವು ಪತ್ರಕರ್ತರು ಅಣಬೆಯಂತೆ ಹುಟ್ಟಿಕೊಂಡರು.

ಇವೆಲ್ಲದರ ನಡುವೆ

ರಾಜ್ಯ ಸರಕಾರ ಸೌಜನ್ಯ ಪ್ರಕರಣದ ತನಿಖೆಗಾಗಿ ದಕ್ಷ ಅಧಿಕಾರಿಗಳನ್ನೊಳಗೊಂಡ ವಿಶೇಷ ತನಿಖಾ ತಂಡವನ್ನು ರಚಿಸಬೇಕು, ಹಾಗೂ ಕುಮಾರಿ ಪದ್ಮಲತಾ, ವೇದವಲ್ಲಿ, ಆನೆ ಮಾವುತ ನಾರಾಯಣ, ಆತನ ಸೋದರಿ ಯಮುನ ಸಹಿತ ಧರ್ಮಸ್ಥಳ, ಉಜಿರೆ ಭಾಗಗಳಲ್ಲಿ ನಡೆದಿರುವ ಕೊಲೆ, ಅಸಹಜ ಸಾವುಗಳನ್ನು ನ್ಯಾಯಾಂಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿ ಜನಪರ ಸಂಘಟನೆಗಳ ಒಕ್ಕೂಟದ ವತಿಯಿಂದ ಆಗಸ್ಟ್ 28, 2023ರಂದು ಬೆಳ್ತಂಗಡಿಯಲ್ಲಿ ರಾಜ್ಯ ಮಟ್ಟದ "ಚಲೋ ಬೆಳ್ತಂಗಡಿ, ಮಹಾ ಧರಣಿ" ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ನಿರ್ಧರಿಸಲಾಯಿತು. ದಕ್ಷಿಣ ಕನ್ನಡ ಜಿಲ್ಲೆಯ ಸಮಾನ ಮನಸ್ಕ ಸಂಘಟನೆಗಳು ಜಿಲ್ಲೆಯ ಜನತೆ ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಸರಕಾರದ ಮುಂದೆ ಬಲವಾದ ಒಗ್ಗಟ್ಟು ಪ್ರದರ್ಶಿಸಬೇಕು ಎಂದು ಮನವಿ ಮಾಡಿ ಕೊಳ್ಳುತ್ತಾ ಅಲ್ಲಲ್ಲಿ ಪೋಸ್ಟರ್ ಬಿಡುಗಡೆ ಮಾಡುವುದು, ಪಾದಯಾತ್ರೆಯ ಮೂಲಕ ಪ್ರಚಾರ ಮಾಡಲಾಯಿತು. ಜನರ ಪ್ರತಿಕ್ರಿಯೆ ಚನ್ನಾಗಿಯೇ ವ್ಯಕ್ತವಾಗಿತ್ತು.

ಆಗಸ್ಟ್ 27, 2023 ರಂದು ಬಿಜೆಪಿಯ ರಾಜ್ಯಾಧ್ಯಕ್ಷರ ನೇತೃತ್ವದಲ್ಲಿ ಜನರ ಕಣ್ಣಿಗೆ ಮಣ್ಣೆರುಚುವ ಸಲುವಾಗಿ ಒಂದು ನಾಟಕರೂಪದ ಕಾರ್ಯಕ್ರಮ ನಡೆಯಿತು. ಸೌಜನ್ಯ ಕೊಲೆಯಾದಾಗ ರಾಜ್ಯದಲ್ಲಿ ತಮ್ಮದೇ ಸರಕಾರ ಆಡಳಿತದಲ್ಲಿದ್ದರೂ ಬಾಯಿ ತೆರೆಯದೆ ಸುಮ್ಮನಿದ್ದ ಬಿಜೆಪಿ ಸರಕಾರ, ಕೇಂದ್ರದಲ್ಲೂ ಆಡಳಿತದ ಚುಕ್ಕಾಣಿ ಹಿಡಿದ ನಂತರ, ಸೌಜನ್ಯ ಪ್ರಕರಣದ ತನಿಖೆಯನ್ನು ಪಾರದರ್ಶಕವಾಗಿ ನಡೆಸುತ್ತಿದ್ದ ದಕ್ಷ ಸಿಬಿಐ ಅಧಿಕಾರಿ ಮುರುಗನ್ ಅವರನ್ನು ಬದಲಾಯಿಸಿ ಪ್ರಕರಣದ ನಿಜವಾದ ಆರೋಪಿಗಳು ತಪ್ಪಿಸಿಕೊಳ್ಳುವಂತೆ ಮಾಡಿ, ಸೌಜನ್ಯ ಕುಟುಂಬಕ್ಕೆ ಅನ್ಯಾಯ ಮಾಡಿತ್ತು. ಈಗ ತಮ್ಮದೇ ಪಕ್ಷದಲ್ಲಿರುವ ವೀರೇಂದ್ರ ಹೆಗ್ಗಡೆಯವರ ವಿರುದ್ಧ ಹೋರಾಟ ಮಾಡುವುದೆಂದರೆ ಕನಸಿನ ಮಾತು. ಇದೊಂದು ಹೋರಾಟದ ನಾಟಕವಲ್ಲದೆ ಮತ್ತೇನೂ ಅಲ್ಲ.

ಆಗಸ್ಟ್ 28 2023 ರ ಚಲೋ ಬೆಳ್ತಂಗಡಿ ಮಹಾಧರಣಿಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ರಾಜ್ಯದ ಮೂಲೆ ಮೂಲೆಗಳಿಂದ ಹೋರಾಟಗಾರರು ಭಾಗವಹಿಸಿದ್ದರು. ವೇದಿಕೆಯಲ್ಲಿ ದಕ್ಷಿಣ ಕನ್ನಡ ಜನಪರ ಸಂಘಟನೆಗಳ ಒಕ್ಕೂಟದ ಗೌರವ ಸಂಚಾಲಕರು ಹಾಗೂ ಬೆಳ್ತಂಗಡಿ ಕ್ಷೇತ್ರದ ಮಾಜಿ ಶಾಸಕರಾದ ವಸಂತ ಬಂಗೇರ ಅವರು ಸೌಜನ್ಯ ಹೋರಾಟದ ಪ್ಲೇ ಕಾರ್ಡ್ಸ್ ಹಿಡಿಯುವ ಮೂಲಕ ಚಾಲನೆ ನೀಡಿದರು. ಸುನಿಲ್ ಕುಮಾರ್ ಬಜಾಲ್ ಸ್ವಾಗತಿಸಿದರು. ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಅವರು ಕಾರ್ಯಕ್ರಮ ನಿರ್ವಹಣೆ ಮಾಡಿದರು.

ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ದೇವಿಯವರು ಮಾತನಾಡಿ "ಬೆಳ್ತಂಗಡಿಯ ಧರ್ಮಸ್ಥಳದ ಪರಿಸರದಲ್ಲಿ ನಡೆಯುತ್ತಿರುವ ಮಹಿಳೆಯರ ಅಸಹಜ ಸಾವುಗಳು ಮತ್ತು ಹತ್ಯೆಗಳ ಕುರಿತಾದಂತೆ ಈಗಾಗಲೇ ಜನರ ನಡುವೆ ಆಕ್ರೋಶ ಸಿಡಿದೆದ್ದಿದೆ. ಆ ಪರಿಸರದಲ್ಲಿ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ಸ್ವಸಹಾಯ ಸಂಘಗಳ ಮೂಲಕವಾಗಿ ನೀಡಲಾಗುವ ಸಾಲ ಮತ್ತು ಬಡ್ಡಿಯ ಸುಲಿಗೆಯ ಬಾಧೆಯಿಂದ ಜನ ತತ್ತರಿಸಿದ್ದಾರೆ. ಇದರ ವಿರುದ್ಧ ಜನತೆಯ ಪ್ರತಿರೋಧ ಪ್ರಬಲವಾಗಿ ಆರಂಭವಾಗಿದೆ. ಮಹಿಳೆಯರ ಮೇಲೆ ನಡೆಯುವ ದೌರ್ಜನ್ಯ, ಅತ್ಯಾಚಾರ, ಕೊಲೆಗಳಂತಹ ಘಟನೆಗಳು ತನಿಖೆಗೂ ಒಳಗಾಗದೆ ಅಪರಾಧಿಗಳು ತಪ್ಪಿಸಿಕೊಳ್ಳುವುದರ ಹಿಂದೆ ಯಾರಿದ್ದಾರೆ" ಎಂದು ಪ್ರಶ್ನಿಸಿದರು. ಇಂಥವುಗಳ ಹಿಂದೆ ಅದೆಂತಹ ಬಲಿಷ್ಠರು ಇದ್ದರೂ ನ್ಯಾಯಕ್ಕಾಗಿ ನಡೆಯೋ ಹೋರಾಟ ನಿಲ್ಲುವುದಿಲ್ಲ ಎಂದು ಅವರು ಘೋಷಿಸಿದರು.

ಈ ಸಂದರ್ಭದಲ್ಲಿ ವಿಶ್ರಾಂತ ಕುಲಪತಿಗಳಾದ ಸಭಿಹಾ ಭೂಮಿಗೌಡ, ವಿಚಾರವಾದಿ ಪ್ರೊ.ನರೇಂದ್ರ ನಾಯಕ್, ಮಹಿಳಾ ಪರ ದಿಟ್ಟ ಧ್ವನಿ ಕೆ.ನೀಲಾ, ಅಖಿಲಾ ವಿದ್ಯಾಸಂದ್ರ, ಮೀನಾಕ್ಷಿ ಬಾಳಿ, ಒಡನಾಡಿ ಸಂಸ್ಥೆಯ ಸ್ಟ್ಯಾನ್ಲಿ, ಕೆ.ಎಸ್.ವಿಮಲ, ಪ್ರಭಾ ಬೆಳವಂಗಲ ಸೇರಿದಂತೆ ಜನಪರ, ಪ್ರಗತಿಪರ ಸಂಘಟನೆಗಳ ಮುಖಂಡರು ಉಪಸ್ಥಿತರಿದ್ದರು. ಪೆಂಡಾಲ್ ನ ಹೊರಗಡೆ ರಸ್ತೆಯಲ್ಲಿ, ಅಂಗಡಿ ಮುಂಭಾಗದಲ್ಲಿ ಜನಸಮೂಹವು ಕಾರ್ಯಕ್ರಮ ವೀಕ್ಷಿಸುತ್ತಿತ್ತು. ಒಟ್ಟಾರೆ ಹೇಳುವುದಾದರೆ ಈ ಮಹಾಧರಣಿಯು ನಿರೀಕ್ಷೆ ಮೀರಿ ಯಶಸ್ವಿಯಾಗಿದೆ. ಸಂಗಾತಿಗಳ "ಸೌಜನ್ಯ ಹಾಡು" ಹೋರಾಟದ ಕಿಚ್ಚೆಬ್ಬಿಸಿತು.

ಪ್ರತಿಭಟನಾ ಸಭೆಯಲ್ಲಿ ಕೇಳಿದ ಕೆಲ ಮಾತುಗಳು

"ಅಂದು ಮೌನವಾಗಿದ್ದ ಬಿಜೆಪಿ ಇಂದು ಯಾರ ರಕ್ಷಣೆಗಾಗಿ ಎದ್ದಿದ್ದಾರೆ? ವೀರೇಂದ್ರ ಹೆಗ್ಗಡೆಯವರೇ, ವೇದವಲ್ಲಿ, ಪದ್ಮಲತಾ, ಆನೆ ಮಾವುತ, ಮತ್ತವನ ತಂಗಿ ಹಾಗೂ ಇತರ ಅಸಹಜ ಸಾವುಗಳ ತನಿಖೆಗೆ ಕೋರ್ಟಿಗೆ ಯಾವಾಗ ಹೋಗುತ್ತೀರಿ? ಆಣೆ ಪ್ರಮಾಣಗಳಿಂದ ಸೌಜನ್ಯಳಿಗೆ ನ್ಯಾಯ ಸಿಗದು. ಇದು ದಿಕ್ಕು ತಪ್ಪಿಸುವ ಷಡ್ಯಂತ್ರ,"

–ಕೆ. ನೀಲಾ

ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರು

* * *

"ದೇವರ ಹೆಸರಿನಲ್ಲಿ ಎಲ್ಲ ಅನಾಚಾರಗಳನ್ನು ಮುಚ್ಚಿಹಾಕಲಾಗುತ್ತಿದೆ. ನಾವು ಕಮ್ಯುನಿಸ್ಟ್ ಹೌದು, ರೇಪಿಸ್ಟ್ ಅಲ್ಲ... ಎಲ್ಲರ ಸಾವು ಬೆನ್ನ ಹಿಂದೆ ಇದ್ದರೆ ಕಮ್ಯೂನಿಸ್ಟರ ಸಾವು ಕಣ್ಣ ಮುಂದೆಯೇ ಇರುತ್ತದೆ. ಎಲ್ಲಿಯವರೆಗೆ ಈ ದೇಹದಲ್ಲಿ ಉಸಿರಿರುತ್ತದೆಯೋ, ಎಲ್ಲಿಯವರೆಗೆ ಕೆಂಬಾವುಟ ಇರುತ್ತದೆಯೋ, ಅಲ್ಲಿಯವರೆಗೆ ಈ ಹೋರಾಟ ಜಾರಿಯಲ್ಲಿರುತ್ತದೆ."

–ಡಾ. ಮೀನಾಕ್ಷಿ ಬಾಳಿ

– ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ, ರಾಜ್ಯಾಧ್ಯಕ್ಷರು

* * *

"ಎಂದೂ ಓದದ ಮಾಣಿ ಅಮಾಸೆ ದಿನ ಓದಲು ಕುಳಿತ."

–ನಳಿನ್ ಕುಮಾರ್ ಗೆ ಟಾಂಗ್ ಕೊಟ್ಟ ವಸಂತ ಬಂಗೇರಾ (ಮಾಜಿ ಶಾಸಕರು, ಹೋರಾಟ ಸಮಿತಿಯ ನಾಯಕರು)

ರಾಷ್ಟ್ರೀಯ ದಲಿತರ ಸಮಾವೇಶ–ಹೈದರಾಬಾದ್
ಜಾತಿ ನಿರ್ಮೂಲನೆ, ಸಂವಿಧಾನದ ಆಶಯಗಳ ಜಾರಿಗಾಗಿ ಹೋರಾಟಕ್ಕೆ ನಿರ್ಧಾರ

ಆಗಸ್ಟ್ 26–27 ಎರಡು ದಿನಗಳ ಕಾಲ ಹೈದಾರಾಬಾದ್ ನಲ್ಲಿ ನಡೆದ 'ರಾಷ್ಟ್ರೀಯ ದಲಿತರ ಸಮಾವೇಶ' ದಲ್ಲಿ ಜಾತಿ ನಿರ್ಮೂಲನೆ ಮತ್ತು ಸಂವಿಧಾನದ ಆಶಯಗಳ ಜಾರಿಗಾಗಿ ಹೋರಾಟ ರೂಪಿಸಿ ಸರ್ಕಾರಗಳ ಮುಂದೆ ಹಕ್ಕುತ್ತಾಯ ಮಂಡಿಸಲು ನಿರ್ಧರಿಸಲಾಗಿದೆ. ಈ ಕುರಿತು ದೇಶಾದ್ಯಂತ ದಲಿತರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನ ನಡೆದಿದೆ. ದಲಿತರಿಗಾಗಿ ಸರ್ಕಾರಗಳು ರೂಪಿಸಿರುವ ಯೋಜನೆಗಳು ಅದರ ಅನುಷ್ಠಾನ ಲೋಪಗಳ ಕುರಿತು ಮತ್ತಷ್ಟು ಅರಿವು ಮೂಡಿಸುವ ಮೂಲಕ ಮುಂದಿನ ದಿನಗಳಲ್ಲಿ ಹೆಚ್ಚೆಚ್ಚು ದಲಿತರನ್ನು ಹೋರಾಟಗಳಲ್ಲಿ ಭಾಗವಹಿಸುವಂತೆ ನೋಡಿಕೊಳ್ಳಬೇಕು ಎಂದು ಸಮಾವೇಶ ಕರೆ ನೀಡಿದೆ.



ಭಾರತದ ದಲಿತರ ಜೀವನದ ಇಂದಿನ ಸ್ಥಿತಿಗತಿ ಕುರಿತು ಸಮಗ್ರ ಅಧ್ಯಯನದಲ್ಲಿ ತೊಡಗಿರುವ ಮತ್ತು ದೇಶಕ್ಕೆ ಸೇವೆ ಮಾಡಿ ಆಡಳಿತದ ಅನುಭವ ಪಡೆದಿರುವ ಹಿರಿಯ ಅಧಿಕಾರಿಗಳ ತಂಡದ ನೇತೃತ್ವದಲ್ಲಿ ದೇಶದ ಎಲ್ಲಾ ರಾಜ್ಯಗಳ ಸುಮಾರು 350 ದಲಿತ ಮುಖಂಡರು ಹೈದರಾಬಾದ್ ನಲ್ಲಿ ನಡೆದ ಸಮಾವೇಶದಲ್ಲಿ ಭಾಗವಹಿಸಿದ್ದರು.



ದಲಿತ್ ಶೋಷಣ್ ಮುಕ್ತಿ ಮಂಚ್ ನ ರಾಷ್ಟ್ರೀಯ ಅಧ್ಯಕ್ಷ ಮತ್ತು ಕೇರಳದ ಸಚಿವ ರಾಧಾಕೃಷ್ಣ ಸಮಾವೇಶವನ್ನು ಉದ್ಘಾಟಿಸಿ ಮಾತನಾಡಿ, ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ದಲಿತಪರ ಹೋರಾಟಗಳನ್ನು ಕೇಂದ್ರೀಕರಿಸಿ ಮುನ್ನಡೆಸುವ ಕುರಿತು ನಾವು ಈ ಸಮಾವೇಶದಲ್ಲಿ ಆಲೋಚಿಸುತ್ತಿರುವುದಾಗ ಹೇಳಿದರು. ಜಾತಿ ವ್ಯವಸ್ಥೆ ವಿರುದ್ಧ ಹೋರಾಟ ನಡೆಸಿದ ಹಿರಿಯರಾದ ಇಎಂಎಸ್ ನಂಬೂದರಿಪಾದ್, ನಾರಾಯಣ್ ಗುರು, ಪೆರಿಯಾರ್, ಕೃಷ್ಣ ಪಿಳ್ಳೈ, ಎ.ಕೆ. ಗೋಪಾಲನ್ ರವರುಗಳನ್ನು ಹಾಗೂ ಗುರುವಾಯೂರು ದೇವಾಲಯ ಸತ್ಯಾಗ್ರಹವನ್ನು ನೆನಪಿಸಿದ ಅವರು, ದಲಿತನೊಬ್ಬ ಕೇರಳದಲ್ಲಿ ಮುಜರಾಯಿ ಖಾತೆಗೆ ಸಚಿವರಾಗಿರುವುದನ್ನು ಸ್ಮರಿಸಿದರು.

ಭೂಪಾಲ್ ಘೋಷಣೆಯ ಮೂಲಕ ದಲಿತರಿಗೆ ಸರ್ಕಾರದ ಕಾಮಗಾರಿಗಳಲ್ಲಿ ಮೀಸಲಾತಿ ಜಾರಿಗೊಳಿಸಲು ಮಹತ್ತರ ಯೋಜನೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ ಆಡಳಿತದ ಹಿರಿಯ ಅಧಿಕಾರಿ ರಾಜಶೇಖರ್ ವಂದರು ರವರು ಮಾತನಾಡಿ, ಸಂವಿಧಾನದ 15, 16 ಮತ್ತು 17ನೇ ಶಾಸನಗಳ ಬಗ್ಗೆ ವಿವರಿಸಿದರು. 1990ರ ನಂತರದ ಜಾಗತೀಕರಣ, ಖಾಸಗಿಕರಣ ನೀತಿಗಳನ್ನು ತಂದ ಸರ್ಕಾರಗಳು ಬಡವರ ಉದ್ಯೋಗ ಕಸಿದುಕೊಂಡು ಅವರನ್ನು ಗುತ್ತಿಗೆ ಕಾರ್ಮಿಕರನ್ನಾಗಿ ಮಾಡಿದ್ದಾರೆ, ಮಾನ್ಯುಯಲ್ ಸ್ಕ್ಯಾವೇಂಜರ್ ಪದ್ಧತಿ ಈಗಲೂ ಜೀವಂತವಿರುವುದು ವಿಷಾಧಕರ ಸಂಗತಿಯಾಗಿದೆ ಎಂದು ತಮ್ಮ ಆಕ್ರೋಶ ವ್ಯಕ್ತಪಡಿಸಿದರು.

ಎಸ್ಸಿ ಎಸ್ಪಿ, ಟಿ ಎಸ್ ಪಿ ಉಪ ಯೋಜನೆಯನ್ನು ರೂಪಿಸುವಲ್ಲಿ ಪ್ರಧಾನ ಪಾತ್ರ ವಹಿಸಿದ ಹಿರಿಯ ಆಡಳಿತ ಅಧಿಕಾರಿ ಕುಕ್ಕಿ ಮಾಧವರಾವ್ ಅವರು ಮತನಾಡಿ, ದಲಿತರ ಸಾಮಾಜಿಕ, ಆರ್ಥಿಕ ಅಸಮಾನತೆ ದೇಶದಲ್ಲಿ ಮುಂದುವರೆದಿದ್ದು, ಈ ಸಂದರ್ಭದಲ್ಲಿ ಮಾರ್ಕ್ಸ್, ಅಂಬೇಡ್ಕರ್ ಸಮಾನ ಚಿಂತಕರಾಗಿದ್ದು, ಲಾಲ್ ಮತ್ತು ನೀಲ್ (ಕೆಂಪು ಮತ್ತು ನೀಲಿ ಬಣ್ಣಗಳು) ಮಿಲನಗೊಂಡು ಈ ಮಹನೀಯರ ಚಿಂತನೆಗಳನ್ನು ನಾವು ಅಳವಡಿಸಿಕೊಂಡು ಮುನ್ನಡೆಯಬೇಕು ಎಂದರು.

ಪ್ರೊಫೆಸರ್ ಆರ್. ಲಿಂಬಾದ್ರಿಯವರು ಮಾತನಾಡಿ, ಸ್ವಾತಂತ್ರ್ಯ ದೊರೆತು 75 ವರ್ಷಗಳು ಕಳೆದರೂ ಉನ್ನತ ಶಿಕ್ಷಣ ಪ್ರವೇಶ ಪಡೆಯುವಲ್ಲಿ ದಲಿತರು ಇಂದಿಗೂ ವಂಚಿತರಾಗಿದ್ದಾರೆ ಎಂದರು. ಮಲ್ಲೆಪಲ್ಲಿ ಲಕ್ಷ್ಮಯ್ಯ ಅವರು ಸ್ವಾಗತ ಕೋರಿದರು. ಸಮಾವೇಶದಲ್ಲಿ ಕಾಕಿ ಮಾಧವರಾವ್, ರಾಜಶೇಖರ್, ನರೇಂದ್ರ ಕುಮಾರ್, ರಾಮಚಂದ್ರ ಮೂರ್ತಿ, ಬಿ. ವೆಂಕಟ, ಗುಲ್ಜಾರ್ ಸಿಂಗ್ ಗೋರಿಯಾ ಭಾಗವಹಿಸಿದ್ದರು.

ರಾಷ್ಟ್ರೀಯ ದಲಿತ ಶೋಷಣೆ ಮುಕ್ತಿ ಮಂಚ್ ನ ಉಪಾಧ್ಯಕ್ಷ ಗೋಪಾಲಕೃಷ್ಣ ಹರಳಹಳ್ಳಿ, ಕೇಂದ್ರ ಸಮಿತಿ ಸದಸ್ಯರಾದ ಎನ್. ನಾಗರಾಜ್, ಕರ್ನಾಟಕ ರಾಜ್ಯ ಸಮಿತಿ ಸಹ ಸಂಚಾಲಕ ಎನ್. ರಾಜಣ್ಣ ಹಾಗೂ ರಾಜ್ಯ ಸಮಿತಿ ಸದಸ್ಯರು, ಜಿಲ್ಲಾ ಮುಖಂಡರುಗಳು ಸೇರಿದಂತೆ ಕರ್ನಾಟಕವನ್ನು ಪ್ರತಿನಿಧಿಸಿ 18 ಪ್ರತಿನಿಧಿಗಳು ಸಮಾವೇಶದಲ್ಲಿ ಭಾಗವಹಿಸಿದ್ದರು. ದಲಿತ್ ಶೋಷಣ್ ಮುಕ್ತಿ ಮಂಚ್ ನ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ರಾಮಚಂದ್ರ, ಸುಭಾಷಿಣಿ ಅಲಿ, ಬಿ.ವಿ. ರಾಘವಲು, ಕೃಷಿ ಕೂಲಿಕಾರ ಸಂಘದ ರಾಷ್ಟ್ರೀಯ ಕಾರ್ಯದರ್ಶಿ ವೆಂಕಟ್ ಮುಂತಾದವರು ಸಮಾವೇಶದಲ್ಲಿ ಅತಿಥಿ ಗಣ್ಯರಾಗಿ ಭಾಗವಹಿಸಿದ್ದರು.

ರಾಜ್ಯವನ್ನು ಬರಗಾಲ ಪೀಡಿತ ಪ್ರದೇಶವೆಂದು ಘೋಷಿಸಲು ಮತ್ತು ಅಗತ್ಯ ಪರಿಹಾರ ಕ್ರಮ ಕೈಗೊಳ್ಳುವಂತೆ ಒತ್ತಾಯ
ರಾಜ್ಯದಾದ್ಯಂತ ಸೆಪ್ಟಂಬರ್ 20 ರಂದು ಪ್ರತಿಭಟನೆ ನಡೆಸಲು ಸಿಪಿಐ(ಎಂ) ಕರೆ

ಕರ್ನಾಟಕ ರಾಜ್ಯವನ್ನು ಮುಂಗಾರು ತಡವಾಗಿ ಪ್ರವೇಶಿಸಿದ್ದರಿಂದ ಮತ್ತು ತಡವಾಗಿಯಾದರೂ ಮುಂಗಾರು ಸುರಿದರೂ ರಾಜ್ಯದ ಹಲವೆಡೆ ಸುಮಾರು 25 ಲಕ್ಷ ಎಕರೆ ಪ್ರದೇಶದಲ್ಲಿ ಭಿತ್ತನೆಯು ನಡೆಯಲಿಲ್ಲವೆಂದು ಸರಕಾರದ ಅಂಕಿ ಅಂಶಗಳು ಹೇಳುತ್ತಿವೆ.

ಇದೀಗ ಬಿತ್ತನೆಯಾದ 150 ಲಕ್ಷ ಎಕರೆಯಷ್ಟು ಪ್ರದೇಶದ ಬೆಳೆಯು ಮಳೆಯ ಅಥವಾ ನೀರಿನ ಅಭಾವದಿಂದ ಇಳುವರಿ ಕುಸಿತದ ಹಾಗೂ ಬೆಳೆ ನಾಶದ ಪರಿಸ್ಥಿತಿಯನ್ನು ಎದುರಿಸುತ್ತಿದೆ. ಹಲವೆಡೆ ರೈತರು ಮೊದಲು ಬಿತ್ತಿದ ಬೆಳೆಗೆ ಸಕಾಲಿಕ ಮಳೆ ದೊರೆಯದುದರಿಂದ ನಂತರದ ಮಳೆಗೆ ಮರು ಬಿತ್ತನೆಗೂ ಕ್ರಮವಹಿಸಿ ಆ ಬೆಳೆಯು ಇದೀಗ ಗ್ಯಾರಂಟಿ ಇಲ್ಲದಂತಹ ಪರಿಸ್ಥಿತಿ ಉಂಟಾಗಿದೆ.

ಮಳೆಯ ಅಭಾವ ಬೋರ್ ವೆಲ್ ಗಳು ಬತ್ತುವಂತೆ ಮಾಡುತ್ತಿದೆ. ವಿದ್ಯುತ್ ಕಣ್ಣ ಮುಚ್ಚಾಲೆಯು ಇದರೊಂದಿಗೆ ರೈತರನ್ನು ಬಾದಿಸುತ್ತಿದೆ. ಮುನ್ಸೂಚನೆಯಂತೆ ಮುಂಬರುವ ದಿನಗಳಲ್ಲಿಯೂ ಮಳೆಯ ಖಾತರಿ ಇಲ್ಲವಾಗಿದೆ. ಅದಾಗಲೇ ನೂರಾರು ಗ್ರಾಮಗಳು ಕುಡಿಯುವ ನೀರಿನ ಅಭವ ವನ್ನು ಎದುರಿಸುತ್ತಿವೆ. ಕೂಲಿಕಾರರು ಹಾಗೂ ಬಡರೈತರು ಕೂಲಿ ಕೆಲಸ ಹುಡುಕಿಕೊಂಡು ಗುಳೆ ಅಥವಾ ವಲಸೆಯ ಕಡೆ ಮುಖ ಮಾಡುತ್ತಿದ್ದಾರೆ. ಅಂಕಿ ಅಂಶಗಳಂತೆ ರಾಜ್ಯದ ನಗರ ತಾಲೂಕುಗಳನ್ನು ಬಿಟ್ಟರೇ, ಉಳಿದ ಎಲ್ಲ ತಾಲೂಕುಗಳು ಮತ್ತು ಕಾವೇರಿ ಜಲಾನಯದ ನೀರಾವರಿ ಇರುವ ತಾಲೂಕುಗಳು, ನದಿಗಳು ಬತ್ತಿ ಹೋದುದರಿಂದಾಗಿ, ರಾಜ್ಯದಾದ್ಯಂತ ನದಿಗಳ ಇಕ್ಕೆಲಗಳ ನೀರಾವರಿ ಪಂಪ್ ಸೆಟ್ ರೈತರಿರುವ ಪ್ರದೇಶಗಳು ಸೇರಿ ಬರದ ಬಾಧೆಯನ್ನು ಅನುಭವಿಸುತ್ತಿದ್ದಾರೆ.

ಈ ಬರವು ಮುಂದೆ ವ್ಯಾಪಕವಾಗಿ ಸಾಲಬಾಧಿತ ರೈತರ ತೀವ್ರ ಪ್ರಮಾಣದ ಆತ್ಮಹತ್ಯೆಗಳಿಗೂ ಕಾರಣವಾಗಬಹುದಾಗಿದೆ. ಕೃಷಿರಂಗ ಬರಕ್ಕೆ ತುತ್ತಾದಲ್ಲಿ ಮುಂದೆ ಆಹಾರಧಾನ್ಯದ ಬೆಲೆಗಳು ಮತ್ತಷ್ಟು ಗಗನ ಮುಖಿಯಾಗುವ ಎಲ್ಲ ಸಂಭವಗಳಿವೆ. ಇವುಪಟ್ಟಣ ಹಾಗೂ ನಗರದ ಜನತೆಯನ್ನು ಬಾದೆಗೀಡು ಮಾಡಿವೆ.

ಆದ್ದರಿಂದ, ಇಡೀ ರಾಜ್ಯವೇ ಬರ ಪೀಡಿತವಾಗಿ ಬದಲಾಗುತ್ತಿರುವುದರಿಂದ ರಾಜ್ಯವನ್ನು ಬರ ಪೀಡಿತ ಪ್ರದೇಶವೆಂದು ಘೋಷಿಸುವಂತೆ ಸಿಪಿಐ(ಎಂ) ಮನವಿ ಮಾಡುತ್ತದೆ. ಅದೇ ರೀತಿ, ಒಕ್ಕೂಟ ಸರಕಾರದ ಮೇಲೆ ಹೆಚ್ಚಿನ ಒತ್ತಡ ಹೇರಿ ನೆರವು ಪಡೆಯಲು ಮತ್ತು ರಾಜ್ಯ ಸರಕಾರವು ಬರಪರಿಹಾರಕ್ಕೆ ಕ್ರಮ ವಹಿಸಬೇಕಾಗಿದೆ.

ಈ ಕೆಳಕಂಡ ಹಕ್ಕೊತ್ತಾಯಗಳಿಗಾಗಿ "ರಾಜ್ಯದಾದ್ಯಂತ ರಾಜ್ಯದ ಜನತೆ ಎಲ್ಲಾ ತಾಲೂಕುಗಳಲ್ಲಿ ಸೆಪ್ಟಂಬರ್ 20 ರಂದು ಪ್ರತಿಭಟನೆ ನಡೆಸಲು ಮತ್ತು ಸಿಪಿಐ(ಎಂ) ನಡೆಸುವ ಪ್ರತಿಭಟನೆಯಲ್ಲಿ ಪಾಲ್ಗೊಳ್ಳುವಂತೆ ಮನವಿ ಮಾಡಿದೆ.

ಹಕ್ಕೊತ್ತಾಯಗಳು:


1) ಬರ ಪೀಡಿತ ಕೂಲಿಕಾರರು, ಬಡ ರೈತರು ಗುಳೆ ಹೋಗದಂತೆ ತಡೆಯಲು ಉದ್ಯೋಗ ಖಾತ್ರಿ ಕೆಲಸವನ್ನು ಪ್ರತಿ ಕುಟುಂಬಕ್ಕೆ 150 ದಿನಗಳ ಕಾಲ ಕಡ್ಡಾಯವಾಗಿ ದೊರೆಯುವಂತೆ ಅಗತ್ಯ ಕ್ರಮವಹಿಸಬೇಕು.
2) ಬೆಳೆ ನಷ್ಟಕ್ಕೆ ಬೆಳೆ ವಿಮೆ ದೊರಕುವಂತೆ ವ್ಯವಸ್ಥೆ ಮಾಡಬೇಕು.
3) ಬಡ ರೈತರ ಹಾಗೂ ಕೂಲಿಕಾರರ ಮತ್ತು ಸ್ತ್ರೀಶಕ್ತಿ ಸಂಘಗಳ ಮಹಿಳೆಯರ ಎಲ್ಲ ಸಾಲ ಮನ್ನಾ ಮಾಡಬೇಕು. ಶ್ರೀಮಂತ ರೈತರ ಸಾಲ ದೀರ್ಘಾವಧಿ ಸಾಲವಾಗಿ ಪರಿವರ್ತಿಸಬೇಕು ಮತ್ತು ಬಡ್ಡಿ ಮನ್ನಾ ಮಾಡಬೇಕು.
4) ಬೆಳೆ ನಷ್ಟ ಪರಿಹಾರವಾರವನ್ನು ಒದಗಿಸಬೇಕು. ಮುಂದಿನ ಸಾಲಿಗೆ ಉಚಿತ ಬೀಜ, ಗೊಬ್ಬರ, ಕೀಟ ನಾಶಕಗಳನ್ನು ಒದಗಿಸಬೇಕು. ಬಿತ್ತನೆಯ ಹಾಗೂ ಕೊಯ್ಲು ಕೆಲಸಗಳನ್ನು ಉದ್ಯೋಗ ಖಾತ್ರಿ ಯೋಜನೆಯಡಿ ತರಬೇಕು.
5) ಬರಗಾಲದ ಕಾರಣದಿಂದ ಬರ ಬಾಧಿತರ ಶೈಕ್ಷಣಿಕ ಶುಲ್ಕಗಳನ್ನು ಮನ್ನಾ ಮಾಡಬೇಕು.
6) ಆಹಾರ ಧಾನ್ಯಗಳ ಕೃತಕ ಅಭಾವ ಸೃಷ್ಟಿಸಿ ಕಾಳ ಸಂತೆಯಲ್ಲಿ ಗ್ರಾಹಕರನ್ನು ಸುಲಿಗೆಗೊಳಪಡಿಸುವ ಕಾಳ ಸಂತೆಕೋರರ ವಿರುದ್ದ ಕಠಿಣ ಕ್ರಮಗಳನ್ನು ಕೈಗೊಳ್ಳಬೇಕು.

ಚಂದಾ ವಿವರ
ವಾರ್ಷಿಕ ಚಂದಾ : ರೂ.500.00
ದ್ವೈವಾರ್ಷಿಕ ಚಂದಾ : ರೂ.1000.00

ಚಂದಾದಾರರು ಸಂರ್ಕಿಸಿ:
ಕ್ರಿಯಾ ಪ್ರಕಾಶನ, ಸೂರಿ ಭವನ, ನಂ.40/5,
2ನೇ 'ಬಿ' ಮುಖ್ಯರಸ್ತೆ, 16ನೇ ಅಡ್ಡರಸ್ತೆ,
ಸಂಪಂಗಿರಾಮನಗರ, ಬೆಂಗಳೂರು 560027
ಕಛೇರಿ ದೂರವಾಣಿ: 080–22234369
ಫೋನ್: 9448578021, 9483966467

2ಜಿ ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲೇ ಇಲ್ಲ

ಉದ್ಯಮಿಗಳು, ರಾಜಕಾರಣಿಗಳು ದೋಚಿದ ರೂ. 1.76 ಲಕ್ಷ ಕೋಟಿ ಸಾರ್ವಜನಿಕರ ಪಾಲಿಗೆ ದಕ್ಕಲೇ ಇಲ್ಲ



ಭ್ರಷ್ಟಾಚಾರದ ವಿರುದ್ಧದ ಜನರ ಆಕ್ರೋಶವನ್ನು ಬಂಡವಾಳ ಮಾಡಿಕೊಂಡು, ಭ್ರಷ್ಟಾಚಾರ ವಿರೋಧಿ ಆಂದೋಲನಗಳಿಗೆ ಪ್ರತ್ಯಕ್ಷವಾಗಿ ಮತ್ತು ಕೆಲವೊಮ್ಮೆ ತೆರೆಮರೆಯಲ್ಲಿ ನೇತೃತ್ವ ನೀಡಿದ ಬಿಜೆಪಿ ಕೇಂದ್ರದಲ್ಲಿ ಅಧಿಕಾರ ಹಿಡಿದು ನರೇಂದ್ರ ಮೋದಿ ಪ್ರಧಾನಿಯಾದರು. ತಾನು ಅಧಿಕಾರಕ್ಕೆ ಬಂದರೆ, ದೇಶದಲ್ಲಿ ಭ್ರಷ್ಟಾಚಾರ ನಿರ್ಮೂಲನೆ ಮಾಡುತ್ತೇವೆ, ಬಹುಕೋಟಿ ಮೌಲ್ಯದ 2ಜಿ ಮತ್ತು ಕಲ್ಲಿದ್ದಲು ಹಗರಣ ಸೇರಿದಂತೆ ಎಲ್ಲಾ ರೀತಿಯ ಹಗರಣಗಳಲ್ಲಿ ಭಾಗಿಯಾದವರನ್ನು ಜೈಲಿನ ಕಂಬಿ ಎಣಿಸುವಂತೆ ಮಾಡುತ್ತೇವೆ, ಎಂದೆಲ್ಲಾ ಜನರನ್ನು ನಂಬಿಸಿ, 2014ರ ಚುನಾವಣೆಯಲ್ಲಿ ಬಿಜೆಪಿ ಶೇ. 31ರಷ್ಟು ಮತ ಪಡೆದು ಅಧಿಕಾರಕ್ಕೆ ಬಂತು. ಅಧಿಕಾರಕ್ಕೆ ಬಂದ ನಂತರ, ಈ ಮೊದಲು ತಾವೇ ಆರೋಪ ಹೊರಿಸಿದ್ದ ದೊಡ್ಡ ಹಗರಣಗಳಲ್ಲಿ ಭಾಗಿಯಾದವರಿಗೆ ಶಿಕ್ಷೆ ಕೊಡುವುದಿರಲಿ, ಭ್ರಷ್ಟಾಚಾರಿಗಳಿಗೆ ಪರಿಶುದ್ಧರು ಎಂದು ಬಿರುದು ಕೊಟ್ಟ ಉದಾಹರಣೆಗಳೇ ಹೆಚ್ಚು. ಹಾಗಾದರೆ, ಭ್ರಷ್ಟಾಚಾರ ವಿರೋಧಿ ಆಂದೋಲನ ಎಂಬುದು, ದೊಡ್ಡ ಬಂಡವಾಳಗಾರರು ಮತ್ತು ಹಿಂದುತ್ವವಾದಿಗಳ ಕೂಟ ಭಾರತೀಯರನ್ನು ವಂಚಿಸಲು ಹೂಡಿದ ಒಂದು ತಂತ್ರವೇ? ಈ ಲೇಖನದಲ್ಲಿ 2ಜಿ ಹಗರಣದ ಕುರಿತು ನೋಡೋಣ.

ಮೋದಿ 9 ವರ್ಷಗಳು–ಭಾಗ–14

ಸಿ. ಸಿದ್ದಯ್ಯ


ಬಹುಕೋಟಿ ಮೌಲ್ಯದ 2ಜಿ ಹಗರಣ, ಕಲ್ಲಿದ್ದಲು ಹಗರಣ ಯಾರಿಗೆ ಗೊತ್ತಿಲ್ಲ ಹೇಳಿ? ಈ ಹಗರಣಗಳನ್ನೇ ಪ್ರಮುಖವಾಗಿ ಇಟ್ಟುಕೊಂಡು, ದೇಶಾದ್ಯಂತ, ಅಣ್ಣಾ ಹಜಾರೆ ನೇತೃತ್ವದಲ್ಲಿ ಭ್ರಷ್ಟಾಚಾರ ವಿರೋಧಿ ಆಂದೋಲನ ನಡೆದದ್ದು, ಬಿಜೆಪಿ ಮತ್ತು ಸಂಘಪರಿವಾರ ಅದರ ಹಿಂದೆ ಇದ್ದದ್ದು, ಕಾರ್ಪೋರೇಟ್ ಒಡೆತನದ ಮಾಧ್ಯಮಗಳು ವ್ಯಾಪಕ ಪ್ರಚಾರ ಕೊಟ್ಟಿದ್ದು, ಈ ಆಂದೋಲನದಲ್ಲಿ ಕೇಜ್ರಿವಾಲ್, ಕಿರಣ್ ಬೇಡಿ ಜೊತೆಗೂಡಿದ್ದು, ವಿದ್ಯಾರ್ಥಿಗಳು, ಯುವಜನರು 'ನಾನೂ ಅಣ್ಣಾ' ಎಂದು ಹೇಳುತ್ತಾ ಆಂದೋಲನದಲ್ಲಿ ಭಾಗಿಯಾಗಿದ್ದು, ಈ ಆಂದೋಲನದ ನಂತರ ನಡೆದ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಸೋತು, ಬಿಜೆಪಿ ನೇತೃತ್ವದ ಎನ್ ಡಿಎ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದು, ನಂತರದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕೇಜ್ರಿವಾಲ್ ಅವರ ಆಮ್ ಆದ್ಮಿ ಪಕ್ಷ ಗೆದ್ದು ಅಧಿಕಾರಕ್ಕೆ ಬಂದಿದ್ದು, ಕೇಜ್ರಿವಾಲ್ ಅಧಿಕಾರಕ್ಕೆ ಬಂದ ನಂತರ ಉದ್ಯಮಿಗಳ ಭ್ರಷ್ಟಾಚಾರದ ಕುರಿತು ಮೌನವಾಗಿರುವುದು, ಮೋದಿ ಪ್ರಧಾನಿಯಾದ ನಂತರ ಕಿರಣ್ ಬೇಡಿ ರಾಜ್ಯಪಾಲರಾಗಿ ನೇಮಕಗೊಂಡಿದ್ದು ಇವೆಲ್ಲವೂ ಸಾಮಾನ್ಯವಾಗಿ ಎಲ್ಲರಿಗೂ ನೆನಪಿನಲ್ಲಿರುತ್ತದೆ. ಆದರೆ, ಸಾವಿರಾರು ಕೋಟಿ ಮೌಲ್ಯದ 2ಜಿ ಹಗರಣ ಮತ್ತು ಕಲ್ಲಿದ್ದಲು ಹಗರಣಗಳ ಅಂತ್ಯ ಹೇಗಾಯಿತು? ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಯಿತೇ? ಅವರು ಜೈಲು ಪಾಲಾದರೆ? ಹಗರಣದಲ್ಲಿ ಲೂಟಿ ಮಾಡಿದ ಲಕ್ಷಾಂತರ ಕೋಟಿ ಮೌಲ್ಯದ ಸಾರ್ವಜನಿಕರ ಸಂಪತ್ತನ್ನು ಸರ್ಕಾರ ವಶಕ್ಕೆ ಪಡೆಯಿತೇ? ಅಥವಾ ನಂತರದ ತರಂಗಾಂತರ ಹಂಚಿಕೆಗಳು ಪಾರದರ್ಶಕವಾಗಿ, ವಂಚನೆ ಇಲ್ಲದ ನಡೆಯುತ್ತಿವೆಯೇ? ಈ ಎಲ್ಲಾ ಪ್ರಶ್ನೆಗಳಿಗೆ 'ಇಲ್ಲ' ಎಂಬುದೊಂದೇ ಉತ್ತರ.

ಇಷ್ಟೆಲ್ಲಾ ಹೇಳುವಾಗಲೂ, ಅಣ್ಣಾ ಹಜಾರೆ ತಾವೇ ಸಿದ್ಧಪಡಿಸಿದ ಜನ ಲೋಕಪಾಲ್ ಮಸೂದೆಯನ್ನು ಸಂಸತ್ತು ಒಪ್ಪಿಕೊಳ್ಳಲೇ ಬೇಕು ಎಂದು ಹಿಡಿದಿದ್ದರು. ಆ ಮೂಲಕ ಮಸೂದೆಗಳನ್ನು ರೂಪಿಸಲು ಸಂಸತ್ತಿಗೆ ಇರುವ ಅಧಿಕಾರವನ್ನೇ ಕಸಿಯುವ ಪ್ರಯತ್ನ ಮಾಡಿದರು. ಮತ್ತೊಂದು ಗಮನಿಸಬೇಕಾದ ವಿಷಯವೆಂದರೆ, ಹಗರಣದ ಬಹಪಾಲನ್ನು ನುಂಗಿದ ಕಾರ್ಪೋರೇಟ್ ಕಂಪನಿಗಳ ಭ್ರಷ್ಟಾಚಾರದ ತನಿಖೆಯ ಕುರಿತು ಆ ಜನ ಲೋಕಪಾಲ್ ಮಸೂದೆಯಲ್ಲಿ ಪ್ರಸ್ತಾಪವೇ ಇಲ್ಲದಿದ್ದುದು. ಇದನ್ನು ಸಿಪಿಐ(ಎಂ) (ಭಾರತ ಕಮ್ಯೂನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಬಲವಾಗಿ ವಿರೋಧಿಸಿತ್ತು. ಕಾರ್ಪೋರೇಟ್ ಕಂಪನಿಗಳನ್ನೂ ತನಿಖೆಗೆ ಒಳಪಡಿಸುವ ಅಂಶಗಳೂ ಲೋಕಪಾಲ ಮಸೂದೆಯಲ್ಲಿ ಇರಬೇಕೆಂದು ಅದು ಪ್ರತಿಪಾದಿಸಿತ್ತು ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬೇಕು.

ಏನಿದು 2ಜಿ ಸ್ಪೆಕ್ಟ್ರಮ್ ಹಗರಣ?

ಯಾವುದೇ ಒಂದು ಹಗರಣ ನಡೆದರೆ, ಅಲ್ಲಿ ಕೇವಲ ರಾಜಕಾರಣಿಗಳು ಮತ್ತು ಅಧಿಕಾರಿಗಳ ಪಾತ್ರ ಮಾತ್ರ ಇರುವುದಿಲ್ಲ. ಅದರ ಹಿಂದೆ, ಅದರಿಂದ ಹೆಚ್ಚು ಲಾಭಗಳಿಸುವ ಉದ್ಯಮಪತಿಗಳಿರುತ್ತಾರೆ. ಕಾರ್ಪೋರೇಟ್ ಸಂಸ್ಥೆಗಳ, ವಿದೇಶಿ ಬಹುರಾಷ್ಟ್ರೀಯ ಕಂಪನಿಗಳ ಮತ್ತು ದೇಶದ ದೊಡ್ಡ ದೊಡ್ಡ ಕುಳಗಳ ಪಾತ್ರ ಆ ಹಗರಣಗಳಲ್ಲಿ ಇದ್ದೇ ಇರುತ್ತದೆ. 2ಜಿ ಪ್ರಕರಣದಲ್ಲಿಯೂ ಹಗರಣದ ಹೆಚ್ಚಿನ ಪಾಲು ಟೆಲಿಕಾಂ ಉದ್ಯಮಿಗಳ ಪಾಲಾಗಿದೆ.

2008 ರಲ್ಲಿ ಖಾಸಗಿ ಟೆಲಿಕಾಂ ಕಂಪನಿಗಳಿಗೆ ಅಗ್ಗದ ಬೆಲೆಯಲ್ಲಿ 2G ಪರವಾನಗಿಗಳನ್ನು ನೀಡಲಾಗಿತ್ತು. ಇದರ ಬಗ್ಗೆ ತನಿಖೆ ನಡೆಸಿದ ಸಿಎಜಿ, ಸ್ಪೆಕ್ಟ್ರಂ ಹಗರಣದಿಂದ ಸರ್ಕಾರಕ್ಕೆ – 1.76 ಲಕ್ಷ ಕೋಟಿ ನಷ್ಟವಾಗಿದೆ ಎಂದು ವರದಿ ಮಾಡಿತು. ಪರವಾನಗಿಗಳನ್ನು ನೀಡುವಾಗ ನಿಯಮಗಳು ಮತ್ತು ಕಾರ್ಯವಿಧಾನಗಳನ್ನು ಉಲ್ಲಂಘಿಸಲಾಗಿದೆ, 2008 ರಲ್ಲಿ ಸ್ಪೆಕ್ಟ್ರಮ್ ಪರವಾನಗಿಗಳಿಗೆ ಪ್ರವೇಶ ಶುಲ್ಕವನ್ನು 2001 ರ ಬೆಲೆಗಳಲ್ಲಿ ನಿಗದಿಪಡಿಸಲಾಗಿದೆ, ಸರಿಯಾದ ಹರಾಜು ಪ್ರಕ್ರಿಯೆಯನ್ನು ಅನುಸರಿಸಲಾಗಿಲ್ಲ, ಯಾವುದೇ ಬಿಡ್‌ಗಳನ್ನು ಆಹ್ವಾನಿಸಲಾಗಿಲ್ಲ, ಇದರಿಂದ ಸರ್ಕಾರಕ್ಕೆ 1.76 ಲಕ್ಷ ಕೋಟಿ ನಷ್ಟವಾಗಿದೆ ಎಂದು ಅದು ಹೇಳಿತು. ಕೇಂದ್ರದ ಸಚಿವರಾಗಿದ್ದ ಎ. ರಾಜಾ, 3,000 ಕೋಟಿ ರೂಪಾಯಿ ಲಂಚ ಪಡೆದು ಖಾಸಗೀ ಟೆಲಿಕಾಂ ಕಂಪನಿಗಳಿಗೆ ಅಸಂವಿಧಾನಿಕವಾಗಿ ಲೈಸೆನ್ಸ್ ನೀಡಿದ್ದಾರೆಂಬ ಆರೋಪಿಸಲಾಯ್ತು.


LOSS TO THE NATION

₹1760000000000

A Raja deprived govt of this much money in 2G spectrum allocation: CAG report

ಯುನಿಟೆಕ್, ಸ್ವಾನ್ ಟೆಲಿಕಾಂ ಯಾವುದೇ ಪೂರ್ವ ಟೆಲಿಕಾಂ ಅನುಭವವಿಲ್ಲದೆ ಪರವಾನಗಿಗಳನ್ನು ಪಡೆದಿದ್ದವು. ಸ್ವಾನ್ ಟೆಲಿಕಾಂ ಅರ್ಹತಾ ಮಾನದಂಡಗಳನ್ನು ಪೂರೈಸದಿದ್ದರೂ ಪರವಾನಗಿ ನೀಡಲಾಗಿತ್ತು. ಸ್ವಾನ್ ರೂ. 1537 ಕೋಟಿಗೆ ಪರವಾನಗಿ ಪಡೆದು, ಇದರ ಶೇ. 45ರಷ್ಟು ಪಾಲನ್ನು ಎಟಿಸಲಾಟ್‌ಗೆ ರೂ. 4200 ಕೋಟಿಗೆ ಮಾರಾಟ ಮಾಡಿತು. ಯುನಿಟೆಕ್ ವೈರ್‌ಲೆಸ್ ರೂ. 1661 ಕೋಟಿಗೆ ಪರವಾನಗಿ ಪಡೆದು, ರೂ. 6200 ಕೋಟಿಗೆ 60% ಪಾಲನ್ನು ಮಾರಾಟ ಮಾಡಿತು. ಎಲ್ಲಾ ಒಂಬತ್ತು ಕಂಪನಿಗಳು 2ಜಿ ಪರವಾನಗಿಗಾಗಿ ಡಾಟ್‌ಗೆ ಕೇವಲ – 10,772 ಕೋಟಿ ಪಾವತಿಸಿವೆ.

ಅಂದಿನ ಕೇಂದ್ರ ಸರ್ಕಾರಕ್ಕೆ ಖಿಖಿಂಖ ಮತ್ತು ಕಾನೂನು ಸಚಿವಾಲಯ, ಹಣಕಾಸು ಸಚಿವಾಲಯ ಮಾರುಕಟ್ಟೆ ದರದಲ್ಲಿ ತರಂಗಾಂತರವನ್ನು ಹರಾಜಿಗೆ ಶಿಫಾರಸು ಮಾಡಿತ್ತು. ಆದರೆ ದೂರಸಂಪರ್ಕ ಸಚಿವರಾಗಿದ್ದ ಡಿಎಂಕೆ ಪಕ್ಷದ ಎ. ರಾಜಾ ಇದನ್ನು ನಿರಾಕರಿಸಿ ಅಗ್ಗದ ಟೆಲಿಕಾಂ ಪರವಾನಗಿಗಳನ್ನು ನೀಡಿದರು ಎಂದು ಆರೋಪಿಸಲಾಗಿತ್ತು. ಈ ಸಂಬಂದ ರಾಜಾ ಬಂದನಕ್ಕೂ ಒಳಗಾಗಿದ್ದರು.

ಲಾಭ ಅನಿಲ್ ಅಂಬಾನಿಗೆ ಆರೋಪ ಅವರ ಅಧಿಕಾರಿಗಳ ಮೇಲೆ

ಡಿಎಂಕೆ ಮುಖ್ಯಸ್ಥ ಎಂ ಕರುಣಾನಿಧಿ ಅವರ ಪುತ್ರಿ ಹಾಗೂ ಸಂಸದೆ ಕನಿಮೊಳಿ ಅವರನ್ನು ಸಿಬಿಐ ಎ. ರಾಜಾ ಜತೆ ಸಂಚುಕೋರ ಎಂದು ಹೆಸರಿಸಿತ್ತು. ಸ್ವಾನ್ ಟೆಲಿಕಾಂನ ಪ್ರವರ್ತಕ ಶಾಹಿದ್ ಬಲ್ವಾ, ಯುನಿಟೆಕ್ ಮುಖ್ಯಸ್ಥ ಸಂಜಯ್ ಚಂದ್ರ ಮತ್ತು ಡಿಬಿ ರಿಯಾಲ್ಟಿ ಸಂಸ್ಥಾಪಕ ವಿನೋದ್ ಗೋಯೆಂಕಾ, ಅನಿಲ್ ಅಂಬಾನಿಯವರ ರಿಲಯನ್ಸ್ ಅನಿಲ್ ಧೀರೂಭಾಯಿ ಅಂಬಾನಿ ಗ್ರೂಪ್ ನ ವ್ಯವಸ್ಥಾಪಕ ನಿರ್ದೇಶಕ ಗೌತಮ್ ದೋಷಿ ಸೇರಿದಂತೆ ಆ ಸಂಸ್ಥೆಯ ಹಿರಿಯ ಅಧಿಕಾರಿಗಳಾದ ಹರಿ ನಾಯರ್ ಮತ್ತು ಸುರೇಂದ್ರ ಪಿಪಾರಾ ಇವರ ಮೇಲೂ ವಂಚನೆ ಮತ್ತು ಪಿತೂರಿ ಆರೋಪಪಟ್ಟಿ ಸಲ್ಲಿಸಲಾಗಿತ್ತು. ತಮ್ಮ ಒಡೆಯ ಅನಿಲ್ ಅಂಬಾನಿಯವರಿಗೆ ಲಾಭ ಮಾಡಿಕೊಟ್ಟ ತಪ್ಪಿಗಾಗಿ ಅವರ ಮೂವರು ಹಿರಿಯ ಅಧಿಕಾರಿಗಳನ್ನು ತಿಹಾರ್ ಜೈಲಿನಲ್ಲಿಡಲಾಗಿತ್ತು.

ರಿಲಯನ್ಸ್ ಟೆಲಿಕಾಂ ಮೇಲೆ ಸಾರ್ವಜನಿಕ ಸೇವಕರಿಂದ ಕ್ರಿಮಿನಲ್ ನಂಬಿಕೆಯ ಉಲ್ಲಂಘನೆಯನ್ನು ಉಂಟುಮಾಡುವ ಕ್ರಿಮಿನಲ್ ಪಿತೂರಿ (ವಿಭಾಗ 120–B) ಮತ್ತು ವಂಚನೆ (ವಿಭಾಗ 420) ಆರೋಪ ಹೊರಿಸಲಾಗಿತ್ತು. ಆದರೆ, ಅನಿಲ್ ಅಂಬಾನಿ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಧೈರ್ಯ ತನಿಖಾ ಸಂಸ್ಥೆಗಳಿಗೆ ಇರಲಿಲ್ಲ. ಈ ಹಗರಣಕ್ಕೆ ಸಂಬಂದಿಸಿದಂತೆ ಸಿಬಿಐ ನ ವಿಶೇಷ ನ್ಯಾಯಾಲದಲ್ಲಿ, ಅನಿಲ್ ಅಂಬಾನಿ ಮತ್ತು ಟೀನಾ ಅಂಬಾನಿ ಹಾಜರಾಗಿದ್ದರು.

ಸ್ವಾನ್ ಸಂಸ್ಥೆಯ ನೈಜ ಮಾಲೀಕತ್ವವನ್ನು ಮರೆಮಾಚಿದರು

2011ರ ಸೆಪ್ಟೆಂಬರ್‌ನಲ್ಲಿ, ಪ್ರಶಾಂತ್ ಭೂಷಣ್ ಅವರು, ಸಿಬಿಐ ಅನಿಲ್ ಅಂಬಾನಿ ವಿರುದ್ಧ ಚಾರ್ಜ್‌ಶೀಟ್ ಮಾಡುತ್ತಿಲ್ಲ ಎಂದು ನ್ಯಾಯಮೂರ್ತಿ ಸಿಂಘ್ವಿ ಮತ್ತು ನ್ಯಾಯಮೂರ್ತಿ ಎ.ಕೆ. ಗಂಗೂಲಿ ಅವರಿದ್ದ ಪೀಠದಲ್ಲಿ ನ್ಯಾಯಾಲಯಕ್ಕೆ ಲಿಖಿತವಾಗಿ ನೀಡಿದ್ದರು. ಅನಿಲ್ ಅಂಬಾನಿ ಅವರು ರಿಲಯನ್ಸ್ ಟೆಲಿಕಾಂನ ಬಹುಪಾಲು ಷೇರುದಾರರು ಮತ್ತು ಅಧ್ಯಕ್ಷರಾಗಿದ್ದಾರೆ, ಆದ್ದರಿಂದ ತನಿಖೆ ನಡೆಸಬೇಕು ಎಂದು ಭೂಷಣ್ ವಾದಿಸಿದ್ದರು.

ಸ್ವಾನ್ ಸಂಸ್ಥೆಯ ನೈಜ ಮಾಲೀಕತ್ವವನ್ನು ಮರೆಮಾಚಲು ಮೂವರು ಉದ್ಯೋಗಿಗಳು ಕಂಪನಿಗಳ ಜಟಿಲ ರಚನೆಯನ್ನು ಸೃಷ್ಟಿಸಿ, ಅಧ್ಯಕ್ಷರು ಮತ್ತು ಮಂಡಳಿಯ ಅನುಮೋದನೆಯಿಲ್ಲದೆ, ಕಂಪನಿಯ ಹಣದಲ್ಲಿ 1,000 ಕೋಟಿ ರೂ.ಗಳನ್ನು ತೆಗೆದುಕೊಂಡಿದ್ದಾರೆ ಎಂದು ಭೂಷಣ್ ನ್ಯಾಯಾಲಯದಲ್ಲಿ ವಾದಿಸಿದರು. ರಿಲಯನ್ಸ್ ಎಡಿಎಜಿ ಬಳಸಿದ ಬ್ಯಾಂಕ್, 10 ಕೋಟಿಗಿಂತ ಹೆಚ್ಚಿನ ಮೊತ್ತದ ಯಾವುದೇ ಚೆಕ್‌ಗೆ ಅನಿಲ್ ಅಂಬಾನಿ ಅಥವಾ ಅವರ ಪತ್ನಿ ಟೀನಾ ಅವರ ಅನುಮೋದನೆ ಅಗತ್ಯವಿದೆ ಎಂದು ಸಿಬಿಐಗೆ ತಿಳಿಸಿದೆ. ಅನಿಲ್ ಅಂಬಾನಿ ಅವರು ಮೂವರು ಉದ್ಯೋಗಿಗಳನ್ನು ಹೊರಹಾಕುವ ಬದಲು ಜೈಲಿನಲ್ಲಿ ಅವರನ್ನು ಭೇಟಿ ಮಾಡಿ ಅವರಿಗೆ

ಪುಟ 14 ಕ್ಕೆ

MP's belonging to BJP led by LK Advani and NDA leader Sharad Yadav demanding a Joint Parliamentary Committee (JPC) probe in the mobile 2G spectrum Scam outside Parliament House in New Delhi on Monday December 13, 2010. (Photo by Sondeep Shankar/Getty Images)



'ರೋಜ್‌ಗಾರ್ ಮೇಲಾ'ಗಳೂ, ಎಲ್‌ಪಿಜಿ ದರ ಕಡಿತಗಳೂ... 2024 ಸಮೀಪಿಸುತ್ತಿರುವಂತೆ...

ಇದು ಅಮೃತ ಕಾಲ

ಆಗಸ್ಟ್ 28. ಮತ್ತೊಂದು 'ರೋಜ್‌ಗಾರ್ ಮೇಲಾ' ಅಂದರೆ ಉದ್ಯೋಗ ಮೇಳ–ಇದು ಅಕ್ಟೋಬರ್ 2022ರಿಂದ ಆರಂಭವಾದ 'ಮೇಲಾ'ದ 8ನೇ ಆವೃತ್ತಿ ಎಂದು ಮಾಧ್ಯಮಗಳಲ್ಲಿ ಪ್ರಕಟವಾಗಿದೆ. ವರ್ಷಕ್ಕೆ 2 ಕೋಟಿ ಉದ್ಯೋಗಾವಕಾಶಗಳ ಆಶ್ವಾಸನೆ ಮತ್ತೊಂದು 'ಜುಮ್ಲಾ' ಆಗಿ ದೇಶ ಹಿಂದೆಂದೂ ಕಾಣದ ನಿರುದ್ಯೋಗ ದರವನ್ನು ದಾಖಲಿಸಿದಾಗ, ಕರ್ನಾಟಕವೂ ಸೇರಿದಂತೆ ಮಹತ್ವದ ವಿಧಾನಸಭಾ ಚುನಾವಣೆಗಳು ಮತ್ತು 2024ರ ಸಾರ್ವತ್ರಿಕ ಚುನಾವಣೆಗಳ ಹಿನ್ನೆಲೆಯಲ್ಲಿ ಈ 'ಮೇಳ' ಆರಂಭವಾಯಿತು. ಆಶ್ವಾಸನೆ ನೀಡಿದ 10 ಕೋಟಿಯಲ್ಲದಿದ್ದರೂ, ಕೇಂದ್ರ ಸರಕಾರದಲ್ಲಿಯೇ ವರ್ಷಗಳಿಂದ ಭರ್ತಿ ಮಾಡದೆ ಖಾಲಿ ಇರುವ 10 ಲಕ್ಷ ಹುದ್ದೆಗಳನ್ನಾದರೂ ಉಳಿದಿರುವ ಒಂದೂವರೆ ವರ್ಷಗಳಲ್ಲಿ ಎಪ್ರಿಲ್ 2024 ರ ವೇಳೆಗೆ ತುರ್ತಾಗಿ ಭರ್ತಿ ಮಾಡುವ ಯೋಜನೆ ಇದು.

ಅಕ್ಟೋಬರ್‌ನಲ್ಲಿ 75000 ನೇಮಕಾತಿ ಪತ್ರಗಳನ್ನು ಭಾರೀ ಪ್ರಚಾರದ ನಡುವೆ, ಸ್ವತಃ ಪ್ರಧಾನಿಗಳ ಭಾಷಣದೊಂದಿಗೆ ವಿತರಿಸಲಾಯಿತು. ನಂತರ ನವಂಬರ್ 22, ಜನವರಿ 19, ಎಪ್ರಿಲ್ 13, ಮೇ 16 ರಂದು ತಲಾ 71000, ಜೂನ್ 13 ಮತ್ತು ಜುಲೈ 22ರಂದು ತಲಾ 70000 ನೇಮಕಾತಿ ಪತ್ರಗಳನ್ನು ಪ್ರತಿ ಬಾರಿ ಅಂತಹುದೇ ಅಬ್ಬರದ ಪ್ರಚಾರಗಳ ನಡುವೆ ವಿತರಿಸಲಾಗಿದೆ. ಆಗಸ್ಟ್‌ನಲ್ಲಿ ಅದು 51000ಕ್ಕೆ ಇಳಿದಿದೆ. ಅಂದರೆ ಇದುವರೆಗೆ 5.5 ಲಕ್ಷ ನೇಮಕಾತಿ ಪತ್ರಗಳನ್ನು ಹಂಚಲಾಗಿದೆ. ಬಹುಶ: ಇನ್ನು ಮುಂದೆ ಸಾರ್ವತ್ರಿಕ ಚುನಾವಣಾ ಘೋಷಣೆಯಾಗುವ ವರೆಗೆ ಇದು ಪ್ರತಿ ತಿಂಗಳು ನಡೆಯಲಿದೆ.

ಆಗಸ್ಟ್ 28ರಂದು ಈಗ ತಪ್ಪು ಕಾರಣಗಳಿಗಾಗಿ ಬಹಳಷ್ಟು ಸುದ್ದಿಯಲ್ಲಿರುವ ದಿಲ್ಲಿ ಪೊಲೀಸ್ ಸೇರಿದಂತೆ ಕೇಂದ್ರ ಸರಕಾರದ ಅಡಿಯಲ್ಲಿರುವ ಅರೆಸೇನಾ ಪಡೆಗಳಲ್ಲಿ 51000 ಹುದ್ದೆಗಳಿಗೆ ನೇಮಕಾತಿ ಪತ್ರಗಳನ್ನು ದೇಶದಾದ್ಯಂತ 45 ಕೇಂದ್ರಗಳಲ್ಲಿ ಹಂಚಲಾಯಿತು. ಈ ಕಾರ್ಯಕ್ರಮಕ್ಕೆ ವಿಧಿಸಿರುವ ವಿಧಾನದಂತೆ ಈ ಎಲ್ಲ ಕೇಂದ್ರಗಳಲ್ಲಿ ಬೃಹತ್ ಪರದೆಗಳ ಮೇಲೆ ಆಹ್ವಾನಿತ ಫಲಾನುಭವಿಗಳನ್ನು ಉದ್ದೇಶಿಸಿ ಮಾತನಾಡುತ್ತ ಪ್ರಧಾನಿಗಳು ಯೋಗದ ಆವಶ್ಯಕತೆಯನ್ನು ಒತ್ತಿ ಹೇಳಿದರಂತೆ. ಜತೆಗೆ ಭಾರತದ ಅರ್ಥವ್ಯವಸ್ಥೆ ಮೂರನೇ ಸ್ಥಾನದಲ್ಲಿರುತ್ತದೆ ಎಂಬ ತಮ್ಮ ಇತ್ತೀಚಿನ 'ಭವಿಷ್ಯವಾಣಿ'ಯನ್ನು ಪುನರುಚ್ಚರಿಸಿದರು. ಇದನ್ನು ತಾನು ಪೂರ್ಣ ಜವಾಬ್ದಾರಿಯಿಂದ ಹೇಳುತ್ತಿದ್ದೇನೆ ಎಂದೂ ಹೇಳಿದರು. ಆದರೆ ಇದಕ್ಕೆ ಅಂತಹ ಜವಾಬ್ದಾರಿಕೆಯ ಅಗತ್ಯವೇನೂ ಇಲ್ಲ, ನೋಟುರದ್ಧತಿ, ಜಿಎಸ್‌ಟಿಯಂತಹ ಪ್ರಮಾದಗಳನ್ನು ಮಾಡಿರದಿದ್ದರೆ, ಈಗಾಗಲೇ ತಂತಾನೇ ಭಾರತ ಆ ಸ್ಥಾನವನ್ನು ಪಡೆಯುತ್ತಿತ್ತು ಎಂದು ಈಗಾಗಲೇ ಹಲವು ಅರ್ಥಶಾಸ್ತ್ರಜ್ಞರು ಹೇಳಿರುವದನ್ನು ಇಲ್ಲಿ ನೆನಪಿಸಿಕೊಳ್ಳಬಹುದು. ನಿಜ, ಉದ್ಯೋಗಾವಕಾಶಗಳ ನಿರ್ಮಾಣದ ಆಶ್ವಾಸನೆಯನ್ನು ಮಾತ್ರ ಪೂರ್ಣ ಜವಾಬ್ದಾರಿಯಿಂದ ಕೊಡಬೇಕು ಎಂದು ದೇಶದ ಯುವಜನರು ನಿರೀಕ್ಷಿಸುತ್ತಾರೆ. ಅದರ ಅರಿವೇ ಈ 'ಮೇಳ' ಎಂದು ರಾಜಕೀಯ ವೀಕ್ಷಕರು ಹೇಳುತ್ತಾರೆ.

ಪ್ರಚಾರದ ಅಬ್ಬರ.....

ಈ 'ಮೇಳ'ಗಳ ಪ್ರಚಾರಕ್ಕೆ ಒಬ್ಬ ರಾಜ್ಯ ದರ್ಜೆಯ ಮಂತ್ರಿಯ ನೆರವಿನೊಂದಿಗೆ ಪ್ರಧಾನ ಮಂತ್ರಿಗಳೇ ಉಸ್ತುವಾರಿ ವಹಿಸಿರುವ ಸಿಬ್ಬಂದಿ ಮತ್ತು ತರಬೇತಿ ಇಲಾಖೆ ವಿವರವಾದ 'ಪ್ರೊಟೊಕಾಲ್' (ವಿಧಿ–ವಿಧಾನ) ವನ್ನು ತಯಾರಿಸಿದೆ ಎಂಬುದು ದಿ ಟೆಲಿಗ್ರಾಫ್, ಆಗಸ್ಟ್ 23), ಇದೀಗ ಸರಕಾರಕ್ಕೆ ಎಷ್ಟು ಮುಖ್ಯವಾಗಿದೆ ಎಂಬುದನ್ನು ತೋರಿಸುತ್ತದೆ.

ಬೆಳಿಗ್ಗೆ 10.30ಕ್ಕೆ ಪ್ರಧಾನ ಮಂತ್ರಿಗಳು ವಿಡಿಯೋ ಕಾನ್ಫರೆನ್ಸ್ ಮೂಲಕ ಮೇಳವನ್ನುದ್ದೇಶಿಸಿ ಮಾತನಾಡುತ್ತಾರೆ. ಎಲ್ಲ 44–45 ಕೇಂದ್ರಗಳಲ್ಲಿ ನೇಮಕಾತಿ ಪಡೆದ ಅಭ್ಯರ್ಥಿಗಳು ಸೇರಿದಂತೆ ಎಲ್ಲ ಆಹ್ವಾನಿತರು 90 ನಿಮಿಷದ ಮೊದಲು ಹಾಜರಿರಬೇಕು.

ಪ್ರಧಾನ ಮಂತ್ರಿಗಳ ಭಾಷಣದ ನೇರ ಪ್ರಸಾರವನ್ನು ಸ್ಥಳೀಯ ಕೇಂದ್ರದಲ್ಲಿ ಸಿಗುವ ಸ್ಥಳಾವಕಾಶಕ್ಕೆ ಅನುಗುಣವಾದ ಬೃಹತ್ ಪರದೆಗಳ ಮೇಲೆ ನಡೆಯಬೇಕು.

ಈ ಇವೆಂಟಿನ ನಂತರದ ಪ್ರಚಾರಕ್ಕೆ ಸ್ಥಳೀಯ ಆಕಾಶವಾಣಿ, ದೂರದರ್ಶನ ಮತ್ತು ಪಿಐಬಿ ಕೇಂದ್ರ ಗಳೊಂದಿಗೆ ಸಂಯೋಜನೆ ರೂಪಿಸಬೇಕು.

ಮೇಳದ ಸ್ಥಳಗಳಲ್ಲಿ ಕಾರ್ಯಕ್ರಮ 9–45ಕ್ಕೆ ಆರಂಭವಾಗಬಹುದು. ನೇಮಕಾತಿ ಪತ್ರಗಳನ್ನು ವಿತರಿಸಲೆಂದು ಆಹ್ವಾನಿಸಿದ ಪ್ರತಿಷ್ಠಿತರನ್ನು ಸ್ವಾಗತಿಸುವುದರೊಂದಿಗೆ, ಪ್ರಧಾನ ಮಂತ್ರಿಗಳು ವೀಡಿಯೋ ಮೂಲಕ ಸೇರಿಕೊಳ್ಳುವ ವರೆಗೆ ಪರದೆಗಳ ಮೇಲೆ ಪ್ರಧಾನ ಮಂತ್ರಿಗಳ ಹೆಸರಿರುವ ವಿವಿಧ 'ಯೋಜನಾ'ಗಳ ಫಿಲ್ಲರುಗಳನ್ನು ಹಾಕುತ್ತಿರಬೇಕು.

ಕನಿಷ್ಟ 25 ಅಭ್ಯರ್ಥಿಗಳಿಗೆ ವೈಯಕ್ತಿಕವಾಗಿ ನೇಮಕಾತಿ ಪತ್ರಗಳನ್ನು ಕೊಡಬೇಕು. ಪತ್ರಗಳನ್ನು ನೀಡುವ ಪ್ರತಿಷ್ಠಿತರೊಂದಿಗೆ ಅಭ್ಯರ್ಥಿಗಳ ಫೋಟೋ ತೆಗೆಯಲು ಮತ್ತು ನೇಮಕಾತಿ ಪತ್ರ ಪಡೆದವರಿಂದ 'ಸೌಂಡ್ ಬೈಟ್'ಗಳನ್ನು ತೆಗೆದುಕೊಳ್ಳುವ ವ್ಯವಸ್ಥೆ ಮಾಡಬೇಕು. ಅಭ್ಯರ್ಥಿಗಳ ಹೆಸರು, ಹುದ್ದೆ ಮತ್ತು ಅವರ ನಿರೀಕ್ಷಿತ ಪಾತ್ರದ ಬಗ್ಗೆ 'ಸಂದೇಶ'ವನ್ನು ಪಡೆಯಬೇಕು. ಇವನ್ನೆಲ್ಲ ಹೈ ರೆಸೆಲ್ಯೂಷನ್‌ನಲ್ಲಿ ಪಡೆಯಬೇಕು. 'ಸೆಲ್ಫಿ ಪಾಯಿಂಟು'ಗಳನ್ನು ರಚಿಸಿ ಅಭ್ಯರ್ಥಿಗಳು ಸೆಲ್ಫಿಗಳನ್ನು ಅವರ ಹೆಸರು ಮತ್ತು ಹುದ್ದೆಗಳೊಂದಿಗೆ ದಾಖಲಿಸಬೇಕು ನೇಮಕಾತಿ ಪತ್ರಗಳನ್ನು ವಿತರಿಸಿದ ನಂತರ ಎಲ್ಲರ ಗುಂಪು ಫೋಟೋ ತೆಗೆಯಬೇಕು.

ಈ ಎಲ್ಲವನ್ನೂ ಕ್ರೋಡೀಕರಿಸಿ ಸಿಬ್ಬಂದಿ ಮತ್ತು ತರಬೇತಿ ಇಲಾಖೆಗೆ ಒಂದು ಹಾರ್ಡ್‌ಡ್ರೈವಿನಲ್ಲಿ ಮತ್ತು ಗೂಗಲ್ ಡ್ರೂವ್ ಮೂಲಕ ತಲುಪಿಸಬೇಕು ಎಂದು ಈ ಪ್ರೊಟೊಕಾಲ್ ವಿಧಿಸಿದೆ ಎಂದು ಪತ್ರಿಕೆ ಹೇಳಿದೆ.

....ಮತ್ತು ಒಂದು 'ಅಸತ್ಯ'?

ಈ ವರದಿಯಿಂದ ಬಯಲಾಗಿರುವ ಇನ್ನೊಂದು ಸಂಗತಿಯೆಂದರೆ, ಈ ಮೇಳಗಳ ನಂತರ ನೀಡುವ ಪತ್ರಿಕಾ ಹೇಳಿಕೆಗಳಲ್ಲಿ ಇವು ಹೊಸ ನೇಮಕಾತಿಗಳು ಎಂದು ಹೇಳುತ್ತಿದ್ದರೂ, ಇಲ್ಲಿ **ನಡೆಯುವ ಎಲ್ಲವೂ ಹೊಸ ನೇಮಕಾತಿಗಳಲ್ಲ, ಅವುಗಳಲ್ಲಿ ಬಡ್ತಿಗಳ ಪತ್ರಗಳೂ ಸೇರಿವೆ ಎಂದು ತಿಳಿದು ಬಂದಿದೆಯಂತೆ! ಈ ಬಡ್ತಿ ಪತ್ರ ಪಡೆದವರು ಆಗಲೇ ಕೆಲಸದಲ್ಲಿ ಇರುವುದರಿಂದ ಅವರನ್ನು ಹೊಸ ನೇಮಕಾತಿಗಳ ಸಂಖ್ಯೆಯಲ್ಲಿ ಸೇರಿಸುವುದು ಆ ಸಂಖ್ಯೆಯನ್ನು ಹಿಗ್ಗಿಸುವ ಪ್ರಯತ್ನ ಎಂದು ಬೇರೆ ಹೇಳಬೇಕಾಗಿಲ್ಲ.**

'ದಿ ಟೆಲಿಗ್ರಾಫ್' ಪತ್ರಿಕೆ ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ಮಾಹಿತಿಯ ಪ್ರಕಾರ ಇಲ್ಲಿ ಮೇಲಿನ ಹುದ್ದೆಗಳಿಗೆ ಬಡ್ತಿಯ ಮೂಲಕ ನೇಮಕಗಳನ್ನೂ ಹೊಸ ನೇಮಕಾತಿಗಳ ಲೆಕ್ಕದಲ್ಲಿ ಇವೆ.

ಉದಾ: ಎಪ್ರಿಲ್13 ರ'ಮೇಳ'ದಲ್ಲಿ ಮೊಹಾಲಿಯ ಐಐಎಸ್‌ಇಆರ್ ಸಂಸ್ಥೆ ನೀಡಿದ ನೇಮಕಾತಿ ಪತ್ರಗಳಲ್ಲಿ 15 ಮಾತ್ರ ಹೊಸದು, ಉಳಿದ 21 ಬಡ್ತಿ ಪತ್ರಗಳು. ಮೌಲಾನಾ ಆಝಾದ್ ರಾಷ್ಟ್ರೀಯ ಉರ್ದು ವಿಶ್ವವಿದ್ಯಾಲಯ ನೀಡಿದ 38 ನೇಮಕಾತಿ ಪತ್ರಗಳಲ್ಲಿ 18 ಬಡ್ತಿಪತ್ರಗಳು.

ಪತ್ರಿಕೆ ಈ ಕುರಿತು ಕೇಂದ್ರೀಯ ಉನ್ನತ ಶಿಕ್ಷಣ ಕಾರ್ಯದರ್ಶಿಯಿಂದ ಬಡ್ತಿಗಳನ್ನು ಈ ಮೇಳಗಳಲ್ಲಿ ಸೇರಿಸುವುದರ ತರ್ಕದ ಬಗ್ಗೆ ಕೇಳಿದೆ. ಆದರೆ ಈ ವರದಿ ಪ್ರಕಟವಾಗುವ ವರೆಗೂ ಅವರಿಂದ ಉತ್ತರ ಬಂದಿಲ್ಲವಂತೆ.!

2024ರಲ್ಲಿ ಅಧಿಕಾರಕ್ಕೆ ಮತ್ತೆ ಮರಳುವ ವಿಶ್ವಾಸವನ್ನು, ಭಾರತದ ಅರ್ಥವ್ಯವಸ್ಥೆ 3ನೇ ಸ್ಥಾನಕ್ಕೆ ಏರುವ ವಿಶ್ವಾಸದೊಂದಿಗೆ ಇತ್ತೀಚಿನ ದಿನಗಳಲ್ಲಿ ಬಾರಿಬಾರಿಗೂ ಪುನರುಚ್ಚರಿಸುತ್ತಿರುವ ಪ್ರಧಾನಿಗಳಿಗೆ ಉದ್ಯೋಗ ನಿರ್ಮಾಣ ಒಂದು ನಿರ್ಣಾಯಕ ಪ್ರಶ್ನೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ. ಯುವಕರಲ್ಲಿ ಉದ್ಯೋಗಾವಕಾಶಹೀನತೆ ಮತ್ತು ಕಡಿಮೆ ಸಂಬಳ ಅಸಂತುಷ್ಟಿಯನ್ನು ಹರಡುತ್ತಿದೆ. ಸಿಎಂಐಇ ಬಿಡುಗಡೆ ಮಾಡಿರುವ ಮಾಹಿತಿಗಳ ಪ್ರಕಾರ ಜುಲೈ ತಿಂಗಳಲ್ಲಿ ನಿರುದ್ಯೋಗ ದರ ತುಸು ಇಳಿದರೂ, ಈಗಲೂ ಅದು 7.95% ಇದೆ.



ವ್ಯಂಗ್ಯಚಿತ್ರ: ಪಿ.ಮಹಮ್ಮದ್, ಫೇಸ್‌ಬುಕ್

ಅದೇ ರೀತಿಯಲ್ಲಿ ಹಣದುಬ್ಬರ, ಬೆಲೆಯೇರಿಕೆ ಜನಗಳನ್ನು ಕಂಗೆಡಿಸುತ್ತಿದೆ ಎಂಬ 'ಜ್ಞಾನೋದಯ'ವನ್ನೂ ಚುನಾವಣೆಗಳು ಮಾಡಿಸಿರುವಂತೆ ಕಾಣುತ್ತದೆ. ಅದಾಗಲೇ ಕಾಂಗ್ರೆಸ್ ಮಧ್ಯಪ್ರದೇಶದ ಚುನಾವಣೆಗಳಲ್ಲಿ ಎಲ್‌ಪಿಜಿ ಬೆಲೆಯನ್ನು 500ರೂ.ಗೆ ಇಳಿಸುವ ಆಶ್ವಾಸನೆ ನೀಡಿದೆಯಂತೆ. ಈ ಹಿನ್ನೆಲೆಯಲ್ಲಿ 'ರಕ್ಷಾ ಬಂಧನ್' ಮತ್ತು 'ಓಣಂ' ಸಂದರ್ಭದಲ್ಲಿ ಭಾರತದ ಮಹಿಳೆಯರಿಗೆ ಪ್ರಧಾನಿಗಳ ಉಡುಗೊರೆಯೆಂದು ಎಲ್‌ಪಿಜಿ ಬೆಲೆಗಳಲ್ಲಿ 200ರೂ. ಕಡಿತವನ್ನು ಪ್ರಕಟಿಸಲಾಗಿದೆ. ಇದರಿಂದ ತೈಲ ಮಾರಾಟ ಕಂಪನಿಗಳಿಗೆ 7500 ಕೋಟಿ ರೂ. ನಷ್ಟವಾಗುತ್ತದೆ, ಇದರ ವೆಚ್ಚವನ್ನು ಸರಕಾರವೇ ಭರಿಸುತ್ತದೆ ಎಂದು ಆಗಸ್ಟ್ 30ರಂದು ಪೆಟ್ರೋಲಿಯಂ ಮಂತ್ರಿಗಳು ಹೇಳಿದರೂ, ಸರಕಾರ ತಮಗೆ ಈ ಬಗ್ಗೆ ಸ್ಪಷ್ಟಪಡಿಸಿಲ್ಲ, ಈ ಹೊರೆಯನ್ನು ಸದ್ಯಕ್ಕಂತೂ ತಾವೇ ಹೊರಬೇಕಾದೀತು ಎಂದು ತೈಲ ಮಾರಾಟ ಕಂಪನಿಗಳು ಭಾವಿಸಿರುವುದಾಗಿ ಮರುದಿನದ ಇಂಡಿಯನ್ ಎಕ್ಸ್‌ಪ್ರೆಸ್‌ನಲ್ಲಿನ ಒಂದು ವರದಿ ಹೇಳುತ್ತಿದೆ.

ವಾಸ್ತವವಾಗಿ, ಕೇಂದ್ರ ಸರಕಾರ ಹಾಕುತ್ತಿರುವ ಸೆಸ್/ಸರ್ಚಾರ್ಜ್‌ಗಳನ್ನು ಹಿಂತೆಗೆದುಕೊಂಡರೆ, ಯಾವುದೇ ಸಬ್ಸಿಡಿಯಿಲ್ಲದೆ ಇದೇ ಬೆಲೆಯಲ್ಲಿ ಎಲ್‌ಪಿಜಿಯನ್ನು ಕೊಡಬಹುದು ಎಂದು ಹೇಳಲಾಗಿದೆ.

ಈ ನಡುವೆ ಈ 'ಉಡುಗೊರೆ'ಯಿಂದಾಗಿ 'ಭಾರತ್ ಪೆಟ್ರೋಲಿಯಂ'ನ ಶೇರುಗಳ ಬೆಲೆಯಲ್ಲಿ 1% ದಿಂದ 2.5%ದಷ್ಟು ಗಮನಾರ್ಹ ಕುಸಿತವಾಗಿದೆಯಂತೆ!

"ಆಟದ ಮೈದಾನದಲ್ಲಿ ಪಾಕಿಸ್ತಾನ ಅಥವಾ ಹರಿಯಾಣ ಎಂದಿರುವುದಿಲ್ಲ.."



ಜಾವೆಲಿನ್ ಎಸೆತದಲ್ಲಿ ವಿಶ್ವದಾಖಲೆಯನ್ನು ನಿರ್ಮಿಸಿದ ಮತ್ತು ವಿಶ್ವ ಅಥ್ಲೆಟಿಕ್ಸ್ ಚಾಂಪಿಯನ್‌ಶಿಪ್‌ನಲ್ಲಿ ಭಾರತಕ್ಕೆ ಮೊತ್ತ ಮೊದಲ ಬಾರಿಗೆ ಚಿನ್ನದ ಪದಕ ಗಳಿಸಿಕೊಟ್ಟ ನೀರಜ್ ಚೋಪ್ರಾ ಸಾಧನೆ ಭಾರತೀಯರೆಲ್ಲರಿಗೂ ಹೆಮ್ಮೆ ತಂದ ಸಂಗತಿ.

ಆದರೆ 'ಗೋದಿ ಮೀಡಿಯಾ'ದವರಿಗೆ ಅವರು ಪಾಕಿಸ್ತಾನದ ಸ್ಪರ್ಧಾಳುವನ್ನು ಸೋಲಿಸಿದ್ದೇ ಮುಖ್ಯವಾಗಿರುವಂತೆ ಕಾಣುತ್ತದೆ. ನೀರಜ್ ತಾಯಿ ಅಂತವರಿಗೆ ಮುಟ್ಟಿ ನೋಡಿಕೊಳ್ಳುವಂತಹ ಏಟು ನೀಡಿದ್ದಾರೆ ಎಂಬುದು ಬಹಳ ಮಂದಿಗೆ ಹರ್ಷವುಂಟು ಮಾಡಿದೆ.

"ಮೊದಲನೆಯದಾಗಿ, ಪಾಕಿಸ್ತಾನದ ಆಟಗಾರನನ್ನು ಸೋಲಿಸಿದ್ದಕ್ಕೆ ನಿಮಗೆ ಹೇಗನ್ನಿಸುತ್ತದೆ" ಎಂಬ ವರದಿಗಾರನ ಪ್ರಶ್ನೆಗೆ ಉತ್ತರಿಸುತ್ತ, ನೀರಜ್ ಚೋಪ್ರಾ ಅವರ ತಾಯಿ ಸರೋಜಾ ದೇವಿ– "ನೋಡು, ಮೈದಾನದಲ್ಲಿ ಎಲ್ಲರೂ ಆಟಗಾರರೇ, ಯಾರಾದರೂ ಗೆದ್ದರೆ ಪಾಕಿಸ್ತಾನ ಅಥವಾ ಹರಿಯಾಣದ ಸಂಗತಿಯಿರುವುದಿಲ್ಲ. ಮತ್ತು ಪಾಕಿಸ್ತಾನಿ ಗೆದ್ದಿರುವ ಬಗ್ಗೆಯೂ ನನಗೆ ತುಂಬಾ ಸಂತೋಷವಾಗಿದೆ. ಆತನಿಗೂ ಆಗಿದೆ" ಎಂದು ಉದ್ವೇಗವಿಲ್ಲದೆ ಹೇಳಿದರು. ಆಗಲೂ ಪಟ್ಟು ಬಿಡದ 'ಗೋದಿ' ವರದಿಗಾರ "ನಿನ್ನೆ ಅತ್ಯಂತ ಆಸಕ್ತಿದಾಯಕ ಪಂದ್ಯವಾಯಿತು ಏಕೆಂದರೆ ಅದು ಪಾಕಿಸ್ತಾನದೊಂದಿಗಿನ ಪಂದ್ಯವಾಗಿತ್ತು ಮತ್ತು ಪಾಕಿಸ್ತಾನವು ಎರಡನೇ ಸ್ಥಾನದಲ್ಲಿತ್ತು" ಎಂದ. ತಾಯಿ ಸರೋಜಾ ದೇವಿ – "ನೋಡಪ್ಪಾ, ಸ್ಪರ್ಧೆ ಸಮಾನವಾಗಿತ್ತು, ಯಾರಾದರೊಬ್ಬರು ಮೆಡಲ್ ತರಬೇಕಿತ್ತು, ನೀರಜ್ ತಂದ. ಹಾಗೆ ನೋಡಿದರೆ ಆ ಹುಡುಗನೂ ಚೆನ್ನಾಗಿಯೇ ಆಡಿದ್ದ" ಎಂದರಂತೆ. ಆ ವರದಿಗಾರನಿಗೆ ಕೆದಕಲು ಮತ್ತೇನೂ ಉಳಿದಿರಲಿಲ್ಲ.

ನೀರಜ್ ಚೋಪ್ರಾ 88.17 ಮೀ. ದೂರ ಎಸೆದಿದ್ದರೆ, ಎರಡನೇ ಸ್ಥಾನ ಪಡೆದ ಪಾಕಿಸ್ತಾನದ ಅರ್ಷದ್ ನದೀಂ 87.82 ಮೀ. ದೂರ ಎಸೆದಿದ್ದರು.

ಅದೇ ಚಾಂಪಿಯನ್‌ಶಿಪ್‌ನಲ್ಲಿ 4x400 ರಿಲೇ ಪಂದ್ಯದಲ್ಲಿ ಭಾರತದ ಪುರುಷರ ತಂಡ ಏಷ್ಯನ್ ದಾಖಲೆಯನ್ನು ಮುರಿದು ಭಾರತ ಈ ಚಾಂಪಿಯನ್‌ಶಿಪ್‌ನ ಫೈನಲಿಗೆ ಮೊದಲ ಬಾರಿಗೆ ಪ್ರವೇಶಿಸುವಂತಾಗಿದೆ. ಇವರ ಹೆಸರುಗಳನ್ನು ನೋಡಿ: ಮಹಮ್ಮದ್ ಅನಾಸ್ ಯಾಹ್ಯ, ಅಮೋಲ್ ಜೇಕಬ್, ಮುಹಮ್ಮದ್ ಅಜ್ಮಲ್ ವರಿಯಥೋಡಿ ಮತ್ತು ರಾಜೇಶ್ ರಮೇಶ್.

ಒಂದೆಡೆಯಲ್ಲಿ ಮುಸ್ಲಿಮ್ ಬಾಲಕನ ಕೆನ್ನೆಗೆ ಬಾರಿಸಲು ಸಹಪಾಠಿಗಳಿಗೆ ಆದೇಶ, ನಮಾಜಿಗೆಂದು ಎರಡು ನಿಮಿಷ ಬಸ್ ನಿಲ್ಲಿಸಿದ್ದಕ್ಕೆ ಹಿಂದು ಕಂಡಕ್ಟರನ ವಜಾ ಮತ್ತು ಆತ್ಮಹತ್ಯೆ, ಕೆಲವು ಸಮಯದ ಮೊದಲು ಕೇವಲ ಮುಸ್ಲಿಮರೆಂಬ ಕಾರಣಕ್ಕೆ ಮೂವರು ರೈಲು ಪ್ರಯಾಣಿಕರ ಕಗ್ಗೊಲೆ ಮತ್ತು ಇವೆಲ್ಲದರ ಬಗ್ಗೆ 'ವಿಶ್ವ ಗುರು'ಗಳ ಎಂದೂ ಮುರಿಯದಂತೆ ಕಾಣುವ ಮೌನ–ಇವೆಲ್ಲವುಗಳ ನಡುವೆ ಈ ವಾರ ಇವೆರಡು ದೇಶದ ಪ್ರಜಾಪ್ರಭುತ್ವವಾದಿಗಳು ತುಸು ಸಮಾಧಾನ ಪಡುವಂತೆ ಮಾಡಿರುವ ಸಂಗತಿಗಳು.





ಗಿಗ್ ಕೆಲಸಗಾರರು: ಅಲಂಕಾರಿಕ ನಾಮಧೇಯಗಳಲ್ಲ ಕಾನೂನಾತ್ಮಕ ಹಕ್ಕುಗಳು ಮತ್ತು ರಕ್ಷಣೆ ಬೇಕಾಗಿದೆ





ಇಂದಿನ ಹೊಸ ರೀತಿಯ ಉದ್ದಿಮೆಗಳಾದ ಸ್ವೀಗ್ಗಿ, ಜೋಮಾಟೊ, ಉಬರ್ ಇತ್ಯಾದಿಗಳಲ್ಲಿ ಕೆಲಸ ಮಾಡುವ ಜನರಿಗೆ ಪಾಲುದಾರರು, ಸಹಯೋಗಿಗಳು, ಏಜೆಂಟರು, ಕಪ್ತಾನರು ಮುಂತಾದ ಅಲಂಕಾರಿಕ ನಾಮಧೇಯಗಳನ್ನು ಕೊಟ್ಟು ಅವರನ್ನು ಕಾರ್ಮಿಕರಿಗೆ ದೊರೆಯುವ ಕಾನೂನಿನ ರಕ್ಷಣೆಯಿಂದ ವಂಚಿತಗೊಳಿಸಲಾಗುತ್ತಿದೆ. ಆದರೆ ಅವರ ಬದುಕು ಮತ್ತು ಬದುಕಿನ ಸಮಸ್ಯೆಗಳೂ ಸಾಮಾನ್ಯ ಕೆಲಸಗಾರರಂತೆಯೇ ಇವೆ. ಆದ್ದರಿಂದ ಅವರನ್ನೂ ಕೆಲಸಗಾರರು ಎಂದು ಗುರುತಿಸಬೇಕಾಗಿದೆ, ಈಗಾಗಲೇ ಸರ್ವೋಚ್ಚ ನ್ಯಾಯಾಲಯದ ಹಲವು ತೀರ್ಪುಗಳು ಇದಕ್ಕೆ ಅನುವು ಮಾಡಿಕೊಟ್ಟಿವೆ.

ಸುದೀಪ್ ಸುಧಾಕರನ್ ಮತ್ತು **ತನ್ವಿ ಮಾಲ್ವಾನಿ**
ಕನ್ನಡಕ್ಕೆ: **ಜಿ.ಎಸ್.ಮಣಿ**

ಕಾನೂನಿನ ಚೌಕಟ್ಟಿನಡಿಯಲ್ಲಿ, ಒಬ್ಬ ವ್ಯಕ್ತಿಯು ಕೆಲವು ಹಕ್ಕುಗಳಿಗೆ ಅರ್ಹನಾಗಿದ್ದಾನೆಯೇ ಅಥವಾ ಕೆಲವು ಕರ್ತವ್ಯಗಳನ್ನು ನಿರ್ವಹಿಸಲು ಹೊಣೆಗಾರನಾಗಿದ್ದಾನೆಯೇ ಎಂಬುದನ್ನು ಆ ವ್ಯಕ್ತಿಯು ಸಂಬಂಧಪಟ್ಟ ಕಾನೂನು ವ್ಯಾಖ್ಯಾನದ ಗಡಿಯೊಳಗೆ ಬರುತ್ತಾನೆಯೇ ಎಂಬುದರಿಂದ ನಿರ್ಧರಿಸಲಾಗುತ್ತದೆ. ಉದಾಹರಣೆಗೆ, ಯಾವುದೇ ಶಾಸನದಲ್ಲಿ ನಾಗರಿಕನಿಗೆ ಖಾತರಿಪಡಿಸಿದ ಹಕ್ಕನ್ನು ಕಲ್ಪಿಸಿಕೊಳ್ಳಿ. ಒಬ್ಬ ವ್ಯಕ್ತಿಯು ಅಂತಹ ಹಕ್ಕನ್ನು ಕೇಳಿಕೊಂಡು ಬಂದರೆ, ಅವನು ನಾಗರಿಕ ಎಂಬ ವ್ಯಾಖ್ಯಾನದೊಳಗೆ ಬರುತ್ತಾನೆಯೇ ಎಂಬುದು ಪ್ರಮುಖ ಪ್ರಶ್ನೆಯಾಗಿಗುತ್ತದೆ. ಆ ವ್ಯಕ್ತಿಯು ನಾಗರಿಕನ ವ್ಯಾಖ್ಯಾನದೊಳಗೆ ಬಂದರೆ ಮಾತ್ರ, ನಂತರದ ಪ್ರಶ್ನೆಗಳು ಪ್ರಸ್ತುತವಾಗುತ್ತವೆ.


ಭಾರತೀಯ ಕಾರ್ಮಿಕ ಕಾನೂನುಗಳ ಗಮನಾರ್ಹ ವೈಶಿಷ್ಟ್ಯವೆಂದರೆ ಇದರಲ್ಲಿ ಒಳಗೊಂಡವರ ಹಕ್ಕುಗಳು ಮತ್ತು ಹೊಣೆಗಾರಿಕೆಗಳನ್ನು ರಕ್ಷಿಸುವಲ್ಲಿ ಮತ್ತು ಜಾರಿಗೊಳಿಸುವಲ್ಲಿ ವ್ಯಾಖ್ಯಾನಗಳ ಪ್ರಮುಖ ಪಾತ್ರ. ಹೆಚ್ಚಿನ ಸಂದರ್ಭಗಳಲ್ಲಿ, ಹಕ್ಕುಗಳು ಮತ್ತು ಹೊಣೆಗಾರಿಕೆಗಳ ಅಂತಿಮ ನಿರ್ಣಯದಲ್ಲಿ ಕಾನೂನು ವ್ಯಾಖ್ಯಾನವು ಪ್ರಮುಖ ಪಾತ್ರವನ್ನು ವಹಿಸುತ್ತದೆ.

1947ರ ಕೈಗಾರಿಕಾ ವಿವಾದ (ಐಡಿ) ಕಾಯಿದೆಯಲ್ಲಿ ಇರುವಂತೆ ಕೆಲಸಗಾರ ಅಥವಾ ಉದ್ಯೋಗಿಯ ವ್ಯಾಖ್ಯಾನವು ಪ್ರಮುಖ ವ್ಯಾಖ್ಯಾನಗಳಲ್ಲಿ ಒಂದಾಗಿದೆ. ಕೈಗಾರಿಕಾ ವಿವಾದ (ID) ಕಾಯಿದೆಯ ಸೆಕ್ಷನ್ 2(ಎಸ್) ಅಡಿಯಲ್ಲಿ ಈ ವ್ಯಾಖ್ಯಾನವು "ಕೆಲಸಗಾರ" ಎಂದೇ ಆಗಿದೆ. ಹೊಸ ಕಾರ್ಮಿಕ ಸಂಹಿತೆಗಳು ಸೇರಿದಂತೆ ಕಾರ್ಮಿಕ ಶಾಸನಗಳಲ್ಲಿ "ಉದ್ಯೋಗಿ" ಮತ್ತು "ಕಾರ್ಮಿಕ" ದಂತಹ ಇತರ ವ್ಯಾಖ್ಯಾನಗಳು ಈ ವ್ಯಾಖ್ಯಾನಕ್ಕೆ ಹೋಲುತ್ತವೆ. ಇದು ಈ ಕ್ಷೇತ್ರದಲ್ಲಿನ ಅತ್ಯಂತ ಹಳೆಯ ವ್ಯಾಖ್ಯಾನಗಳಲ್ಲಿ ಒಂದಾಗಿದೆ ಮತ್ತು ಸುಪ್ರೀಂ ಕೋರ್ಟ್ ನ್ಯಾಯಶಾಸ್ತ್ರವು ಪರಿಗಣಿಸಿರುವ ವ್ಯಾಖ್ಯಾನವು ದಶಕಗಳಲ್ಲಿ ರೂಪುಗೊಂಡು ಬಂದಿರುವ ವ್ಯಾಖ್ಯಾನವಾಗಿ ಅಸ್ತಿತ್ವದಲ್ಲಿದೆ. ಆದ್ದರಿಂದ, ಭಾರತದ ಕಾನೂನು ಚರ್ಚೆಗಳಲ್ಲಿ ಈ ವ್ಯಾಖ್ಯಾನವು ಕೆಲಸಗಾರ ಅಥವಾ ಉದ್ಯೋಗಿಯ ಕಾನೂನು ಪರಿಕಲ್ಪನೆಯ ಸುತ್ತ ಈ ಹಕ್ಕು ಬಾಧ್ಯತೆಗಳನ್ನು ಸೆರೆಹಿಡಿಯುತ್ತದೆ.

'ಕೆಲಸಗಾರ'ನ ವ್ಯಾಖ್ಯಾನದ ವಿಕಾಸ

ಹೈಗಾರಿಕಾ ವಿವಾದಗಳ ಕಾನೂನಿನ ಅಡಿಯಲ್ಲಿ ವ್ಯಾಖ್ಯಾನಿಸಲಾದ ಉದ್ಯೋಗಿ–ಉದ್ಯೋಗದಾತ ಸಂಬಂಧಗಳನ್ನು ಅರ್ಥಮಾಡಿಕೊಳ್ಳಲು ಸುಪ್ರೀಂ ಕೋರ್ಟ್ ಕೆಲವು ಕ್ರಾಂತಿಕಾರಿ ಕಾನೂನು ವ್ಯಾಖ್ಯಾನಗಳನ್ನು ಮಾಡಿದೆ. ಸಾಂಪ್ರದಾಯಿಕವಾಗಿ, ಈ ಸಂಬಂಧವನ್ನು ನಿಯಂತ್ರಣ ಮತ್ತು ಮೇಲ್ವಿಚಾರಣೆ ಎಂಬ ಕಾನೂನು ಪರೀಕ್ಷೆಯಿಂದ ನಿರ್ಧರಿಸಲಾಗುತ್ತದೆ. ಇದರರ್ಥ ಉದ್ಯೋಗದಾತನು ಉದ್ಯೋಗಿಯನ್ನು ನೇರವಾಗಿ ನಿಯಂತ್ರಿಸುತ್ತಾನೆ ಮತ್ತು ಮೇಲ್ವಿಚಾರಣೆ ಮಾಡುತ್ತಾನೆಯೇ ಎಂಬ ಪ್ರಶ್ನೆಯಿಂದ (ಮಾಲಕ–ಸೇವಕ ಸಂಬಂಧದಂತೆಯೇ)–ಅಂತಹ ಸಂಬಂಧದ ಅಸ್ತಿತ್ವವನ್ನು ಗುರುತಿಸುವ ಪರೀಕ್ಷೆಯಾಗಿದೆ.

ಸುಪ್ರೀಂ ಕೋರ್ಟ್ ಸಾಂಪ್ರದಾಯಿಕ ದೃಷ್ಟಿಕೋನದಿಂದ ಭಿನ್ನವಾಗಿ ಮಧ್ಯಪ್ರವೇಶ ಮಾಡಿದ ಉದಾಹರಣೆ ಎಂದರೆ, 1975ರ ಹುಸೇನಬಾಯಿ ಅಲತ್ ವಿರುದ್ಧ ಫ್ಯಾಕ್ಟರಿ ತೊಝಿಲಾಲಿ ಯೂನಿಯನ್ ಪ್ರಕರಣ.. ಈ ತೀರ್ಪಿನಲ್ಲಿ, ನ್ಯಾಯಮೂರ್ತಿ ಕೃಷ್ಣ ಅಯ್ಯರ್ 'ಕೆಲಸಗಾರ'ನ ವ್ಯಾಖ್ಯಾನದಲ್ಲಿ ಕಾರ್ಮಿಕ ವರ್ಗದ ವಿವಿಧ ವಿಭಾಗಗಳನ್ನು ಒಳಗೊಳ್ಳಲು ಉದಾರ ದೃಷ್ಟಿಕೋನವನ್ನು ತೆಗೆದುಕೊಂಡರು. ಈ ಪ್ರಕರಣವು ಮಧ್ಯಂತರ ಗುತ್ತಿಗೆದಾರರ ಕೆಲಸ ಮಾಡುವ ಕಾರ್ಮಿಕರ ಉದ್ಯೋಗ ಸ್ಥಿತಿಗೆ ಸಂಬಂಧಿಸಿದೆ.



ಇದಲ್ಲದೆ, ಮಧ್ಯಂತರ ಗುತ್ತಿಗೆದಾರರೊಂದಿಗೆ ಕೆಲಸಗಾರನ ಸಂಬಂಧವು ತಕ್ಷಣದ್ದು ಮತ್ತು ನೇರವಾಗಿದ್ದರೂ, ನಿಜವಾದ ಉದ್ಯೋಗದಾತರನ್ನು ನಿರ್ಧರಿಸುವಲ್ಲಿ ನಿರ್ಣಾಯಕ ಬಲವನ್ನು ಹೊಂದಿರುವುದಿಲ್ಲ. ಒಪ್ಪಂದದ ವ್ಯವಸ್ಥೆಗಳಿಂದಾಗಿ ಕಾರ್ಮಿಕರು ಈ ಗುತ್ತಿಗೆದಾರರೊಂದಿಗೆ ದಿನನಿತ್ಯದ ಆಧಾರದ ಮೇಲೆ ಸಂವಹನ ನಡೆಸುತ್ತಿದ್ದರೂ ಸಹ, ಕಾರ್ಮಿಕರ ಉದ್ಯೋಗದ ಪರಿಸ್ಥಿತಿಗಳಿಗೆ ಅವರನ್ನು ಜವಾಬ್ದಾರಿಯುತ ಪಕ್ಷವಾಗಿ ಸ್ಥಾಪಿಸಲು ಈ ಅಂಶವು ಸಾಕಾಗುವುದಿಲ್ಲ.

ನಿಜವಾದ ಉದ್ಯೋಗದಾತರನ್ನು ಖಚಿತಪಡಿಸಿಕೊಳ್ಳಲು, ಔಪಚಾರಿಕ ಒಪ್ಪಂದದ ವ್ಯವಸ್ಥೆಗಳ ಮುಸುಕನ್ನು ತೆಗೆದುಹಾಕುವ ಮತ್ತು ಉದ್ಯೋಗ ರಚನೆಯ ವಿಶಾಲ ಚಿತ್ರಣವನ್ನು ವಿಶ್ಲೇಷಿಸುವ ಅಗತ್ಯವಿದೆ ಎಂದು ನ್ಯಾಯಾಲಯವು ಸೂಚಿಸಿತು. ಮೇಲ್ನೋಟಕ್ಕೆ ಕಾಣುವುದನ್ನು ಮೀರಿ ಕಾರ್ಮಿಕರ ಉದ್ಯೋಗವನ್ನು ನಿಯಂತ್ರಿಸುವ ನಿಜವಾದ ಚಲನೆಯ ಸ್ವರೂಪವನ್ನು ಪರಿಶೀಲಿಸುವುದು ಅತ್ಯಗತ್ಯ. ಮಧ್ಯಂತರ ಗುತ್ತಿಗೆದಾರನ ಆಚೆಯ ಅಂತಿಮ ವ್ಯವಹಾರ ಘಟಕವು ಕಾರ್ಮಿಕರ ಜೀವನಾಧಾರ, ಕೌಶಲ್ಯ ಅಭಿವೃದ್ಧಿ ಮತ್ತು ಕೆಲಸದ ಅವಕಾಶಗಳ ಮೇಲೆ ಗಮನಾರ್ಹ ನಿಯಂತ್ರಣ ಮತ್ತು ಪ್ರಭಾವವನ್ನು ಹೊಂದಿದ್ದರೆ, ಅದೇ ನಿಜವಾದ ಉದ್ಯೋಗದಾತ, ಮಧ್ಯಂತರ ಗುತ್ತಿಗೆದಾರನಲ್ಲ, ಎಂಬುದು ಸ್ಪಷ್ಟವಾಗುತ್ತದೆ.

ಗಿಗ್ ಅಥವಾ ಪ್ಲಾಟ್‌ಫಾರ್ಮ್ ಕೆಲಸಗಾರರ ಸ್ಥಿತಿ

ಔಪಚಾರಿಕ ಒಪ್ಪಂದಗಳಿಲ್ಲದೆ ಬೇಡಿಕೆಯಿದ್ದರೆ ಕೆಲಸ ಎಂಬುದೇ ಮುಖ್ಯ ಲಕ್ಷಣವಾಗಿರುವ ಗಿಗ್ ಆರ್ಥಿಕತೆಯು, ಉಬರ್, ಸ್ವಿಗ್ಗಿ, ಜೋಮಾಟೊ ಮತ್ತು ಇತರ ಅನೇಕ ಪ್ಲಾಟ್‌ಫಾರ್ಮ್(ವೇದಿಕೆ)–ಆಧಾರಿತ ಕಂಪನಿಗಳ ಯಶಸ್ಸಿನೊಂದಿಗೆ ವೇಗವನ್ನು ಪಡೆದುಕೊಂಡಿದೆ. 200 ಕೋಟಿಗಿಂತಲೂ ಹೆಚ್ಚು ಜನರು ಜಾಗತಿಕ ಗಿಗ್ ಕಾರ್ಮಿಕ ಪಡೆಯ ಭಾಗವಾಗಿದ್ದಾರೆ. ಇದರಲ್ಲಿ ಅಭಿವೃದ್ಧಿಶೀಲ ರಾಷ್ಟ್ರಗಳಲ್ಲಿನ ಗಿಗ್ ಕಾರ್ಮಿಕರ ಪ್ರಮಾಣವೇ ಹೆಚ್ಚು. ಭಾರತದ ಗಿಗ್ ಆರ್ಥಿಕತೆಯು 9 ಕೋಟಿ ಉದ್ಯೋಗಗಳನ್ನು ಸೃಷ್ಟಿಸಬಹುದು ಮತ್ತು ದೇಶದ ಒಟ್ಟುತ್ಪಾದನೆಗೆ ಸುಮಾರು 1.25% ದಷ್ಟು ಕೊಡುಗೆ ನೀಡುತ್ತದೆ

ಭಾರತದಲ್ಲಿನ ದೊಡ್ಡ ಗಿಗ್ ಉದ್ಯೋಗಿಗಳು ತಮ್ಮ ಕೆಲಸದ ಸ್ಥಳಕ್ಕೆ ಸಂಬಂಧಿಸಿದಂತೆ ಕಡಿಮೆ ಆದಾಯ, ದೀರ್ಘಾವಧಿಯ ಕೆಲಸದ ಸಮಯ, ಸಾಮಾಜಿಕ ಭದ್ರತೆಯ ಕೊರತೆ ಇತ್ಯಾದಿ ಬಹು ಆಯಾಮದ ಸಮಸ್ಯೆಗಳನ್ನು ಎದುರಿಸುತ್ತಾರೆ. ಆದರೆ ಕಾರ್ಮಿಕಪಡೆಯಲ್ಲಿ ಅವರ ಅಸ್ತಿತ್ವದ ಕೇಂದ್ರ ಪ್ರಶ್ನೆಯು ಅವರು ನೌಕರರೇ ಅಥವಾ ಕೆಲಸಗಾರರೇ ಎಂಬ ಪ್ರಶ್ನೆಯ ಸುತ್ತ ಸುತ್ತುತ್ತದೆ.

"ಸಾಮಾಜಿಕ ಭದ್ರತೆ 2020 ರ ಪ್ರಸ್ತಾವಿತ ಕಾರ್ಮಿಕ ಸಂಹಿತೆಯಲ್ಲಿ ಈ ನಿಟ್ಟಿನಲ್ಲಿ ಒಂದು ಪ್ರಮುಖ ಪ್ರಯತ್ನವನ್ನು ಮಾಡಲಾಗಿದೆ. ಇದು 'ಗಿಗ್ ವರ್ಕರ್' ಅನ್ನು " ಉದ್ಯೋಗದಾತ–ಉದ್ಯೋಗಿ ಸಂಬಂದದ ಹೊರಗೆ ಕೆಲಸವನ್ನು ನಿರ್ವಹಿಸುವ ಅಥವಾ ಕೆಲಸದ ವ್ಯವಸ್ಥೆಯಲ್ಲಿ ಭಾಗವಹಿಸುವ ಮತ್ತು ಅಂತಹ ಚಟುವಟಿಕೆಗಳಿಂದ ಆದಾಯ ಗಳಿಸುವ ವ್ಯಕ್ತಿ" ಎಂದು ವ್ಯಾಖ್ಯಾನಿಸುತ್ತದೆ.

'ಪ್ಲಾಟ್‌ಫಾರ್ಮ್' ಅಥವ 'ವೇದಿಕೆ' ಕೆಲಸ ಎಂಬುದನ್ನು "ಸಂಸ್ಥೆಗಳು ಅಥವಾ ವ್ಯಕ್ತಿಗಳು ನಿರ್ದಿಷ್ಟ ಸಮಸ್ಯೆಗಳನ್ನು ಪರಿಹರಿಸಲು ಅಥವಾ ನಿರ್ದಿಷ್ಟ ಸೇವೆಗಳನ್ನು ಒದಗಿಸಲು ಅಥವಾ ಇತರ ಚಟುವಟಿಕೆಗಳಿಗೆ ಇತರ ಸಂಸ್ಥೆಗಳು ಅಥವಾ ವ್ಯಕ್ತಿಗಳನ್ನು ಪಡೆಯಲು ಆನ್‌ಲೈನ್ ವೇದಿಕೆಯನ್ನು ಬಳಸುವ ಸಾಂಪ್ರದಾಯಿಕ ಉದ್ಯೋಗದಾತ–ಉದ್ಯೋಗಿ ಸಂಬಂಧದ ಹೊರಗಿನ ಕೆಲಸದ ವ್ಯವಸ್ಥೆ" ಎಂದು ವ್ಯಾಖ್ಯಾನಿಸಲಾಗಿದೆ.

ಈ ಸಂಹಿತೆ, ವೇದಿಕೆಯ ಕೆಲಸಗಾರರನ್ನು ಒಳಗೊಂಡಂತೆ ಗಿಗ್ ಕೆಲಸಗಾರರ ಅಸ್ತಿತ್ವವನ್ನು ಅಂಗೀಕರಿಸುತ್ತದೆ. ಇದು ಉದ್ಯೋಗಿಗಳು ಮತ್ತು ಗಿಗ್ ಕೆಲಸಗಾರರ ನಡುವೆ ಸ್ಪಷ್ಟವಾದ ವ್ಯತ್ಯಾಸವನ್ನು ಸ್ಥಾಪಿಸುತ್ತದೆ. ಉದ್ಯೋಗಿಗಳಿಗೆ, ಈ ಸಂಹಿತೆ ಗ್ರಾಚ್ಯುಟಿ, ಪರಿಹಾರ, ವಿಮೆ, ಭವಿಷ್ಯ ನಿಧಿ ಮತ್ತು ಹೆರಿಗೆ ಪ್ರಯೋಜನಗಳಂತಹ ವಿವಿಧ ಪ್ರಯೋಜನಗಳನ್ನು ಕಡ್ಡಾಯಗೊಳಿಸುತ್ತದೆ. ಆದರೆ, ಗಿಗ್ ಕೆಲಸಗಾರರ ವಿಷಯದಲ್ಲಿ, ಈ ಸಂಹಿತೆ ಸೂಕ್ತ ಸಾಮಾಜಿಕ ಭದ್ರತಾ ಸ್ಕೀಮುಗಳನ್ನು ರೂಪಿಸುವ ಜವಾಬ್ದಾರಿಯನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಗೆ ನಿಯೋಜಿಸುತ್ತದೆ. ಈ ಸ್ಕೀಮುಗಳ ಉದ್ದೇಶ ಜೀವನ ಮತ್ತು ವಿಕಲತೆಯಲ್ಲಿ ರಕ್ಷಣೆ, ಅಪಘಾತ ವಿಮೆ, ಆರೋಗ್ಯ ಮತ್ತು ಹೆರಿಗೆ ಪ್ರಯೋಜನಗಳು ಮತ್ತು ವೃದ್ಧಾಪ್ಯದಲ್ಲಿ ರಕ್ಷಣೆಗೆ ಸಂಬಂಧಿಸಿದ ವಿಷಯಗಳನ್ನು ಪರಿಹರಿಸುವುದು.

ಈ ಸಂದರ್ಭದಲ್ಲಿ, ಈ ವಿಷಯದ ಬಗ್ಗೆ ಸುಪ್ರೀಂ ಕೋರ್ಟ್ ನ್ಯಾಯಶಾಸ್ತ್ರದ ಸುದೀರ್ಘ ಇತಿಹಾಸವು ಅತ್ಯಂತ ಮಹತ್ವದ್ದಾಗಿದೆ. 1950 ರಿಂದ 21 ನೇ ಶತಮಾನದವರೆಗಿನ ಈ ವಿಕಾಸವನ್ನು ನಾವು ಪರಿಶೀಲನೆ ಮಾಡಿದರೆ, ನ್ಯಾಯಶಾಸ್ತ್ರದ ಪಥವು ಆದೇಶ–ವಿಧೇಯತೆಯ ಸಾಂಪ್ರದಾಯಿಕ ಕಲ್ಪನೆಯಿಂದ ಉದ್ಯೋಗಿ–ಉದ್ಯೋಗದಾತ ಸಂಬಂಧವನ್ನು ನಿರ್ಣಯಿಸಲು ಆರ್ಥಿಕ ನಿಯಂತ್ರಣದ ನಿರ್ಣಯದ ಪ್ರಶ್ನೆಯತ್ತ ತಿರುಗುತ್ತದೆ.

ಪಾಲುದಾರಿಕೆ, ಏಜೆನ್ಸಿ, ಕ್ಯಾಪ್ಟನ್ ಇತ್ಯಾದಿಗಳಂತಹ ವೇದಿಕೆಗಳು ಅಥವ ಪ್ಲಾಟ್‌ಫಾರ್ಮ್‌ಗಳು ನೀಡುವ ಅಲಂಕಾರಿಕ ನಾಮಧೇಯಗಳ ಮುಸುಕನ್ನು ನಾವು ಒಮ್ಮೆ ಸರಿಸಿದಾಗ, ಉದ್ಯೋಗದಾತರ ಮೇಲೆ ಪ್ಲಾಟ್‌ಫಾರ್ಮ್‌ಗಳಲ್ಲಿನ ಕಾರ್ಮಿಕರ ಆರ್ಥಿಕ ಅವಲಂಬನೆಯು ಪ್ರಕಟಗೊಳ್ಳುತ್ತದೆ. ಅಂತಹ ವಾಸ್ತವದಲ್ಲಿ, ಅಸ್ತಿತ್ವದಲ್ಲಿರುವ ನ್ಯಾಯಶಾಸ್ತ್ರದಲ್ಲಿ, ಕಾರ್ಮಿಕ ಕಾನೂನಿನ ಚೌಕಟ್ಟಿನಲ್ಲಿ ಗಿಗ್ ಕಾರ್ಮಿಕರಿಗೆ ಕಾರ್ಮಿಕರ ಸ್ಥಾನಮಾನವನ್ನು ನೀಡುವುದು ಅಸಮರ್ಥನೀಯವೇನೂ ಆಗುವುದಿಲ್ಲ. ಸರ್ಕಾರ ಮತ್ತು ಇತರರು ನಡೆಸಿರುವ ನಡೆದ ವಿವಿಧ ಅಧ್ಯಯನಗಳು ಈಗಾಗಲೇ ಗಿಗ್ ಮತ್ತು ಪ್ಲಾಟ್‌ಫಾರ್ಮ್ ಕೆಲಸಗಾರರ ಅಸಹನೀಯ ಕೆಲಸದ ಪರಿಸ್ಥಿತಿಗಳನ್ನು ಎತ್ತಿ ತೋರಿವೆ. 'ಕೆಲಸಗಾರ' ಎಂಬುದನ್ನು ಹೇಗೆ ವ್ಯಾಖ್ಯಾನಿಸಬೇಕು ಎಂಬುದರ ಕುರಿತು ಸುಪ್ರೀಂ ಕೋರ್ಟ್‌ನ ತೀರ್ಪುಗಳು ಭಾರತದ ಕಾರ್ಮಿಕ ಕಾನೂನುಗಳಲ್ಲಿ ಗಿಗ್ ಕಾರ್ಮಿಕರ ಹಕ್ಕುಗಳು ಮತ್ತು ಹಿತಾಸಕ್ತಿಗಳನ್ನು ರಕ್ಷಿಸುವ ಕಾನೂನು ನೀತಿಗಳನ್ನು ರಚಿಸಲು ಪ್ರಮುಖ ಬೆಳಕು ಆಗಬಹುದು.

(ಮೂಲ: ನ್ಯೂಸ್‌ಕ್ಲಿಕ್, ಆಗಸ್ಟ್ 8, 2023)

ಚಂದ್ರಯಾನ ಯೋಜನೆಯನ್ನು ಸಾಧ್ಯಗೊಳಿಸಿದ ಹೆಚ್ಇಸಿ ನೌಕರರಿಗೆ ಬಾಕಿಗಳ ಪಾವತಿ ಮತ್ತು ಇಸ್ರೋ ಸಿಬ್ಬಂದಿಯ ಬಡ್ತಿ ತಕ್ಷಣವೇ ಆಗಬೇಕು

–ಕೇಂದ್ರ ಸರಕಾರಕ್ಕೆ ಕೇಂದ್ರ ಕಾರ್ಮಿಕ ಸಂಘಟನೆಗಳ ಆಗ್ರಹ

ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳು/ಸಂಘಗಳ ವೇದಿಕೆಯು ಚಂದ್ರಯಾನ–3 ಅನ್ನು ಸಾಧ್ಯವಾಗಿಸಿದ ಎಂಜಿನಿಯರ್‌ಗಳು, ವಿಜ್ಞಾನಿಗಳು, ಸಂವಹನ ತಜ್ಞರು ಮುಂತಾದವರ ತಂಡವನ್ನು ಅಭಿವಂದಿಸುತ್ತ, ಎದೆಗುಂದದ ಅವರ ಕೆಲಸವು ಭಾರತಕ್ಕೆ ಅನೇಕ ಕ್ಷೇತ್ರಗಳಲ್ಲಿ ಮುನ್ನುಗ್ಗಲು ಅಸಂಖ್ಯಾತ ಸಾಧ್ಯತೆಗಳನ್ನು ತೆರೆದು ಕೊಟ್ಟಿದೆ ಎಂದು ಹೇಳಿದೆ.

ಆದರೆ, ಚಂದ್ರಯಾನ–3 ರ ಕಥೆಯು ತೆರೆದುಕೊಳ್ಳುತ್ತಿದ್ದಂತೆ, ಈ ಯೋಜನೆಗಾಗಿ ನಿಸ್ವಾರ್ಥವಾಗಿ ಕೆಲಸ ಮಾಡಿದವರ ಹೃದಯ ವಿದ್ರಾವಕ ಕಥೆಗಳು ಹೊರಬರುತ್ತಿವೆ ಎಂದು ವೇದಿಕೆ ಖೇದ ವ್ಯಕ್ತಪಡಿಸಿದೆ.

ಚಂದ್ರಯಾನ–3 ರ ಮೊಬೈಲ್ ಉಡಾವಣಾ ಪ್ಯಾಡ್ ಮತ್ತು ಇತರ ಪ್ರಮುಖ ಉಪಕರಣಗಳನ್ನು ವಿನ್ಯಾಸಗೊಳಿಸಿದ ಮತ್ತು ತಯಾರಿಸಿಕೊಟ್ಟ ಝಾರ್ಖಂಡ್ ನ ರಾಂಚಿಯಲ್ಲಿರುವ ಸಾರ್ವಜನಿಕ ವಲಯದ ಉದ್ದಿಮೆ "ಹೆವಿ ಇಂಜಿನಿಯರಿಂಗ್ ಕಾರ್ಪೊರೇಷನ್' (ಎಚ್ಇಸಿ)ನ ಸಾವಿರಾರು ಇಂಜಿನಿಯರ್‌ಗಳು ಮತ್ತು ಕಾರ್ಮಿಕರಿಗೆ ಕಳೆದ 17 ತಿಂಗಳಿಂದ ಹಣ ಪಾವತಿಯಾಗಿಲ್ಲ! ಇಸ್ರೋ ವಿಜ್ಞಾನಿಗಳು ಮತ್ತು ಎಂಜಿನಿಯರ್‌ಗಳು ಯಾವುದೇ ಬಡ್ತಿಗಳಿಲ್ಲದೆ ಕೆಲಸ ಮಾಡಿದ್ದಾರೆ!

ಚಂದ್ರಯಾನ–3 ಯೋಜನೆಗೆ ನಿರ್ಣಾಯಕವಾದ ಸಂಪರ್ಕ ವ್ಯವಸ್ಥೆಯನ್ನು ಮತ್ತೊಂದು ಸಾರ್ವಜನಿಕ ವಲಯದ ಉದ್ದಿಮೆಯಾದ ಬಿಎಸ್‌ಎನ್‌ಎಲ್ ಏಕಾಂಗಿಯಾಗಿ ನಿರ್ವಹಿಸಿದೆ. ಕೇಂದ್ರ ಸರ್ಕಾರವು ಉದ್ದೇಶಪೂರ್ವಕವಾಗಿಯೇ ಇದರ ಕತ್ತು ಹಿಸುಕುತ್ತಿದೆ ಎಂಬುದು ಗಮನಾರ್ಹ.

ಪ್ರಧಾನಿಗಳು ಸತ್ಯ ಒಪ್ಪಿಕೊಳ್ಳುತ್ತಾರೆಯೇ?

ಇಡೀ ಯೋಜನೆಯನ್ನು ಸಾರ್ವಜನಿಕ ವಲಯದ ಉದ್ದಿಮೆಗಳೇ ನಿರ್ವಹಿಸಿವೆ ಎಂಬುದರಲ್ಲಿ ಆಶ್ಚರ್ಯವೇನಿಲ್ಲ ಎಂದು ಕಾರ್ಮಿಕ ಸಂಘಗಳ ವೇದಿಕೆ ಹೇಳಿದೆ. ವಾಸ್ತವವಾಗಿ, ಭಾರತ ಬಿಟಿಷ್ ಆಳ್ವಿಕೆಯಿಂದ ಸ್ವತಂತ್ರಗೊಂಡಾಗ, ಉದ್ದಿಮೆಗಳು ಫಲ ನೀಡಲು ದೀರ್ಘಕಾಲ ಕಾಯಬೇಕಾದ ಕ್ಷೇತ್ರಗಳಲ್ಲಿ ಖಾಸಗಿ ವಲಯವು ಹೂಡಿಕೆ ಮಾಡಲು ಸಿದ್ಧವಾಗಲಿಲ್ಲ. ಏಕೆಂದರೆ ಅದಕ್ಕೆ ತ್ವರಿತ ಲಾಭಗಳು ಬೇಕು. ಆ ಕಾರಣಕ್ಕಾಗಿಯೇ ಭಾರತದಲ್ಲಿ ಸಾರ್ವಜನಿಕ ವಲಯ ಹುಟ್ಟಿಕೊಂಡದ್ದು, ಅಂತಹ ಉದ್ದಿಮೆಗಳು ಸಾರ್ವಜನಿಕ ವಲಯದಲ್ಲಿ ಸ್ಥಾಪಿಸಲ್ಪಟ್ಟವು ಎಂದು ಈ ಸಂದರ್ಭದಲ್ಲಿ ಕಾರ್ಮಿಕ ಸಂಘಗಳ ವೇದಿಕೆ ನೆನಪಿಸಿದೆ.

ಎಚ್ಇಸಿ ನೌಕರರ ಕಥೆಯು ಕೋವಿಡ್ ಸಾಂಕ್ರಾಮಿಕ ಸಮಯದಲ್ಲಿ ನಿಸ್ವಾರ್ಥವಾಗಿ ಕೆಲಸ ಮಾಡಿದ ಆಶಾ ಮತ್ತು ಅಂಗನವಾಡಿ ಕಾರ್ಯಕರ್ತೆಯರ ಕಥೆಯನ್ನು ನೆನಪಿಗೆ ತರುತ್ತದೆ, ಅವರು 'ಮುಂಚೂಣಿಯ ಯುದ್ಧವೀರರು" ಎಂಬ ಪ್ರಶಂಸೆಯನ್ನೇನೋ ಗಳಿಸಿದರು, ಆದರೆ ಅವರ ಶೋಚನೀಯ ಮಾಸಿಕ ಗೌರವಧನದಲ್ಲಿ ಯಾವುದೇ ಹೆಚ್ಚಳವಾಗಲಿಲ್ಲ!



ಈಗಲಾದರೂ, ಪ್ರಧಾನ ಮಂತ್ರಿಗಳು ಸತ್ಯವಂತರಾಗಿ. ಆರೋಗ್ಯವಂತ ಮಕ್ಕಳನ್ನು ಬೆಳೆಸುವುದರಿಂದ ಹಿಡಿದು ಬಾಹ್ಯಾಕಾಶವನ್ನು ಅನ್ವೇಷಿಸುವವರೆಗೆ ನಮ್ಮ ರಾಷ್ಟ್ರದ ಬೆನ್ನೆಲುಬು ಸಾರ್ವಜನಿಕ ವಲಯ ಎಂದು ಒಪ್ಪಿಕೊಳ್ಳುತ್ತಾರೆಯೇ ಎಂದು ಪ್ರಶ್ನಿಸಿರುವ ಕಾರ್ಮಿಕ ಸಂಘಗಳ ವೇದಿಕೆ, ಎಲ್ಲ ಆದ್ಯತೆಗಳನ್ನು ತಲೆಕೆಳಗಾಗಿ, ಇತ್ತ ಸಾರ್ವಜನಿಕ ವಲಯದ ಉದ್ಯೋಗಿಗಳು ಹಸಿವಿನಿಂದ ಬಳಲುತ್ತಿರುವಾಗ, ಬೃಹತ್ ಪ್ರತಿಮೆಗಳನ್ನು ಸ್ಥಾಪಿಸಲು ಅದೇ ಸಾರ್ವಜನಿಕ ವಲಯದ ಸಾವಿರಾರು ಕೋಟಿ ರೂಪಾಯಿಗಳನ್ನು ದೋಚಲಾಗುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದೆ.

ಈ ಎಲ್ಲ ನೌಕರರು, ಇಂಜಿನಿಯರುಗಳು, ವಿಜ್ಞಾನಿಗಳ ಕೊಡುಗೆಗಳನ್ನು ದೇಶ ಕೊಂಡಾಡುತ್ತಿರುವಾಗ, ಈ ಯೋಜನೆಯಲ್ಲಿ ತಮ್ಮ ಮಹತ್ವದ ಪಾತ್ರವನ್ನು ವಹಿಸಿರುವ ಇಸ್ರೋದಲ್ಲಿನ ಮತ್ತು ಇತರ ಘಟಕಗಳಲ್ಲಿನ ಇಂಜಿನಿಯರ್‌ಗಳು ಮತ್ತು ವೈಜ್ಞಾನಿಕ ಸಿಬ್ಬಂದಿಗಳಿಗೆ ಸಲ್ಲ ಬೇಕಾಗಿರುವ ಬಡ್ತಿಗಳನ್ನು ಕೊಡಬೇಕು ಮತ್ತು ಎಚ್ಇಸಿ ಉದ್ಯೋಗಿಗಳಿಗೆ ಪಾವತಿ ಮಾಡಬೇಕಾದ ಬಾಕಿಗಳನ್ನು ಕೇಂದ್ರ ಸರ್ಕಾರವು ತಕ್ಷಣವೇ ಬಿಡುಗಡೆ ಮಾಡಬೇಕೆಂದು ಕೇಂದ್ರೀಯ ಕಾರ್ಮಿಕ ಸಂಘಗಳು ಮತ್ತು ಸ್ವತಂತ್ರ ವಲಯವಾರು ಒಕ್ಕೂಟಗಳು/ಸಂಘಗಳ ವೇದಿಕೆಯು ಆಗ್ರಹಿಸಿದೆ.

ಎಐಟಿಯುಸಿ, ಸಿಐಟಿಯು, ಐಎನ್‌ಟಿಯುಸಿ, ಹೆಚ್‌ಎಂಎಸ್, ಎಐಯುಟಿಯುಸಿ, ಟಿಯುಸಿಸಿ, ಎಸ್‌ಇಡಬ್ಲ್ಯುಎ, ಎಐಸಿಸಿಟಿಯು, ಎಲ್‌ಪಿಎಫ್ ಮತ್ತು ಯುಟಿಯುಸಿ ಮುಖಂಡರು ಈ ಜಂಟಿ ಹೇಳಿಕೆಗೆ ಸಹಿ ಹಾಕಿದ್ದಾರೆ.

2ಜಿ ಹಗರಣದಲ್ಲಿ ಭಾಗಿಯಾದವರಿಗೆ ಶಿಕ್ಷೆಯಾಗಲೇ ಇಲ್ಲ..... ಪುಟ 11 ರಿಂದ

ಎಲ್ಲಾ ಕಾನೂನು ಸಹಾಯದ ಭರವಸೆ ನೀಡಿದ್ದಾರೆ ಎಂದು ಭೂಷಣ್ ಗಮನಸೆಳೆದಿದ್ದರು.

ಈ ಗಂಭೀರ ಆರೋಪಗಳ ಬಗ್ಗೆ ಮಾತನಾಡುವಾಗ, ಪ್ರಕರಣವನ್ನು ವ್ಯವಹರಿಸುವ ಹಿರಿಯ ಸಿಬಿಐ ಅಧಿಕಾರಿಯೊಬ್ಬರು "ನಮ್ಮ ತನಿಖೆಯ ಸಮಯದಲ್ಲಿ ಯಾವುದೇ ಸಮಯದಲ್ಲಿ ಈ ಅಧಿಕಾರಿಗಳು ಅನಿಲ್ ಅಂಬಾನಿ ಅವರನ್ನು ಹೆಸರಿಸಲಿಲ್ಲ, ಹೀಗಾಗಿ ಅವರನ್ನು ಮುಟ್ಟಲಿಲ್ಲ" ಎಂದು ಹೇಳಿದರೆಂದು rediff.com ವರದಿ ಮಾಡಿದೆ. ತನಿಖಾಧಿಕಾರಿಗಳು ಅನಿಲ್ ಅಂಬಾನಿಯನ್ನು ಸುದೀರ್ಘವಾಗಿ ವಿಚಾರಣೆ ನಡೆಸಿದರು ಮತ್ತು ಅವರ ವಿರುದ್ಧದ ಪ್ರಕರಣವನ್ನು ಎಚ್ಚರಿಕೆಯಿಂದ ಪರಿಶೀಲಿಸಿದರು ಎಂದು ಅಧಿಕಾರಿ ಹೇಳಿದರು ಎಂದು ಅದರ ವರದಿಯಲ್ಲಿ ಹೇಳಲಾಗಿದೆ.

ರತನ್ ಟಾಟಾ

ಟಾಟಾ ಟೆಲಿಸರ್ವಿಸಸ್ ಒಡೆಯರಾದ ರತನ್ ಟಾಟಾ ಮೇಲೂ ಹಗರಣದ ಆರೋಪ ಇತ್ತು.

ಡಿಎಂಕೆ ಅಧ್ಯಕ್ಷ ಎಂ. ಕರುಣಾನಿಧಿ ಅವರ ಕುಟುಂಬಕ್ಕೆ ಸುಮಾರು 200 ಕೋಟಿ ಮೌಲ್ಯದ ಚೆನ್ನೈನಲ್ಲಿರುವ ತಮ್ಮ ವೋಲ್ಟಾಸ್ ಭೂಮಿಯನ್ನು ಟಾಟಾ ಉಡುಗೊರೆಯಾಗಿ ನೀಡಿದ್ದಾರೆ ಎಂಬ ಆರೋಪ ಕೇಳಿಬಂದಿತ್ತು. ಕುಖ್ಯಾತ ರಾಡಿಯಾ ಟೇಪ್‌ಗಳಲ್ಲಿ ನೀರಾ ರಾಡಿಯಾ (ಪಿಆರ್ ವೃತ್ತಿಪರ ಟಾಟಾ ಲಾಬಿಸ್ಟ್) ಮತ್ತು ರಾಜತಿ ಅಮ್ಮಾಳ್ (ಕರುಣಾನಿಧಿ ಅವರ ಪತ್ನಿ ಮತ್ತು ಕನಿಮೊಳಿ ಅವರ ತಾಯಿ) ನಡುವೆ ವೋಲ್ಟಾಸ್ ಭೂ ವ್ಯವಹಾರದ ಕುರಿತು ಚರ್ಚಿಸಲಾಗಿದೆ. ಆರೋಪಿ ಹಾಗೂ ಮಾಜಿ ಟೆಲಿಕಾಂ ಸಚಿವ ಎ. ರಾಜಾ ಅವರ ದೂರಸಂಪರ್ಕ ಮತ್ತು ತರಂಗಾಂತರ ಹಂಚಿಕೆ ನೀತಿಗಳನ್ನು ಶ್ಲಾಘಿಸಿ ರತನ್ ಟಾಟಾ ಅವರು ಕರುಣಾನಿಧಿ ಅವರಿಗೆ ಪತ್ರ ಬರೆದಿದ್ದರು. ನೀರಾ ರಾಡಿಯಾ ಮೂಲಕ ಪತ್ರವನ್ನು ಹಸ್ತಾಂತರಿಸಲಾಯಿತು ಎಂಬ ಆರೋಪಗಳೂ ಕೇಳಿಬಂದಿದ್ದವು. ಆದರೆ, ಕಾನೂನು ನಿಬಂಧನೆಗಳ ಅಡಿಯಲ್ಲಿ ರತನ್ ಟಾಟಾ ವಿರುದ್ಧ ಯಾವುದೇ ಪ್ರಕರಣವನ್ನು ದಾಖಲಿಸಲಾಗುವುದಿಲ್ಲ ಎಂದು ಸಿಬಿಐ ಹೇಳಿತು.

ಉದ್ಯಮಿಗಳಿಗೆ ದೊಡ್ಡ ಮೊತ್ತದ ಹಣ

ಇಲ್ಲಿ ಆರೋಪಕ್ಕೆ ಒಳಗಾಗಿರುವ ರಾಜಕೀಯ ವ್ಯಕ್ತಿ ಎ. ರಾಜಾ ಪಡೆದ ಲಂಚದ ಹಣ 3,000 ಕೋಟಿ ರೂಪಾಯಿ ಮಾತ್ರ. ಮತ್ತಷ್ಟು ರಾಜಕೀಯ ವ್ಯಕ್ತಿಗಳಿಗೆ, ಹಗರಣದಲ್ಲಿ ಭಾಗಿಯಾದ ಅಧಿಕಾರಿಗಳಿಗೆ, ಅದಕ್ಕೆ ಸಹಕರಿಸಿದ ಮತ್ತು ಮಧ್ಯವರ್ತಿಗಳಾಗಿ ವ್ಯವಹರಿಸಿದ (ಮೀರಾ ರಾಡಿಯಾಳಂತ) ವ್ಯಕ್ತಿಗಳಿಗೆ ನೀಡಿದ ಹಣ ಸೇರಿದರೆ, ಲಂಚದ ಮೊತ್ತ ನಾಲ್ಕೈದು ಸಾವಿರ ಕೋಟಿ ರೂಪಾಯಿಗಳಾಗುತ್ತದೆ ಎಂದುಕೊಂಡರೂ, ಈ ಹಗರಣದಿಂದ ಬರುವ ಉಳಿದ ಹಣ ಉದ್ಯಮಪತಿಗಳ ಪಾಲಾಗುತ್ತದೆ. ಈ ಹಗರಣಗಳಲ್ಲಿ, ಇತರೆ ಕೆಲವು ಟೆಲಿಕಾಂ ಕಂಪನಿಗಳಲ್ಲದೆ, ರಿಲಯನ್ಸ್ ಅನಿಲ್ ದೀರೂಬಾಯಿ ಅಂಬಾನಿ ಗ್ರೂಪ್ ಮತ್ತು ಟಾಟಾ ಟೆಲಿಸರ್ವೀಸಸ್ ಕಂಪನಿಗಳೂ ಬಾಗಿಯಾಗಿವೆ ಎಂದ ಮೇಲೆ ಸರ್ಕಾರಕ್ಕೆ ವಂಚಿಸಿದ ದೊಡ್ಡ ಮೊತ್ತದ ಹಣ ಉದ್ಯಮಿಗಳ ಪಾಲಾಗಿದೆ ಎಂದೇ ಅರ್ಥ.

ಮೋದಿ ಅಧಿಕಾರಕ್ಕೆ ಬಂದ ನಂತರ

21 ಡಿಸೆಂಬರ್ 2017 ರಂದು, ಹೊಸದಿಲ್ಲಿಯ ವಿಶೇಷ ನ್ಯಾಯಾಲಯವು ಪ್ರಕರಣವನ್ನು ಕೂಲಂಕಷವಾಗಿ ಪರಿಶೀಲಿಸಿದ ನಂತರ ಮತ್ತು ಅಃಖ ಹೇಳುವುದನ್ನು ಆಲಿಸಿದ ನಂತರ, ಪ್ರಧಾನ ಆರೋಪಿಗಳಾದ ರಾಜಾ ಮತ್ತು ಕನಿಮೊಳಿ ಸೇರಿದಂತೆ 2ಉ ಸ್ಪೆಕ್ಟ್ರಮ್ ಪ್ರಕರಣದ ಎಲ್ಲಾ ಆರೋಪಿಗಳನ್ನು ಖುಲಾಸೆಗೊಳಿಸಿತು. ಈ ಪ್ರಕರಣ ನಿರಾಧಾರ ಎಂದು ನ್ಯಾಯಾಲಯ ತೀರ್ಪು ನೀಡಿದೆ. ತೀರ್ಪಿನ ಪ್ರಕಾರ, "ಕೆಲವರು ಕೆಲವು ಆಯ್ದ ಸಂಗತಿಗಳನ್ನು ಕಲಾತ್ಮಕವಾಗಿ ಜೋಡಿಸಿ ಮತ್ತು ಗುರುತಿಸಲಾಗದಷ್ಟು ವಿಷಯಗಳನ್ನು ಖಗೋಳ ಮಟ್ಟಕ್ಕೆ ಉತ್ಪ್ರೇಕ್ಷಿಸುವ ಮೂಲಕ ಹಗರಣವನ್ನು ಸೃಷ್ಟಿಸಿದರು ಎಂದು ತೀರ್ಪಿನಲ್ಲಿ ಹೇಳಲಾಗಿದೆ.

'ಆರೋಪವನ್ನು ಸಾಬೀತು ಮಾಡುವಲ್ಲಿ ಪ್ರಾಸಿಕ್ಯೂಷನ್ ವಿಫಲವಾಗಿದೆ ಎಂದು ಹೇಳಲು ನನಗೆ ಯಾವುದೇ ಹಿಂಜರಿಕೆ ಇಲ್ಲ. ಹಾಗಾಗಿ ಆರೋಪಿಗಳು ಖುಲಾಸೆಗೊಳ್ಳಲು ಅರ್ಹರಾಗಿದ್ದಾರೆ ಮತ್ತು ಹಾಗಾಗಿ ಅವರನ್ನು ಖುಲಾಸೆ ಮಾಡಲಾಗಿದೆ' ಎಂದು ನ್ಯಾಯಾದೀಶ ಶೈನಿ ಹೇಳಿದ್ದಾರೆ.!! ಹಾಗಾಗಿ, 2G ಹಗರಣಕ್ಕೆ ಭಾಗಶಃ ಫುಲ್‌ಸ್ಟಾಪ್ ಇಟ್ಟಂತಾಯ್ತು.

ದೆಹಲಿ ಹೈಕೋರ್ಟ್ ನಲ್ಲಿ ಮುಂದುವರಿದಿದೆ

19 ಮತ್ತು 20 ಮಾರ್ಚ್ 2018 ರಂದು, ಜಾರಿ ನಿರ್ದೇಶನಾಲಯ ಮತ್ತು CBI ಕ್ರಮವಾಗಿ ದೆಹಲಿ ಹೈಕೋರ್ಟ್‌ನಲ್ಲಿ ಈ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಿವೆ. ಕೇಂದ್ರೀಯ ತನಿಖಾ ದಳ (ಸಿಬಿಐ) 2ಜಿ ಸ್ಪೆಕ್ಟ್ರಂ ಹಂಚಿಕೆ ಹಗರಣ ಪ್ರಕರಣದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ದೆಹಲಿ ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದು, ಮುಂದುವರಿದ ವಿಚಾರಣೆಯ ಭಾಗವಾಗಿ ಮೇ, 2023 ರಲ್ಲಿ "(ವಿಚಾರಣಾ ನ್ಯಾಯಾಲಯ) ತೀರ್ಪಿನಲ್ಲಿ ಎದ್ದುಕಾಣುವ ಅಕ್ರಮಗಳಿವೆ ಎಂದು ನಾನು ಪ್ರದರ್ಶಿಸುತ್ತೇನೆ. ಸಿಬಿಐ ಸಲ್ಲಿಸಿದ ಸಾಕ್ಷ್ಯವನ್ನು ಕಡೆಗಣಿಸಲಾಗಿದೆ. ಸಾಕ್ಷ್ಯಾಧಾರಗಳ ಮೌಲ್ಯವು ಸಂಪೂರ್ಣವಾಗಿ ತಪ್ಪು. ತೀರ್ಪಿನಲ್ಲಿ ವಿಕೃತ ಮತ್ತು ದೋಷಗಳಿವೆ ಎಂದು ತೋರಿಸುತ್ತೇನೆ, ವಿಚಾರಣಾ ನ್ಯಾಯಾಲಯದ ತೀರ್ಪು "ತಪ್ಪು ತೀರ್ಮಾನಗಳನ್ನು" ಆಧರಿಸಿದೆ ಎಂದು ಸಿಬಿಐ ಪರವಾಗಿ ನ್ಯಾಯಾಲಯಕ್ಕೆ ಹಾಜರಾದ ವಕೀಲ ನೀರಜ್ ಜೈನ್ ವಾದ ಮಂಡಿಸಿದರು.

ಈ ಪ್ರಕರಣದ ವಿಚಾರಣೆ ಒಂದೂವರೆ ದಶಕಗಳ ನಂತರವೂ ಮುಂದುವರಿದಿದೆಯಾದರೂ, ಬಂಡವಾಳಶಾಹಿ ಹಿಡಿತದಲ್ಲಿ ಇರುವ ಈ ವ್ಯವಸ್ಥೆಯಲ್ಲಿ, ಹಗರಣದಲ್ಲಿ ಭಾಗಿಯಾದ ದೊಡ್ಡ ಉದ್ಯಮಿಗಳಿಗೆ ಶಿಕ್ಷೆಯಾಗುತ್ತದೆ ಎಂದೋ, ಅವರು ದೋಚಿದ ಲಕ್ಷಾಂತರ ಕೋಟಿ ಹಣವನ್ನು ಸರ್ಕಾರ ವಶಕ್ಕೆ ಪಡೆಯುತ್ತದೆ ಎಂದೋ ನಂಬಲಾಗದು. ಇದಕ್ಕಾಗಿ ಮತ್ತು ಮುಂದಿನ ದಿನಗಳಲ್ಲಿ ಹಗರಣಗಳು ನಡೆಯದಂತೆ ತಡೆಯಲು ಜನತೆ ದೊಡ್ಡ ಚಳುವಳಿಯನ್ನೇ ಮಾಡಬೇಕಾದೀತು. ಆ ದಿಕ್ಕಿನತ್ತ ಮುನ್ನಡೆಯೋಣ.

ಚಂದ್ರಯಾನ-3 ರ ಅಸಾಧಾರಣ ಸಾಧನೆ: ವಿಜ್ಞಾನ-ತಂತ್ರಜ್ಞಾನದಲ್ಲಿ ಸ್ವಾವಲಂಬನೆಯ ಪಥವನ್ನು ರೂಪಿಸಿದ ಕಣ್ಣೋಟಕ್ಕೆ ಸಂದ ಗೌರವ- ಜನವಿಜ್ಞಾನ ಜಾಲದ ಅಭಿನಂದನೆ



ಕೆಲವು ದೇಶಗಳು, ಕಂಪನಿಗಳು ಮತ್ತು ಇತರರು ತಮ್ಮ ಮುಂದುವರೆದ ಬಾಹ್ಯಾಕಾಶ ತಂತ್ರಜ್ಞಾನವನ್ನು ವಾಣಿಜ್ಯಕ್ಕಾಗಿ ಅಥವ ಸಾಮರಿಕ ಪ್ರಯೋಜನಕಕ್ಕಾಗಿ ಬಳಸಿಕೊಳ್ಳುವ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಕಳವಳಕಾರಿ, ಚಂದ್ರ ಮತ್ತು ಇತರ ಭೂಮಿಯೇತರ ಕಾಯಗಳು ಸಮಸ್ತ ಮಾನವಕುಲದ ಒಳಿತಿಗಾಗಿ, ಮತ್ತು ಇಂತಹ ಕಾಯಗಳಲ್ಲಿ ಕಂಡುಬರುವ ಯಾವುದೇ ಸಂಪನ್ಮೂಲವನ್ನು ಒಂದು ರಾಷ್ಟ್ರ ಅಥವ ಕಾರ್ಪೊರೇಟ್ ತನ್ನ ಸೂರೆಗಾಗಿ ಬಳಸುವುದನ್ನು ವಿರೋಧಿಸುವುದಾಗಿ ಭಾರತ ಸ್ಪಷ್ಟವಾಗಿ ಘೋಷಿಸಬೇಕು ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ.

ಅಖಿಲ ಭಾರತ ಜನವಿಜ್ಞಾನ ಜಾಲ (ಎ.ಐ.ಪಿ.ಎಸ್.ಎನ್.) ಚಂದ್ರಯಾನ-3 ಮಿಷನ್‌ನ ವಿಕ್ರಮ್ ಲ್ಯಾಂಡರ್ ಮತ್ತು ಪ್ರಜ್ಞಾನ್ ಚಂದ್ರನ ಮೇಲೆ ಯಶಸ್ವಿಯಾಗಿ ಇಳಿದಿದ್ದಕ್ಕೆ ಇಸ್ರೊ, ಮತ್ತು ಅದರ ಅಂಗ ಸಂಸ್ಥೆಗಳ ವಿಜ್ಞಾನಿಗಳು, ಎಂಜಿನಿಯರ್‌ಗಳು, ತಾಂತ್ರಿಕ ಸಿಬ್ಬಂದಿ ಮತ್ತು ಇತರ ಎಲ್ಲರನ್ನು ಮತ್ತು ಎಲ್ಲಾ ಸಂಬಂಧಿತ ಸಾರ್ವಜನಿಕ ವಲಯದ ಸಂಸ್ಥೆಗಳು, ಇತರ ಕಂಪನಿಗಳು ಮತ್ತು ಗುತ್ತಿಗೆದಾರರನ್ನು ಅಭಿನಂದಿಸಿದೆ. ಉಡಾವಣೆಯಿಂದ ಹಿಡಿದು ಚಂದ್ರನ ಕಕ್ಷೆಗೆ ಸೇರಿಸುವ ವರೆಗೆ, ಮತ್ತು ವಿಶೇಷವಾಗಿ ಚಂದ್ರನ ಮೇಲೆ ಲ್ಯಾಂಡರ್‌ನ ಸ್ವಯಂಚಾಲಿತ ಅವರೋಹಣವನ್ನು ಮಿಷನ್ ನಿಖರತೆಯಿಂದ ಕಾರ್ಯಗತಗೊಳಿಸಿರುವುದು ಅಸಾಧಾರಣ ಸಾಧನೆ ಎಂದು ಅದು ಹೇಳಿದೆ.

ನಿರ್ದಿಷ್ಟವಾಗಿ, ಇಸ್ರೊ ತಂಡ ಮತ್ತು ಸಹಯೋಗಿ ತಜ್ಞರನ್ನು ಚಂದ್ರಯಾನ-2 ರ ಸಮಯದಲ್ಲಿ ಲ್ಯಾಂಡರ್ ಪತನಕ್ಕೆ ಕಾರಣವಾದ ಅಂಶಗಳ ಬಗ್ಗೆ ಅವರು ಸಾಮೂಹಿಕ, ಪಾರದರ್ಶಕ ಮತ್ತು ಗುರಿ-ಆಧಾರಿತ ವಿಶ್ಲೇಷಣೆ ಮತ್ತು ನಂತರದ ಪರೀಕ್ಷೆ, ಹಾರ್ಡ್‌ವೇರ್ ಮತ್ತು ಸಾಫ್ಟ್‌ವೇರ್‌ಗೆ ಸಂಬಂಧಿಸಿದಂತೆ ಸರಿಪಡಿಸುವ ಕ್ರಮಗಳಿಗಾಗಿ ಎ.ಐ.ಪಿ.ಎಸ್.ಎನ್. ಅಭಿನಂದಿಸಿದೆ. ಈ ಪ್ರಕ್ರಿಯೆ ಮತ್ತು ಚಂದ್ರಯಾನ-3 ರ ಎದ್ದುಕಾಣುವ ಯಶಸ್ಸು ವೈಜ್ಞಾನಿಕ ವಿಧಾನ, ಪುರಾವೆ-ಆಧಾರಿತ ತಾರ್ಕಿಕತೆ ಮತ್ತು ಸಮಾನ ಸ್ಕಂಧರ ವಿಮರ್ಶೆಯ ಶ್ಲಾಘನೀಯ ಉದಾಹರಣೆಯಾಗಿದೆ, ಇದನ್ನು ವಿದ್ಯಾರ್ಥಿಗಳು, ಮಾಧ್ಯಮಗಳು ಮತ್ತು ಸಾರ್ವಜನಿಕರಿಗೆ ವ್ಯಾಪಕವಾಗಿ ತಿಳಿಸಿ ಹೇಳಬೇಕಾಗಿದೆ ಎಂದು ಅದು ಹೇಳಿದೆ. ಚಂದ್ರಯಾನ-3ರ ಯಶಸ್ಸು, ಸ್ವಾತಂತ್ರ್ಯಾನಂತರದ ಮೊದಲ ಕೆಲವು ದಶಕಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದಲ್ಲಿ ಸ್ವಾವಲಂಬನೆಯತ್ತ ಸಾಗುವ ಪಥವನ್ನು ರೂಪಿಸಿದ ಕಣ್ಣೋಟಕ್ಕೆ ಮತ್ತು ನಾಯಕತ್ವಕ್ಕೆ ಗೌರವ ಸಲ್ಲಿಸಿದಂತಾಗಿದೆ ಎಂದು ಎ.ಐ.ಪಿ.ಎಸ್.ಎನ್.ಹೇಳಿದೆ.

ಅನೇಕ ಅವಕಾಶಗಳು ಮತ್ತು ಸವಾಲುಗಳು

ಚಂದ್ರಯಾನ-3 ಮಿಷನ್ ಭವಿಷ್ಯದಲ್ಲಿ ಚಂದ್ರ ಮತ್ತು ಇತರ ಬಾಹ್ಯಾಕಾಶ ಕಾಯಗಳಿಗೆ ಸಿಬ್ಬಂದಿ-ರಹಿತ ಮತ್ತು ಸಿಬ್ಬಂದಿ-ಸಹಿತ ಯಾನಗಳತ್ತ ಒಂದು ಮಹತ್ವದ ಮೈಲಿಗಲ್ಲು ಎಂದು ಎ.ಐ.ಪಿ.ಎಸ್.ಎನ್. ಅಭಿಪ್ರಾಯ ಪಟ್ಟಿದೆ. ಬಾಹ್ಯಾಕಾಶ ತಂತ್ರಜ್ಞಾನಗಳಲ್ಲಿನ ಭಾರತದ ಸಾಮರ್ಥ್ಯಗಳು ಭಾರತವನ್ನು ಅಂತಹ ಕೆಲವೇ ಹೆಮ್ಮೆ ಪಡಬಹುದಾದ ರಾಷ್ಟ್ರಗಳ ಸಾಲಿನಲ್ಲಿ ಇರಿಸುತ್ತದೆ. ಅದರೊಂದಿಗೆ ಅನೇಕ ಅವಕಾಶಗಳು ಮತ್ತು ಸವಾಲುಗಳು ಬರುತ್ತವೆ. ತರುತ್ತದೆ. ಚಂದ್ರಯಾನ-3 ಮಿಷನ್‌ನ ಯಶಸ್ಸು ಚಂದ್ರನ ಅನ್ವೇಷಣೆಯಲ್ಲಿ ಅಂತರರಾಷ್ಟ್ರೀಯ ಆಸಕ್ತಿ ಹೆಚ್ಚುತ್ತಿರುವ ಸಮಯದಲ್ಲಿ ಬರುತ್ತಿದೆ. ಇದರಲ್ಲಿ ಚಂದ್ರನ ಆಚೆಯ ಅನ್ವೇಷಣೆಯ ಮಹಾದ್ವಾರಗಳಾಗಬಹುದಾದ ಚಂದ್ರನ ಮೇಲೆ ಅಥವ ಅದರ ಸುತ್ತ ತಿರುಗುವ ಶಾಶ್ವತ ಅಥವ ದೀರ್ಘಕಾಲೀನ ಸಿಬ್ಬಂದಿ- ಸಹಿತವಾದ ನಿಲ್ದಾಣಗಳನ್ನು ಸ್ಥಾಪಿಸಬಹುದಾದ ಸಂಭವವೂ ಸೇರಿದೆ. ಅಂತಹ ಭವಿಷ್ಯದ ಚಟುವಟಿಕೆಗಳು ತಮ್ಮೊಂದಿಗೆ ಮಹತ್ತರವಾದ ಜವಾಬ್ದಾರಿಗಳನ್ನು ತರುತ್ತವೆ. ಇವುಗಳಲ್ಲಿ ಭಾಗವಹಿಸಬಹುದಾದ ದೇಶವಾಗಿ ಭಾರತ ಸಮಸ್ತ ಮಾನವಕುಲದ ಪರವಾಗಿ ಅಂತಹ ಜವಾಬ್ದಾರಿಗಳನ್ನು ಹೊರಲು ತನ್ನನ್ನು ತಾನು ಸಿದ್ಧಪಡಿಸಿಕೊಳ್ಳಬೇಕು

ವಿಕ್ರಮ್ ಲ್ಯಾಂಡರ್ ನ ಯಶಸ್ವಿನ ನಂತರ ರಾಷ್ಟ್ರವನ್ನುದ್ದೇಶಿಸಿ ಮಾತನಾಡುವಾಗ ಪ್ರಧಾನಿಗಳು ಗಮನಿಸಿದಂತೆ, ಚಂದ್ರ, ನಮ್ಮ ಸೌರವ್ಯೂಹ ಮತ್ತು ಅದರಾಚೆಗಿನ ಬಾಹ್ಯಾಕಾಶ ಎಲ್ಲವೂ ಎಲ್ಲರ ಒಳಿತಿಗಗಾಗಿ, ಅದರ ಬಗ್ಗೆ ಜ್ಞಾನ ಸಮಸ್ತ ಮಾನವ ಕುಲಕ್ಕೆ ಸೇರಿದ್ದು. ಬಾಹ್ಯಾಕಾಶದ ಅನ್ವೇಷಣೆ ಮತ್ತು ಬಳಕೆಯಲ್ಲಿ ರಾಷ್ಟ್ರಗಳ ಚಟುವಟಿಕೆಗಳನ್ನು ಕುರಿತಾದ ಸೂತ್ರಗಳ ಮೇಲಿನ 1967ರ ಸಂಧಿ "ಅನ್ವೇಷಣೆ ಮತ್ತು ಬಳಕೆಯನ್ನು .. .. ಎಲ್ಲಾ ದೇಶಗಳ ಪ್ರಯೋಜನಕ್ಕಾಗಿ ಮತ್ತು ಹಿತಾಸಕ್ತಿಗಳಿಗಾಗಿ ಕೈಗೊಳ್ಳಲಾಗುತ್ತದೆ ಮತ್ತು ಅದು ಸಮಸ್ತ ಮಾನವಕುಲಕ್ಕೆ ಸೇರಿದ್ದಾಗಿರುತ್ತದೆ" ಎಂದಿದೆ. ಮುಂದುವರೆದು, "ಬಾಹ್ಯಾಕಾಶ... ಸಾರ್ವಭೌಮತೆಯ ದಾವೆಗಳ ಮೂಲಕ, ಅದನ್ನು ಆಕ್ರಮಿಸಿಕೊಳ್ಳುವ ಮೂಲಕ, ಅಥವ ಬೇರಾವುದೇ ವಿಧಾನದಲ್ಲಿ ರಾಷ್ಟ್ರೀಯ ಸ್ವಾಧೀನಕ್ಕೆ ಒಳಪಡುವುದಿಲ್ಲ" ಎಂದು ಅದು ಘೋಷಿಸಿದೆ.

ಕೆಲವು ದೇಶಗಳು, ಕಂಪನಿಗಳು ಮತ್ತು ಇತರರು ತಮ್ಮ ಮುಂದುವರೆದ ಬಾಹ್ಯಾಕಾಶ ತಂತ್ರಜ್ಞಾನವನ್ನು ವಾಣಿಜ್ಯಕ್ಕಾಗಿ ಅಥವ ಸಾಮರಿಕ ಪ್ರಯೋಜನಕಕ್ಕಾಗಿ ಬಳಸಿಕೊಳ್ಳುವ ಬಗ್ಗೆ ಮಾತನಾಡುತ್ತಿದ್ದಾರೆ. ಇದು ಕಳವಳಕಾರಿ ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ. ಯುಎಸ್ ನೇತೃತ್ವದ ಆರ್ಟೆಮಿಸ್ ಮಿಷನ್ ಈ ಸಾಧ್ಯತೆಯನ್ನು ಬಹಿರಂಗವಾಗಿಯೇ ಒಪ್ಪಿಕೊಳ್ಳುತ್ತದೆ ಮತ್ತು ದುರದೃಷ್ಟವಶಾತ್ ಭಾರತದ ಹೊಸ ಬಾಹ್ಯಾಕಾಶ ನೀತಿ ಕೂಡ ಹಾಗೆಯೇ ಹೇಳುತ್ತದೆ. ಸಾಮಾನ್ಯವಾಗಿ ಇಂತಹ ನೀತಿಗಳನ್ನು ಸಂಸತ್ತಿನಲ್ಲಿ ಮಂಡಿಸಬೇಕು, ಚರ್ಚಿಬೇಕು. ಆದರೆ ಅದನ್ನು ಇನ್ನೂ ಮಂಡಿಸಲಾಗಿಲ್ಲ ಅಥವ ,ಚರ್ಚಿಸಲಾಗಿಲ್ಲ.

ಬಾಹ್ಯಾಕಾಶ ಸಮಸ್ತ ಮಾನವಕುಲದ ಸಮಾನ ಒಳಿತಿಗಾಗಿ

ಚಂದ್ರ ಮತ್ತು ಇತರ ಭೂಮಿಯೇತರ ಕಾಯಗಳು ಸಮಸ್ತ ಮಾನವಕುಲದ ಒಳಿತಿಗಾಗಿ, ಮತ್ತು ಇಂತಹ ಕಾಯಗಳಲ್ಲಿ ಕಂಡುಬರುವ ಯಾವುದೇ ಸಂಪನ್ಮೂಲವನ್ನು ಒಂದು ರಾಷ್ಟ್ರ ಅಥವ ಕಾರ್ಪೊರೇಟ್ ತನ್ನ ಸೂರೆಗಾಗಿ ಬಳಸುವುದನ್ನು ವಿರೋಧಿಸುವುದಾಗಿ ಭಾರತ ಸ್ಪಷ್ಟವಾಗಿ ಘೋಷಿಸಬೇಕು ಎಂದು ಎ.ಐ.ಪಿ.ಎಸ್. ಎನ್. ಹೇಳಿದೆ. ಬಾಹ್ಯಾಕಾಶ ಸಂಧಿಯನ್ನು ಪುನಶ್ಚೇತನಗೊಳಿಸಬೇಕು ಮತ್ತು ಬಾಹ್ಯಾಕಾಶ ಸಮಸ್ತ ಮಾನವಕುಲದ ಸಮಾನ ಒಳಿತಿಗಾಗಿ ಇರುವಂತೆ ನೋಡಿಕೊಳ್ಳಲು ವಿಶ್ವಸಂಸ್ಥೆಯ ಅಡಿಯಲ್ಲಿ ಒಂದು ಅಂತರ್ರಾಷ್ಟ್ರೀಯ ನಿಯಂತ್ರಕ ವ್ಯಸ್ಥೆಯನ್ನು ರಚಿಸಬೇಕು ಎಂದು ಒತ್ತಾಯ ತರಬೇಕು ಎಂದೂ ಅದು ಹೇಳಿದೆ.

ಚಂದ್ರಯಾನ-3 ಇಳಿದ ಜಾಗವನ್ನು "ಶಿವಶಕ್ತಿ ಬಿಂದು" ಎಂದು ನಾಮಕರಣ ಮಾಡಿರುವುದರ ಬಗ್ಗೆ ಸರಕಾರ ಮರುವಿಚಾರ ಮಾಡುವ ಅಗತ್ಯವಿದೆ ಎಂದು ಎ.ಐ.ಪಿ.ಎಸ್.ಎನ್. ಹೇಳಿದೆ. ಏಕೆಂದರೆ ಇದು ಅಂತರ್ರಾಷ್ಟ್ರೀಯ ಖಗೋಳ ಸಂಘ (ಐಎಯು) ರೂಪಿಸಿರುವ ನಾಮಕರಣದ ರೂಢಿಗೆ ವಿರುದ್ಧವಾಗಿರುವಂತೆ ಕಾಣುತ್ತದೆ. ಅದು ಚಂದ್ರನ ವೈಶಿಷ್ಟ್ಯಗಳಿಗೆ ಗಗನಯಾತ್ರಿಗಳು ಅಥವಾ ಭೌತಶಾಸ್ತ್ರಜ್ಞರು, ಸೇರಿದಂತೆ ಈ ಕ್ಷೇತ್ರಕ್ಕೆ ಕೊಡುಗೆ ನೀಡಿದ ವಿಜ್ಞಾನಿಗಳ ಹೆಸರನ್ನು ಇಡಬೇಕು ಎಂದು ಹೇಳುತ್ತದೆ. ಉದಾ: ಆರ್ಯಭಟ, ಹೋಮಿ ಭಾಭಾ -ಇವನ್ನು ಐಎಎಯು ಈ ಹಿಂದೆ ಸ್ವೀಕರಿಸಿದೆ. ಸರಕಾರ ಐಎಯು ನಿಯಮಾವಳಿಗಳಿಗೆ ಅನುಗುಣವಾದ ಒಂದು ಹೆಸರನ್ನು ಪ್ರಸ್ತಾಪ ಮಾಡಬೇಕು, ಆಮೂಲಕ ಅದು ಅಂತರ್ರಾಷ್ಟ್ರೀಯ ಸ್ವೀಕತಿ ಪಡೆಯುವಂತಾಗಬೇಕು ಎಂದು ಎ.ಐ.ಪಿ.ಎಸ್. ಎನ್. ಸಲಹೆ ಮಾಡಿದೆ.

ರಂಗ ಸಂಪದ ಪ್ರಸ್ತುತಿ: ಲೋಕದ ಒಳ ಹೊರಗೆ.... ಪುಟ 16 ರಿಂದ

ಸಂಯಮದಿಂದ, ನಯವಾಗಿ ಕಟ್ಟಿಕೊಟ್ಟಿದ್ದಾರೆ ನಿರ್ದೇಶಕರು. ಒಂದು ಮನೆಯೊಳಗಿನ ಸಂಕೀರ್ಣ ಸಮಸ್ಯೆಗಳನ್ನು ಮತ್ತು ದೇಶದ ತಪ್ಪು ಹೋರಾಟಗಳ ಸಮಸ್ಯೆಗಳಿಗೆ ಹೋಲಿಕೆ ಮಾಡಿ, ಢೋಂಗೀ ದೇಶಭಕ್ತರು, ದೇಶ ಸೇವಕರು ಹಚ್ಚುವ ಕಿಚ್ಚಿಗೆ ಗುರಿಯಾಗುವ ಸಾಮಾನ್ಯ ಜನರು ಎಚ್ಚೆತ್ತುಗೊಳ್ಳಬೇಕಾದ ಅರಿವನ್ನು ಮೂಡಿಸುತ್ತಾರೆ.

ದೇಶದ ಪ್ರಸ್ತುತ ಕಾಲಘಟ್ಟಕ್ಕೆ, ಪರಿಸ್ಥಿತಿಗೆ ಈ ನಾಟಕಕ್ಕಿಂತ ಅತ್ಯುತ್ತಮ ಆಯ್ಕೆ ಮತ್ತೊಂದಿರಲಾರದು ಅನ್ನಿಸುತ್ತದೆ. ನಾಟಕದ ಎಲ್ಲ ಸಂಭಾಷಣೆಗಳೂ ಸಹ ಮತ್ತೆ ಮತ್ತೆ ಮೆಲಕು ಹಾಕುವಂತಹ ಸಂಭಾಷಣೆಗಳೇ ಆಗಿವೆ. ಬಹಳ ಮುಖ್ಯವಾಗಿ, "ಹರಿವ ನದಿಗೆ ಮೈಯೆಲ್ಲಾ ಕಾಲು" ಎನ್ನುವ ಧೀರ್ಘ ಸಂಭಾಷಣೆ, ಬಹಳ ಪ್ರಮುಖವಾದದ್ದು. ಈ ಸಂಭಾಷಣೆಯ ಮಾತುಗಳನ್ನು ನಾವು ಬಹಳ ವೇಳೆ, ಬೇರೆ ಬೇರೆ ಅರ್ಥದಲ್ಲಿ ಕೇಳಿದ್ದೇವೆ; ಆದರೆ, ಈ ನಾಟಕದಲ್ಲಿ ಬರುವ ಈ ಮಾತುಗಳು ಒಟ್ಟಾರೆ ನಾಟಕದ ಸಾರಾಂಶವನ್ನೂ, ಸಂದೇಶವನ್ನೂ ಒಟ್ಟಾರೆಯಾಗಿ ಕಟ್ಟಿಕೊಡುವ ಪ್ರಮುಖ ಸಂಭಾಷಣೆಯಾಗಿ ಕೇಳಿಸುತ್ತದೆ. ಅತಿ ಅವಶ್ಯವೆನಿಸುವ ಸಂಭಾಷಣೆಯಾಗಿ ಉಳಿಯುತ್ತದೆ. ಅದೇ ರೀತಿ, ಠಾಗೂರ್ ಅವರ ಗೀತಾಂಜಲಿಯನ್ನು ಬಳಸಿರುವ ರೀತಿಯೂ ವಿಭಿನ್ನವಾದದ್ದು; ನಾಟಕದ ಅಂತ್ಯಕ್ಕೆ, ದುಷ್ಟ ಶಕ್ತಿಗಳ ವಿಜೃಂಭಣೆಯ ಹಿನ್ನಲೆಯಲ್ಲಿ ಬರುವ ಗೀತಾಂಜಲಿ ಉದ್ಘೋಷವು ಬಹಳ ಪರಿಣಾಮಕಾರಿಯಾಗಿ ಮೂಡುತ್ತದೆ.

ರಂಗವಿನ್ಯಾಸ ಮತ್ತು ಸಜ್ಜಿಕೆ ನಯನ ಮನೋಹರವಾಗಿದೆ. ವೃತ್ತಿ ರಂಗಭೂಮಿಯ ಚಮಕ್‌ಅನ್ನು ಹವ್ಯಾಸಿ ರಂಗಭೂಮಿಯಲ್ಲಿ ಝುಲಕ್ ಮಾಡಿರುವ ಶಶಿ ಅಡಪಗೆ ಅಭಿಮಾನದ ಶುಭಾಷಯಗಳು. ಬೆಳಕು ಅವಶ್ಯಕತೆಗೆ ಪೂರಕವಾಗಿತ್ತು, ಆಹ್ಲಾದಕರವಾಗಿತ್ತು. ನಾಟಕದ ನಡು ನಡುವೆ ಬರುವ ಸಂಗೀತದ ಧ್ವನಿ ಸ್ವಲ್ಪ ತಗ್ಗಿದರೆ ಇನ್ನಷ್ಟು ಚೆಂದವಾಗುತ್ತದೆ;

ನಟನೆಯಲ್ಲಿ ಎಲ್ಲ ಪ್ರಮುಖ ನಟರೂ ಅತ್ಯುತ್ತಮವಾಗಿ ಅಭಿನಯಿಸಿದ್ದಾರೆ. ಅದರಲ್ಲೂ ಸಿದ್ಧಾರ್ಥ ಪಾತ್ರದ, ನಮ್ಮ ನಡುವಿನ ಹುಡುಗ ಅನೂಪ್ ಮತ್ತು ಇಂದ್ರಜಿತ್ ಪಾತ್ರದ ಧನುಷ್ ಮನಸ್ಸಿನಲ್ಲಿ ಕಾಡುತ್ತಾರೆ. ಅನೂಪ್ ರಂಗಸಂಪದದ ಹಿರಿಯ ನಟ ರಾಮಮೂರ್ತಿಯ ಮಗ; ಅನೂಪ್ ನ ಹಾವಭಾವ, ದೈಹಿಕ ಚಲನೆ ರಾಮಮೂರ್ತಿಯ ನೆನಪನ್ನು ತಂದು ಕಣ್ಣಂಚಿನಲ್ಲಿ ನೀರು ತರಿಸಿತು. ಉತ್ತಮ ಭವಿಷ್ಯದ ಅನೂಪ್ ಗೆ ಶುಭ ಹಾರೈಕೆಗಳು.

ರಂಗಸಂಪದ ತನ್ನ 50 ರ ಹರೆಯದಲ್ಲಿದೆ. ಹವ್ಯಾಸಿ ರಂಗಭೂಮಿಯ ಎಲ್ಲರ ಆತ್ಮೀಯ ತಂಡ ರಂಗಸಂಪದ. ತನ್ನ 50 ವರುಷಗಳ ಇತಿಹಾಸದಲ್ಲಿನ ಹಲವು ಪ್ರಯೋಗಗಳು ಹವ್ಯಾಸಿ ರಂಗಭೂಮಿಗೆ ದಿಕ್ಕು ತೋರುವ ಪ್ರಯೋಗಗಳೇ ಆಗಿವೆ. ರಂಗಸಂಪದದ ಕದಡಿದ ನೀರು, ಚೋಮ, ಒಡಲಾಳ ಮುಂತಾದ ಹಲವು ಪ್ರಯೋಗಗಳು ಕೇವಲ ರಂಗಪ್ರಸ್ತುತಿ ಆಗದೆ, ಸಾಮಾಜಿಕ-ವೈಚಾರಿಕ ಪ್ರಸ್ತುತಿಗಳೂ ಆಗಿವೆ; ರಂಗಸಂಪದ ತಂಡದ ಆಶಯ ನಾಟಕಗಳಾಗಿ ಮೂಡಿ ಬಂದಿವೆ; ಅಂತಹ ಪ್ರಸ್ತುತಿಗಳ ಸಾಲಿಗೆ ಸೇರುವ ಮತ್ತೊಂದು ಮುನ್ನಲೆ ನಾಟಕವೆಂದರೆ ಅದು ಲೋಕದ ಒಳ ಹೊರಗೆ. ಸುಮಾರು 15 ವರುಷಗಳ ಕಾಲ ಏನನ್ನೂ ಮಾಡದೆ ಮೌನವಾಗಿದ್ದ ರಂಗ ಸಂಪದ, ಈಗ ತನ್ನ ಮೌನವನ್ನು ಸರಿಯಾದ ಅರ್ಥದಲ್ಲಿ ಮುರಿದಿದೆ. ಲೋಕದ ಒಳ ಹೊರಗೆ ಹೆಚ್ಚು ಪ್ರಯೋಗಗಳನ್ನು ಕಾಣುವಂತಾಗಬೇಕು. ಅದು ರಂಗಸಂಪದ ತಂಡದ ಶ್ರೇಷ್ಠತೆಯನ್ನು ಮೆರೆಯಲಿಕ್ಕಾಗಿ ಅಲ್ಲ; ಬದಲಿಗೆ ಇಂದಿನ ದೇಶದ-ರಾಜ್ಯದ ಪರಿಸ್ಥಿತಿಯ ಅನಿವಾರ್ಯತೆಗಾಗಿ ಎಂದಷ್ಟೇ ಹೇಳಬಹುದು.

ಘರೆ-ಬೈರೆ ಅಂತಹ ಅತ್ಯುತ್ತಮ ಸಾಮಾಜಿಕ ಮೌಲ್ಯದ ಸಂವೇದನೆಯ ಕಾದಂಬರಿಯನ್ನು 1916ರ ಸುಮಾರಿಗೆ ಬರೆದ ಗುರುದೇವ ರವೀಂದ್ರನಾಥ ಠಾಗೂರ್ ಅವರಿಗೆ ಶಿರಬಾಗಿ ನಮನಗಳು. ಇಂತಹ ಒಂದು ಉತ್ತಮ ಕಥೆಯನ್ನು ನಾಟಕವನ್ನಾಗಿ ಪರಿವರ್ತಿಸಿ, ನಿರ್ದೇಶನ ಮಾಡಿದ ಬಿಸೂ ಬಿ. ಸುರೇಶನಿಗೆ ಸಾವಿರ ಸಲಾಮ್. . . ಲಾಲ್ ಲಾಲ್ ಸಲಾಮ್. . .

ಫೋಟೋ ಕೃಪೆ: ಕಿರಣ್ ಭಟ್. ಮತ್ತು ಕೆ.ಎಸ್.ಡಿ.ಎಲ್. ಚಂದ್ರು

NEW No. MAG(3)/NPP/205/2021-2022
JANASHAKTHI KANNADA VARA PATRIKE September 4-10, 2023 Price: Rs. 10/- Date of Publication: 1 September 2023 RNI No. KARKAN /2006/17926 Posted on 2-09-2023
Posted at BG PSO, BG - 560026 **Posted at Periodical Rate -** Rs. 2

ರಂಗ ಸಂಪದ ಪ್ರಸ್ತುತಿ: ಲೋಕದ ಒಳ ಹೊರಗೆ

ಮೂಲ ಕಾದಂಬರಿ:
ಗುರುದೇವ ರವೀಂದ್ರನಾಥ ಟಾಗೂರ್ ರ ಘರೆ–ಭೈರೆ
ಅನುವಾದ: ರಂಗಪಥ್ಯ, ನಿರ್ದೇಶನ: ಬಿ ಸುರೇಶ

ಗುಂಡಣ್ಣ
ಚಿಕ್ಕಮಗಳೂರು

ಗುರುದೇವ ರವೀಂದ್ರನಾಥ ಠಾಗೂರ್ ಅವರ ಬಹಳ ಜನಪ್ರಿಯ ಕಾದಂಬರಿ ಘರೆ–ಬೈರೆ. ಈ ಕಾವ್ಯಮಯ ಕಾದಂಬರಿಯನ್ನು ಠಾಗೂರ್ ಅವರು 1916ರಲ್ಲಿ ರಚಿಸುತ್ತಾರೆ. 1905ರಲ್ಲಿ ಬಂಗಾಲ ವಿಭಜನೆಯಾಗುತ್ತದೆ. ಇದಕ್ಕೆ ಪ್ರತಿರೋಧ ಎನ್ನುವ ರೀತಿಯಲ್ಲಿ 1905ರಿಂದ 1908ರ ವರೆಗೆ ಭಾರತ ಸ್ವಾತಂತ್ರ್ಯ ಸಂಗ್ರಾಮದ ಮತ್ತೊಂದು ಹಂತದ ಚಳುವಳಿಯಾಗಿ ಬಂಗಾಲದ ರಾಷ್ಟ್ರೀಯತಾವಾದಿಗಳು ಬಂಗಾಲ ವಿಭಜನೆಯನ್ನು ತೀವ್ರವಾಗಿ ವಿರೋಧಿಸುತ್ತಾರೆ ಮತ್ತು ಸ್ವದೇಶಿ ಚಳುವಳಿ (ಸ್ವದೇಶಿ ಆಂದೋಲನ)ವನ್ನು ಪ್ರಾರಂಭಿಸುತ್ತಾರೆ. ಥಾನು ಥಾನು ವಿದೇಶಿ ಬಟ್ಟೆಗಳನ್ನು ಅಂಗಡಿಗಳಿಂದ ಲೂಟಿ ಮಾಡಿ, ರಸ್ತೆಗೆ ತಂದು ಬೆಂಕಿ ಕೊಟ್ಟು ಸುಟ್ಟು ಹಾಕುತ್ತಿದ್ದ ಈ ಚಳುವಳಿಯ ಬಗ್ಗೆ ಅಂದಿನ ಸ್ವಾತಂತ್ರ್ಯ ಹೋರಾಟಗಾರರಲ್ಲೂ ಮತ್ತು ಕಾಂಗ್ರೆಸ್ ಪಕ್ಷದಲ್ಲೂ ಭಿನ್ನ ಅಭಿಪ್ರಾಯವಿದ್ದಿತು. ಕಾಂಗ್ರೆಸ್ ಪಕ್ಷದೊಳಗೆ ಇದ್ದ ಸಮಾಜವಾದಿಗಳು ಮತ್ತು ಕಾಂಗ್ರೆಸ್‌ನ ಹಲವು ಪ್ರಮುಖರು ಒಪ್ಪದ ಆಂದೋಲನ ಇದಾಗಿತ್ತು. ದೇಶದ ಲಕ್ಷಾಂತರ ಜನರಿಗೆ ಉಡಲು ಬಟ್ಟೆ ಇಲ್ಲದಿರುವಾಗ, ಹೀಗೆ ವಿದೇಶಿ ಬಟ್ಟೆಯ ಹೆಸರಿನಲ್ಲಿ ಲೂಟಿ ಮಾಡಿ ಅದನ್ನು ಯಾರ ಉಪಯೋಗಕ್ಕೂ ಬಾರದ ಹಾಗೆ ಸುಡುವುದು ಎಷ್ಟು ಅರ್ಥಪೂರ್ಣ ಎಂಬ ಚರ್ಚೆಯನ್ನು ಸಮಾಜವಾದಿಗಳು ಹುಟ್ಟುಹಾಕಿದರೆ, ಬಂಗಾಲದಲ್ಲಿ ವಿದೇಶಿ ಬಟ್ಟೆಗಳನ್ನು ಮಾರುತ್ತಿದ್ದ ಮುಸ್ಲಿಂ ಬಂಧುಗಳ ಅಂಗಡಿಗಳನ್ನು ಗುರಿಯಾಗಿಸಿಕೊಂಡು ಲೂಟಿ ಮಾಡುವುದು; ಹಿಂದೂ–ಮುಸ್ಲಿಂ ವಿರೋಧಿ ಬಾವನೆಗಳನ್ನು ಕಾಂಗ್ರೆಸ್ ಒಳಗೇ ಇದ್ದ ಕೆಲವು ಕೋಮುವಾದಿ ಹೋರಾಟಗಾರರು ಹುಟ್ಟುಹಾಕುತ್ತಿದ್ದುದು.


ಈ ವಿಭಜನೆ ವಿರೋಧಿ ಆಂದೋಲನವು ಆಗಸ್ಟ್ 07, 1905ರಂದು ಕಲ್ಕತ್ತಾದ ಟೌನ್‌ಹಾಲ್ ಮುಂದುಗಡೆ ಪ್ರಾರಂಭವಾಗುತ್ತದೆ. ಇಂದಿಗೆ ಸರಿಯಾಗಿ 118 ವರ್ಷಗಳು ಕಳೆದಿದೆ. ರಂಗ ಸಂಪದ, ಬಿ ಸುರೇಶ ಅವರ ನಿರ್ದೇಶನದಲ್ಲಿ ಘರೆ–ಭೈರೆ ಕಾದಂಬರಿ ಆಧಾರಿತ ನಾಟಕವನ್ನು ಆಗಸ್ಟ್ 26 ಮತ್ತು 27ರಂದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ ಪ್ರಸ್ತುತ ಪಡಿಸಿತು. ಸಮಕಾಲೀನ ಸಮಾಜೋ–ರಾಜಕೀಯ ಬೆಳವಣಿಗೆಗಳಿಗೆ ಕನ್ನಡಿ ಹಿಡಿದಿರುವಂತಹ ಒಂದು ರಂಗ ಪ್ರಸ್ತುತಿ "ಲೋಕದ ಒಳಹೊರಗೆ". ಸತ್ಯಜಿತ್ ರೇ ಅವರು ಈ ಕಾದಂಬರಿಯನ್ನು ಇದೇ ಹೆಸರಿನಲ್ಲಿ 1984ರಲ್ಲಿ ನಿರ್ದೇಶನ ಮಾಡಿ, 1985ರಲ್ಲಿ ಚಲನಚಿತ್ರವನ್ನು ಬಿಡುಗಡೆ ಮಾಡಿದರು.

ಬಂಗಾಲದ ಭದ್ರಲೋಕದ ಕೌಟುಂಬಿಕ ಕಥೆಯನ್ನು ಹೊಂದಿರುವ ಈ ಪ್ರಸ್ತುತಿ, ಛದ್ಮವೇಷದ ದೇಶಭಕ್ತರ, ಹುಸಿ ಸ್ವಾತಂತ್ರ್ಯ ಹೋರಾಟಗಾರರ ಮುಖಚಹರೆಯನ್ನೂ, ಕಪಟ ಬದಕನ್ನೂ ಬಯಲುಗೊಳಿಸುತ್ತದೆ. ಮನೆಯ ಒಳಗಡೆಯೇ ಇದ್ದುಕೊಂಡು, ದೀನ ದಲಿತರ ಸೇವೆ ಮಾಡುತ್ತೇನೆ ಎಂಬ ಹಂಬಲ ಹೊಂದಿರುವ ಸಹಸ್ರಾರು ಜನಗಳಿಗೆ ಹೊರಗಿನ ಲೋಕವನ್ನು, ಜನರನ್ನು ಅರಿಯದೆ ನೀವು ಚಳುವಳಿಗಳನ್ನು ಕಟ್ಟಲಾರಿರಿ ಎನ್ನುವ ಸಂದೇಶವನ್ನು ನೇರವಾಗಿ ಹೇಳುತ್ತದೆ.

ಕೇವಲ ಮಾತುಗಾರಿಕೆಯ ಕಲೆಯನ್ನು ಹೊಂದಿರುವ, ತಮ್ಮ ಆವೇಶ, ಆಕ್ರೋಶಭರಿತ ಭಾಷಣಗಳಿಂದ ಎಂತಹವರನ್ನೂ ಮರಳುಮಾಡಿ, ಸತ್ಯದ ತಲೆ ಹೊಡೆಯುವಂತಹ ಸುಳ್ಳುಗಳಿಂದ ಸಾಮಾನ್ಯ ಜನರನ್ನು ಮರಳುಮಾಡುವ, ಮೋಸದ ಬಲೆಗೆ ಸಿಗಿಸುವ ಢೋಂಗಿ ದೇಶಭಕ್ತರ ಮತ್ತು ಅವರ ಬಲೆಗೆ ಸಿಲುಕುವ ಪ್ರಾಮಾಣಿಕ ದೇಶಭಕ್ತರ, ಸ್ವಾತಂತ್ರ್ಯ ಹೋರಾಟಗಾರರ, ಮುಗ್ದ ಯುವ ಸಮೂಹದ ಕಥೆ ಇದಾಗಿದೆ.

ವಿಲಾಯಿತಿಯಲ್ಲಿ ಓದಿ, ಸ್ವದೇಶಕ್ಕೆ ಹಿಂದಿರುಗಿರುವ ಮನೆಯ ಯಜಮಾನ ಠಾಕೂರ್ ಸಿದ್ದಾರ್ಥ; ಮಧ್ಯಮ ವಯಸ್ಸಿನವನು. ಪ್ರಾಮಾಣಿಕ; ಸ್ವತಂತ್ರ್ಯ ಚಳುವಳಿಯಲ್ಲಿ ತೊಡಗಿಸಿಕೊಂಡಿರುವವ; ಬಡವರ ಆರ್ಥಿಕ ಏಳಿಗೆಗೆ, ಸೇವೆಗೆ ಸಮಯವನ್ನು ಕೊಟ್ಟಿರುವ ಶ್ರೀಮಂತ; ಒಂದಿಷ್ಟು ಓದಿಕೊಂಡಿರುವ, ಸಾಮಾಜಿಕ ಮೌಲ್ಯಗಳನ್ನು ವಿವರಿಸಿದರೆ ಅರ್ಥಮಾಡಿಕೊಳ್ಳುವ ಹಾಗೂ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ ಅತೀತ ಹಂಬಲದ ಶಾರದೆ ಅವನ ಮಡದಿ; ಪ್ರೀತಿ, ಪ್ರೇಮ, ಪ್ರಣಯ ಎಲ್ಲವೂ ಮೋಹಕವಾಗಿ ಸಮ್ಮಿಳಿತವಾಗಿರುವ ಕುಟುಂಬ. ವಿಲಾಯಿತಿಯಲ್ಲಿ ಓದಿದ ಕಾರಣ ಮತ್ತು ಅಂದು ಬಂಗಾಲದಲ್ಲಿ ಸ್ತ್ರೀಯರು ಸಹ ಸ್ವಾತಂತ್ರ್ಯ ಮತ್ತು ಸಾಮಾಜಿಕ ಚಳುವಳಿಗಳಲ್ಲಿ ತೊಡಗಿಸಿಕೊಳ್ಳುತ್ತಿದ್ದ ರೀತಿಯಂತೆ, ಸಿದ್ದಾರ್ಥ ಶಾರದೆಗೆ ಅವಳ ಇಚ್ಚೆಯಂತೆ ಬದುಕುವ, ಹೊರಗಿನ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳುವ, ಸ್ವತಂತ್ರವಾಗಿ ತೀರ್ಮಾನಿಸುವ ಹಕ್ಕನ್ನು ಅವಳಿಗೆ ನೀಡುತ್ತಾನೆ. ಭದ್ರಲೋಕದ ನೀತಿ ನಿಯಮಗಳನ್ನು ಮೀರದೆ, ಮನೆಯೊಳಗೆ ಇದ್ದು ಸಮಾಜ ಸೇವೆಯನ್ನು ಮಾಡುವ, ಹಂಬಲ ವ್ಯಕ್ತಪಡಿಸುವ ಶಾರದೆಗೆ, ಹೊರಗಿನ ಪ್ರಪಂಚ ಅರಿಯದೆ, ದೇಶ ಮತ್ತು ಸಾಮಾನ್ಯ ಜನರ ಬದುಕನ್ನು ಪರಿಚಯಿಸಿಕೊಳ್ಳದೆ, ಸಮಾಜಸೇವೆ ಮಾಡಲು ಸಾಧ್ಯವಾಗದು ಎಂಬ ಎಚ್ಚರಿಕೆಯ ಸಾಮಾನ್ಯ ಜ್ಞಾನದ ಮಾತುಗಳನ್ನು ಆಡುತ್ತಾನೆ ಸಿದ್ದಾರ್ಥ.

ಬಾಲ್ಯದ ಗೆಳೆಯನಾಗಿ, ಶಾಲೆಯ ವಿಧ್ಯೆಯಲ್ಲಿ ಎತ್ತರಕ್ಕೆ ಏರಲಾರದೆ, ಮಾತಿನಿಂದ ಎಲ್ಲರನ್ನೂ ಸೆಳೆಯುವ, ಅತಿ ಭಾವುಕ ವ್ಯಕ್ತಿತ್ವದ ಅವನ ಬಾಲ್ಯ ಸ್ನೇಹಿತ, ಈಗಿನ ದೇಶಭಕ್ತ ಇಂದ್ರಜಿತ್; ಶ್ರೀಮಂತರನ್ನೂ, ಅವರ ಸಿರಿವಂತಿಕೆಯನ್ನೂ ಧಿಕ್ಕರಿಸುವ, ತನ್ನ ಉಗ್ರ ಭಾಷಣಗಳಲ್ಲಿ ಅಂತಹವರ ಮೇಲೆ ದ್ವೇಷಕಾರುವ ದೇಶಭಕ್ತ ಇಂದ್ರಜಿತ್; ಬಂಗಾಲದಲ್ಲಿ ಸ್ವದೇಶಿ ಆಂದೋಲನವನ್ನು ತೀವ್ರಗೊಳಿಸುವ ಆಶಯದಿಂದ, ಸಿದ್ದಾರ್ಥ ಇಂದ್ರಜಿತ್‌ನನ್ನು ಮನೆಗೆ ಕರೆಸಿಕೊಂಡು, ಚಳುವಳಿಗಾಗಿ ಅವನ ಖರ್ಚುಗಳನ್ನು ತಾನೇ ಭರಿಸುವ ಉಮೇದು ತೋರಿಸುತ್ತಾನೆ; ನೆಲೆಯಿಲ್ಲದ ಅವನಿಗೆ ತಾನೇ ಆಶ್ರಯ ನೀಡುತ್ತಾನೆ; ಸಿದ್ದಾರ್ಥ ಅವರ ಶ್ರೀಮಂತಿಕೆಯ ಜೀವನದ ರುಚಿಯನ್ನು ಕಂಡ ಇಂದ್ರಜಿತ್‌ನ ಹೋರಾಟದ ಜೀವನಕ್ರಮ ಬದಲಾಗುತ್ತದೆ; ಮನೆಯಲ್ಲೇ ಇದ್ದುಕೊಂಡು, ವಿಲಾಸಿ ಜೀವನದ ಸುಖವನ್ನು ಉಣ್ಣುತ್ತಾ ಬೀದಿಬದಿಯ ಬಡಜನಗಳಲ್ಲಿ ಸ್ವಾತಂತ್ರ್ಯ




ಚಳುವಳಿಯ ಮಾತುಗಳ ಜೊತೆಜೊತೆಗೆ ಕೋಮು–ಜಾತಿಯ ದ್ವೇಷವನ್ನು ಹತ್ತಿಕ್ಕಿ, ಯುವಪಡೆಯನ್ನು ಹಾದಿ ತಪ್ಪಿಸುತ್ತಾನೆ. ಲೂಟಿಕೋರರನ್ನಾಗಿ ಮಾಡುತ್ತಾನೆ; ಸ್ವದೇಶಿ ಆಂದೋಲನದಲ್ಲಿ ತೊಡಗಿಕೊಳ್ಳುವ ಪ್ರಾಮಾಣಿಕ ಮನಸ್ಸಿನ ಮುಗ್ದ ಯುವಕರ ಪಡೆಯನ್ನು ಇಂದ್ರಜಿತ್ ತನ್ನ ಸ್ವಾರ್ಥಕ್ಕೆ ಬಳಸಿಕೊಳ್ಳುತ್ತಾನೆ, ಸಂಕಷ್ಟಗಳಿಗೆ ಸಿಲುಕಿಸುತಾ ್ತ ಹೋಗುತ್ತಾನೆ; ಅಂತಿಮವಾಗಿ ತನ್ನ ಬಾಲ್ಯದ ಗೆಳೆಯ ಸಿದ್ದಾರ್ಥನ ಸಿರಿತನಕ್ಕೆ ಮಾತ್ರ ಹಂಬಲಿಸುವುದಿಲ್ಲ; ಬದಲಿಗೆ, ಎಲ್ಲ ಹೆಣ್ಣುಮಕ್ಕಳನ್ನೂ ಭಾರತಮಾತೆ ಎಂದೇ ಕರೆಯುವ ಇಂದ್ರಜಿತ್, ಶಾರದೆಯ ಮೇಲೂ ದೈಹಿಕವಾಗಿ ಆಸೆಪಟ್ಟು ಅವಳನ್ನು ಅನೈತಿಕವಾಗಿ ಕೂಡುತ್ತಾನೆ. ಇವೆಲ್ಲವನ್ನೂ ಸೂಕ್ಷ್ಮವಾಗಿ ಗಮನಿಸುವ ಸಿದ್ದಾರ್ಥ, ಆಗಲೂ ಶಾರದೆಯನ್ನು ದಂಡಿಸುವ, ಅಪಮಾನಗೊಳಿಸುವ ಕ್ರಿಯೆಗೆ ಹೋಗದೆ, ಅವಳಿಗೆ ಬಿಡುಗಡೆಯನ್ನು ನೀಡುತ್ತಾನೆ; ಅವಳ ಬದುಕಿನ ಮುಂದಿನ ಆಯ್ಕೆಯ ಸ್ವಾತಂತ್ರ್ಯವನ್ನು ಅವಳಿಗೇ ನೀಡುತ್ತಾನೆ. ಅಂತಿಮವಾಗಿ, ಶಾರದೆಗೆ ಇಂದ್ರಜಿತ್‌ನ ಎಲ್ಲ ಮೋಸಗಳ ಅರಿವಾಗಿ, ತನ್ನ ಮುಗ್ದತನಕ್ಕೆ ಪಶ್ಚಾತಾಪಗೊಂಡು, ಸರಿಹಾದಿಗೆ ಮರಳುತ್ತಾಳೆ. ಇಂದ್ರಜಿತ್‌ನ ಅಡಿಯಲ್ಲಿದ್ದ ಯುವಪಡೆ, ಅವನನ್ನು ಧಿಕ್ಕರಿಸಿ, ಶಾರದೆ–ಸಿದ್ದಾರ್ಥ ಅವರ ಜೊತೆಗೂಡುತ್ತಾರೆ.

ಮೊದಲಿಗೆ ಸಿದ್ದಾರ್ಥ–ಶಾರದ ಅವರ ಪ್ರೀತಿ–ಪ್ರೇಮ ಸಂಬಂಧಗಳ ಚಿತ್ರಗಳು ಅನಾವರಣಗೊಂಡರೆ, ನಂತರದಲ್ಲಿ ಅನಾವರಣಗೊಳ್ಳುವ ಶಾರದ–ಇಂದ್ರಜಿತ್–ಠಾಕೂರ್ ಅವರ ಸಂಕೀರ್ಣ ಸಂಬಂಧಗಳು ನಾಟಕವನ್ನು ಹೆಚ್ಚು ಸಂಕೀರ್ಣಗೊಳಿಸುತ್ತದೆ. ಹರಿರಾಮ್–ಶಾರದ ಮತ್ತು ಇಂದ್ರಜಿತ್–ಸಿದ್ದಾರ್ಥ ಅವರ ನಡುವಿನ ಪ್ರತಿಯೊಂದು ಮಾತುಗಳು, ಪ್ರಸ್ತುತ ಕಾಲಘಟ್ಟದ, ಇಂದಿನ ಸಮಾಜದ ಯಾವುದೋ ಒಂದು ಘಟನೆಯನ್ನು ನೆನಪಿಸುತ್ತವೆ; ಇಂದಿನ ಢೋಂಗಿ ಸಮಾಜಸೇವಕರನ್ನೂ, ಹುಸಿ ದೇಶಭಕ್ತರನ್ನೂ ನೆನಪಿಸುತ್ತದೆ; ನಾಟಕದ ಪ್ರಸ್ತುತತೆಯನ್ನು ತೀವ್ರಗೊಳಿಸುತ್ತಾ ಹೋಗುತ್ತದೆ.

ಬಹಳ ತೀಕ್ಷ್ಣವಾದ ಸಂಭಾಷಣೆಯನ್ನು ಈ ನಾಟಕ ಹೊಂದಿದೆ ಮತ್ತು ಪ್ರತಿಯೊಂದು ಮಾತು ಸಹ ವಿಶ್ಲೇಷಣಾತ್ಮಕವಾಗಿದೆ; ಸಂಭಾಷಣೆಯ ಸಾರ, ನೋಡುವ ಪ್ರೇಕ್ಷಕರ ಕಣ್ಣಿಗೆ ಕಟ್ಟುವ ಹಾಗೆ ಅನಾವರಣಗೊಳಿಸುತ್ತದೆ; ದೇಶದೊಳಗಿನ ದಳ್ಳುರಿ ಮತ್ತು ಮನೆಯೊಳಗಿನ ಉರಿ ಎರಡನ್ನೂ ಸಮಾನಾಂತರವಾಗಿ ಪರಿಚಯಿಸುತ್ತಾ, ಎರಡೂ ಬೆಂಕಿಯ ಕೆನ್ನಾಲಿಗೆಗೆ ಸಿಲುಕಿದರೆ ಆಗುವ ಪರಿಣಾಮವು ಆಘಾತಕಾರಿ ಎನ್ನುವ ಸಂದೇಶವನ್ನು ಬಹಳ

ಪುಟ 15 ಕ್ಕೆ





JANASHAKTHI KANNADA VARA PATRIKE: Printed, Published by **U. BASAVARAJA**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**